(ಸದನವು ಪುನಃ 2, 25 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರಾದ ಶ್ರೀ ಎಸ್. ಎಂ.ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಅಧ್ಯಕ್ಷರು.—ಶ್ರೀ ಲಕ್ಕಪ್ಪನವರೆ ತಾವು ಮಾತನಾಡಿ.

ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಚರ್ಚೆಗೆ ನಮ್ಮ ಮುಂದೆ ಬಂದಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ಈ ರಾಜ್ಯ......

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೇ, ನಾನು ಪ್ರಾರಂಭ ಮಾಡಬೇಕಾಗಿತ್ತು. ನಿನ್ನೆ ನನ್ನನ್ನು ಕರೆದು ಸಭೆಯನ್ನು ಮುಂದಕ್ಕೆ ಹಾಕಿದರು. ಮಾನ್ಯ ಸದಸ್ಯರು ಈಗ ಭಾಷಣ ಪ್ರಾರಂಭ ಮಾಡಿರುವುದರಿಂದ ಅವರು ಮಾತನಾಡಿ ಮುಗಿಸಲಿ ನಾನು ಅಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು.—ನಾನು ನೋಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಈ ರಾಜ್ಯದ ...

ಶ್ರೀ ಪಿ. ಜಿ.ಆರ್. ಸಿಂಧ್ಯ:—ತಾವು ಒಂದು ನಿಮಿಷ ಯೀಲ್ಡ್ ಆಗುವುದಾದರೆ ಒಂದು ವಿಷಯ ಹೇಳಬೇಕಾಗಿದೆ.ಏನೆಂದರೆ, ಸಂಬಂಧಪಟ್ಟ ಮಂತ್ರಿಗಳನ್ನು ತಾವು ಕರೆಸಬೇಕು. ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವಾಗ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇಲ್ಲದಿದ್ದರೆ, ಮಾನ್ಯ ಸದಸ್ಯರು ಕಷ್ಟಪಟ್ಟು ತಿಳಿದುಕೊಂಡು ಬಂದು ಇಲ್ಲಿ ಚರ್ಚೆ ಮಾಡತಕ್ಕಂಥ ವಿಷಯಗಳಿಗೆ ಪರಿಹಾರ ದೊರೆತಂತಾಗುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ನಿಮ್ಮ ಕಡೆಯವರೇ ಇಲ್ಲ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾವು ಇದ್ದೇವೆ. ದಯವಿಟ್ಟು ಇದರ ಬಗ್ಗೆ ತಾವು ತಿಳಿಸಬೇಕು.ಇದು ಮೊದಲನೆಯ ಸಲ ಏನೂ ಅಲ್ಲ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಿಮಗೆ ಮಂತ್ರಿಗಳ ಉತ್ತರ ಬೇಡವೆಂದರೆ ಬೇಡ ಅವರು ಗೈರು ಹಾಜರಾಗುವುದು ನಿಮಗೆ ರುಚಿಕರ ಎನಿಸಿದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಪಟ್ಟಿಯ ಪ್ರಕಾರ ನಿನ್ನೆ ನಾನು ಮಾತನಾಡಬೇಕಾಗಿತ್ತು...

ಅಧ್ಯಕ್ಷರು.—ಶ್ರೀ ಶಿವರಾಮೇಗೌಡರು ಮುಗಿಸಿದರು ಅಂತ...

ಶ್ರೀ ವಾಟಾಳ್ ನಾಗರಾಜ್.—ನಂತರ ನನ್ನನ್ನು ಕರೆದಿದ್ದರು ಇದು ರೆಕಾರ್ಡಿನಲ್ಲಿ ಬಂದಿದೆ ಅವರು ಹೇಳಿದ ಮೇಲೆ ಬೇಕಾದರೆ ನಾನು ಮಾತನಾಡುತ್ತೇನೆ,

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಾವು ನಮ್ಮ ರಕ್ಷಣೆಗೆ ಬರಬೇಕು, ಆಡಳಿತ ಪಕ್ಷದ ಸದಸ್ಯರು ಮಂತ್ರಿಗಳು ಇಲ್ಲದಿದ್ದರೂ ಸಮಾಧಾನದಿಂದ ಹೋಗುತ್ತಾರೆ ಆದರೆ ನಾವು ಕೇಳತಕ್ಕವರು ಹೇಳಬೇಕಾದಂಥ ವಿಚಾರಗಳಿಗೆ......

(ಈ ಹಂತದಲ್ಲಿ ಕೈಗಾರಿಕೆ ಮಂತ್ರಿಗಳು ಸಭೆಗೆ ಆಗಮಿಸಿದರು)

ಒಬ್ಬರು ಮಾನ್ಯ ಸದಸ್ಯರು.—ಮಂತ್ರಿಗಳು ಬಂದರು ಬಿಡಿ.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೇ.........ನಿನ್ನೆ ನಾನು ಶುರು ಮಾಡಿದ್ದೆ............

ಅಧ್ಯಕ್ಷರು. – ಶುರು ಮಾಡಿದ್ದರೆ ನೀವೇ ಮುಗಿಸಬೇಕು, ಸರಿ, ಒಂದು ವಿಚಾರ ಹೇಳುತ್ತೇನೆ. ಜನತಾದಳದವರು ೭೫ ನಿಮಿಷ, ಕಾಂಗ್ರೆಸ್ ೮೦ ನಿಮಿಷ ಮುಸ್ಲಿಂಲೀಗ್ ೩೦ ನಿಮಿಷ ಇಂಡಿಪೆಂಡೆಂಟ್ಸ್ ೫೫ ನಿಮಿಷಆಗಿದೆ. ಆದ್ದರಿಂದ.........

ಶ್ರೀ ವಾಟಾಳ್ ನಾಗರಾಜ್.— ಇಂಡಿಪೆಂಡೆಂಟ್ ನಾನು ಒಬ್ಬನೇ......

ಅಧ್ಯಕ್ಷರು. – ಅಲ್ಲಿಗೆ ನೀವು ಎರಡೂವರೆ ನಿಮಿಷದಲ್ಲಿ ಮುಗಿಸಬೇಕು. ಐದು ಜನರ ಪರವಾಗಿ ೫೫ನಿಮಿಷ ಬಂದರೆ ದಶಮಾಂಶ ಲೆಕ್ಕದ ಪ್ರಕಾರ ಒಬ್ಬರಿಗೆ ಎಷ್ಟು ಸಮಯ ಬರುತ್ತದೆ ಎಂದು ನೀವೇ ತೀರ್ಮಾನ ಮಾಡಿಕೊಂಡು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ಈ ಕೈಗಾರಿಕೆ ನೀತಿ ಸಮಗ್ರವಾಗಿ ಬದಲಾವಣೆ ಆಗಬೇಕು. ಬಹುಶಃ ಈ ಇಲಾಖೆಗೆ ಯಾವುದೇ ಹೊಸದಾದ ಬದಲಾವಣೆ ಹೊಸ ರೂಪ ಕೊಡಲಿಕ್ಕೆ ಸರ್ಕಾರದಿಂದ ಮಾಡುವುದಕ್ಕಾಗಿಲ್ಲ. ಆದ್ದರಿಂದ

ಹೊಸ ನೀತಿಯನ್ನು ರೂಪಿಸುವುದಕ್ಕೆ ಕೈಗಾರಿಕಾ ನೀತಿಯಲ್ಲಿ ಒಂದು ಬದಲಾವಣೆ ಮಾಡಿ ಈ ರಾಜ್ಯದಲ್ಲಿ ಕಾರ್ಮಿಕವರ್ಗ ಮತ್ತು ಮಾಲೀಕರ ವರ್ಗ ಯಾವರೀತಿಯಿಂದಲೂ ತೊಂದರೆಗೆ ಸಿಕ್ಕಿದೆ ನಮ್ಮ ಕರ್ನಾಟಕ ರಾಜ್ಯಸರ್ಕಾರದ ಒಡೆತನದಲ್ಲಿರತಕ್ಕಂಥ ಕಾರ್ಖಾನೆಗಳನ್ನು ಬೇರೆಯವರಿಗೆ ಮಾರದೇ ಇರತಕ್ಕ ವ್ಯವಸ್ಥೆಯಾಗಿ ಈರಾಜ್ಯದಲ್ಲಿ ನಾವು ಸ್ಥಾಪನೆ ಮಾಡತಕ್ಕಂಥ ಕಾರ್ಖಾನೆಗಳು ಉಳಿಯಬೇಕು ಎಂಬ ಸಿದ್ಧಾಂತಕ್ಕೆ ಒಂದು ಯೋಜನೆಯನ್ನು ರೂಪಿಸತಕ್ಕದ್ದು ಮತ್ತು ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾದ್ದದು ಬಹಳ ಮುಖ್ಯವಾಗಿ ನಡೆಯಬೇಕಾಗಿದೆ ಆದರೆ ತಮಗೆ ನಾನು ಹೇಳುತ್ತಿದ್ದೇನೆ. ಇವತ್ತು ಸರ್ಕಾರದ ಕಾರ್ಖಾನೆಗಳು ಮತ್ತು ರಾಜ್ಯದಲ್ಲಿರುವ ಎಲ್ಲಾ ಕಾರ್ಖಾನೆಗಳ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

ಸುಮಾರು ಆರು ಸಾವಿರ ಕಾರ್ಖಾನೆಗಳನ್ನು ಮುಚ್ಚಿದ್ದಾರೆ. ಸಣ್ಣ ಕಾರ್ಖಾನೆಗಳು, ದೊಡ್ಡ ಕಾರ್ಖಾನೆಗಳು, ಭಾರಿ ಪ್ರಮಾಣದ ಕಾರ್ಖಾನೆಗಳು, ಕನಿಷ್ಟ ಆರು ಸಾವಿರದವರೆಗೆ ಕಾರ್ಖಾನೆಗಳನ್ನು ಮುಚ್ಚಿದ್ದಾರೆ. ಇದರಿಂದ ೫೦ ಲಕ್ಷ ಜನ ಕಾರ್ಮಿಕರು ಹೊರಗಡೆ ಇದ್ದಾರೆ. ಈ ಬಗ್ಗೆ ಸರ್ಕಾರದ ಚಿಂತನೆ ಇಲ್ಲ. ಈ ರೀತಿಯಾಗಿ ಮುಚ್ಚಿರತಕ್ಕ ಕಾರ್ಖಾನೆಗಳ ಬಗ್ಗೆ, ಈ ಕಾರ್ಖಾನೆಗಳನ್ನು ತೆಗೆಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಯೋಚನೆ ಮಾಡಿಲ್ಲ, ಈ ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವದೇ ಕಾರ್ಯಕ್ರಮವನ್ನು ಸರ್ಕಾರ ನಿರೂಪಣೆ ಮಾಡಿಲ್ಲ. ಇದು ಅತ್ಯಂತ ಶೋಚನೀಯವಾದ ವಿಚಾರ. ರಾಜಾಮಿಲ್ ಮಹಾರಾಜರ ಕಾಲದಲ್ಲಿ ಸ್ಥಾಪನೆಯಾದ, ಅತ್ಯಂತ ವೈಭವವಾದ ಮಿಲ್. ಇವತ್ತು ಅಲ್ಲಿ ಪ್ರತಿ ದಿನ ಹೊರಗಡೆ ಕಾರ್ಮಿಕರು ಕಣ್ಣೀರನ್ನು ಸುರಿಸಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಕಾರ್ಖಾನೆಯನ್ನು ಮತ್ತೆ ತೆಗೆಸುವುದಕ್ಕೆ ಯಾವುದೇ ವ್ಯವಸ್ಥೆ ಆಗಿಲ್ಲ. ಹಾಗೆಯೇ ಕೃಷ್ಣರಾಜೇಂದ್ರ ಮಿಲ್ ಕೂಡ, ಇದೇ ರೀತಿಯಾಗಿದೆ. ಅಲ್ಲಿಗೆ ಅನೇಕ ಜನ ಹೊರಗಡೆಯಿಂದ ಬಂದಂಥವರು ತಮ್ಮ ತಾಳಿಯನ್ನೇ ಮಾರಿ ಜೀವನ ಮಾಡತಕ್ಕ ಪರಿಸ್ಥಿತಿ ಬಂದಿದೆ. ಇದು ಕೃಷ್ಣರಾಜ ಒಡೆಯರ ಹೆಸರಿನಲ್ಲಿ ಸ್ಥಾಪನೆಯಾದ, ಬಹಳ ಪ್ರಮುಖವಾದಂಥ ಒಂದು ಕಾರ್ಖಾನೆ. ಇಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಈ ಮಿಲ್ಲನ್ನು ತೆಗೆಸುವುದಕ್ಕೆ ಯಾವುದೇ ರೀತಿಯ ಕಾರ್ಯಕ್ರಮ ಹಾಕಿಕೊಂಡಿಲ್ಲ. ಇವತ್ತು ಹೊಸ ಹೊಸ ಕಾರ್ಖಾನೆಗಳು ಬರುತ್ತಿವೆ, ಇವುಗಳಲ್ಲಿ ನೂರಕ್ಕೆ ಎಂಭತ್ತು ಭಾಗ, ಮಲೆಯಾಳದವರು, ಮಾರ್ವಾಡಿಗಳು, ಗುಜರಾತಿಗಳು, ಈ ಜನಗಳಿಂದಲೇ ಬರುತ್ತಿವೆ. ಇವರೆಲ್ಲರೂ ೧೦೦ಕ್ಕೆ ೯೦ ಭಾಗ ಹೊರಗಡೆಯವರನ್ನೇ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಕಾರ್ಖಾನೆ ನಮ್ಮದು, ಕೆಲಸ ಮಾತ್ರ ಸಮಗ್ರವಾಗಿ ಹೊರಗಡೆಯವರಿಗೆ ಹೋಗುತ್ತಿದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಯಾವುದೇ ಕಾರ್ಯಕ್ರಮಹಾಕಿಕೊಂಡಿರುವುದಿಲ್ಲ. ಅಲ್ಲಿಯ ಬೆರಳಚ್ಚುಗಾರರು ಕೂಡ ಹೊರಗಡೆಯವರೇ. ಕಸ ಗುಡಿಸುವವರು ಸಹ ಹೊರಗಡೆಯವರೇ ಆಗಿದ್ದಾರೆ. ದಾಂಡೇಲಿಯಲ್ಲಿ ಸ್ವಲ್ಪ ಜನರನ್ನು ಅವರ ಊರಿನಿಂದಲೇ ಕರೆದುಕೊಂಡು ಬಂದಿದ್ದಾರೆ. ಈ ರೀತಿಯಾಗಿ ಬಂದಿರತಕ್ಕ ಕಾರ್ಖಾನೆಗಳಿಗೆ, ನಮ್ಮ ವಿದ್ಯುತ್, ನೀರು ಹಣ ಕೊಟ್ಟು ಈ ಕಾರ್ಖಾನೆಗಳಲ್ಲಿ ಸೌಲಭ್ಯವನ್ನು ಮಾತ್ರ ಹೊರಗಡೆಯ ಜನಗಳಿಗೆ ಕೊಟ್ಟಿರುವುದರಿಂದ ನಮ್ಮ ಉದ್ಯೋಗಕ್ಕೆ ತೊಂದರೆಯಾಗಿದೆ ಮತ್ತು ನಮ್ಮ ಆರ್ಥಿಕ ಪರಿಸ್ಥಿತಿ ಏರುಪೇರಾಗತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ಕಾರ್ಖಾನೆಗಳ ಬಗ್ಗೆ ಹೊಸ ನೀತಿಯನ್ನು ರೂಪಿಸುವ ಬಗ್ಗೆ ಹೊರಗಡೆಯವರಿಗೆ ಎಷ್ಟು ಕಾರ್ಖಾನೆಗಳನ್ನು ಕೊಟ್ಟಿದ್ದೀರಿ. ಕನಿಷ್ಟ ೧೦ ವರ್ಷದ ಸಮಗ್ರ ತನಿಖೆಯನ್ನು ನಡೆಸತಕ್ಕ ಒಂದು ಯೋಜನೆಯನ್ನು ತಾವು ಮಾಡಿ. ಎಷ್ಟು ಕಾರ್ಖಾನೆಗಳು ಬಂದಿವೆ, ಹೊರಗಡೆಯವರಿಗೆ ಎಷ್ಟು ಜನಕ್ಕೆ ಕೊಟ್ಟಿದೆ ಎಂಬ ಬಗ್ಗೆ ಸರ್ಕಾರ ಒಂದು ಶ್ವೇತಪತ್ರವನ್ನು ಮಂಡಿಸಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಎಷ್ಟು ಶೋಚನೀಯವಾದ ಪರಿಸ್ಥಿತಿ ಒದಗಿದೆ ಎಂದು ಹೇಳಿದರೆ ಕರ್ನಾಟಕದಲ್ಲಿ ಕಾರ್ಖಾನೆ ಯಾರಿಗೆ ಬೇಕಾಗಿದೆ ? ಉದ್ಯೋಗ ನಮಗೆ ಬೇಕಾಗಿಲ್ಲ, ಬಡತನ ನಮಗೆ ಬೇಕಾಗಿಲ್ಲ. ಪ್ರತಿಯೊಂದು ಸೌಲಭ್ಯವನ್ನೂ ಹೊರಗಡೆಯವರಿಗೆ ಕೊಟ್ಟು ಅವರನ್ನು ಬೆಳೆಸತಕ್ಕ ಪರಿಸ್ಥಿತಿ ನಿರ್ಮಾಣವಾದರೆ, ನಮಗೆ ಕಾರ್ಖಾನೆಗಳು ಏಕೆ ಬೇಕು ಎನ್ನತಕ್ಕ ಪ್ರಶ್ನೆ ಬರುತ್ತದೆ. ಇವತ್ತು ಕಾರ್ಖಾನೆಗಳು ಬೆಂಗಳೂರು ನಗರದ ಸುತ್ತಮುತ್ತ ಆವರಿಸಿದೆ. ಒಂದು ಕಾಲದಲ್ಲಿ ಬೆಂಗಳೂರು ನಗರದ ಪರಿಸರ, ಬೆಂಗಳೂರು ನಗರದ ಒಂದು ಹವಾಗುಣದ ವ್ಯವಸ್ಥೆ ಅತ್ಯಂತ ಶೋಭಾಯಮಾನವಾಗಿತ್ತು. ಇದರಿಂದ ದೇಶ ವಿದೇಶಗಳಿಂದ ಬಂದ ಜನರೂ ಕೂಡ ಈ ರಾಜ್ಯದ ರಾಜಧಾನಿಯನ್ನು ಹೊಗಳಿ ಹಾಡುತ್ತಿದ್ದರು. ಮಾನ್ಯ ಕೆಂಗಲ್ ಹನುಮಂತಯ್ಯನವರನ್ನು ಇಂದು ನೆನಸಿಕೊಳ್ಳಬೇಕು, ಅವರು ಬೆಂಗಳೂರು ಬಿಟ್ಟು ಕಾರ್ಖಾನೆಗಳು ಬೇರೆ ಕಡೆಗೆ ಹೋಗಬೇಕು ಎನ್ನುವ ಮಾತನ್ನು ಅನೇಕ ಬಾರಿ ಹೇಳಿದ್ದಾರೆ, ಇವತ್ತು ಎಲ್ಲರೂ ಸೇರಿ, ಬೆಂಗಳೂರು ನಗರಕ್ಕೆ ಕಾರ್ಖಾನೆಗಳು ಬರುತ್ತಿವೆ. ಇವತ್ತು ಬೆಂಗಳೂರು

ನೆಲಮಂಗಲ, ಕನಕಪುರ, ರಾಮನಗರ, ಹೊಸಕೋಟೆ, ಹೊಸೂರು ಹೀಗೆ ಸಂಪೂರ್ಣವಾಗಿ ಎಲ್ಲಾ ದಿಕ್ಕುಗಳಲ್ಲಿಯೂ ಕೈಗಾರಿಕಾ ವ್ಯವಸ್ಥೆ, ಕೈಗಾರಿಕಾ ಪೇಟೆಗಳು ನಿರ್ಮಾಣವಾಗುತ್ತಿವೆ. ಈ ಕಾರ್ಖಾನೆಗಳಿಂದ ಬರತಕ್ಕ ಹೊಗೆಯಿಂದ ಬೆಂಗಳೂರಿನ ವಾತಾವರಣ, ಸಮಗ್ರವಾಗಿ ವಿಷದ ನಗರವನ್ನಾಗಿ ಮಾಡತಕ್ಕ ಪರಿಸ್ಥಿತಿ ನಿರ್ಮಾಣವಾಗಲಿದೆ. ಈ ಪರಿಸ್ಥಿತಿಯನ್ನು ತಡೆಯಬೇಕಾದರೆ, ಇನ್ನು ಮುಂದೆ ಬೆಂಗಳೂರು ನಗರದಲ್ಲಿ ಹಾಗೂ ಸುತ್ತಮುತ್ತ ಯಾವುದೇ ಕಾರ್ಖಾನೆಗಳನ್ನು ತೆರೆಯಲು ಅನುಮತಿ ಕೊಡಲೇ ಬಾರದು. ಕಟ್ಟುನಿಟ್ಟಾಗಿ. ಸಮಗ್ರವಾಗಿ ಇದನ್ನು ತಡೆಹಿಡಿದು, ನಿಲ್ಲಿಸತಕ್ಕ ಒಂದು ಕ್ರಮವನ್ನು, ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕು. ಮತ್ತು ಯಾವುದೇ ಕಾರ್ಖಾನೆ ಬಂದರೂ ಆ ಕಾರ್ಖಾನೆಯಲ್ಲಿ ಉದ್ಯೋಗ ನೂರಕ್ಕೆನೂರು ಭಾಗ ಮಣ್ಣಿನ ಮಕ್ಕಳಿಗೇ ಎನ್ನತಕ್ಕ ಸಿದ್ಧಾಂತವನ್ನು ಸರ್ಕಾರ ಮಾಡಬೇಕು ಇದಕ್ಕೆ ಒಂದು ಕಾನೂನನ್ನು ಮಾಡಬೇಕಾಗಿದೆ. ಇವತ್ತು ಸರೋಜಿನಿ ಮಹಿಷಿ ವರದಿ ಬಂದಿದ್ದು, ಅವರು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಸಲಹೆಗಳಲ್ಲಿ ಯಾವ ಒಂದು ಅಕ್ಷರವನ್ನೂ ಸಹ ಈ ಸರ್ಕಾರ ಪಾಲಿಸುತ್ತಾ ಇಲ್ಲ. ಈ ಪರಿಸ್ಥಿತಿ ಇರುವಾಗ ಉದ್ಯೋಗದಲ್ಲಿ ನಾವು ತೀರಾ ಹಿಂದುಳಿದಿದ್ದೇವೆ. ಈ ಉದ್ಯಮಗಳಲ್ಲಿ ಎಷ್ಟು ಜನ ಕನ್ನಡಿಗರು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಪ್ರಾಮಾಣಿಕವಾಗಿ ವಿಚಾರಣೆ ನಡೆಸಿ, ಈ ಸಭೆಯಲ್ಲಿ ಈ ಒಂದು ಚಿತ್ರವನ್ನು

ಇಡಿ. ಈಗ ಇಡಲು ಸಾಧ್ಯವಿಲ್ಲ ಎಂದರೆ ಮುಂದಿನ ಸಭೆಯಲ್ಲಾದರೂ ನಮ್ಮ ರಾಜ್ಯದಲ್ಲಿ ಎಷ್ಟು ಹೊಸ ಕಾರ್ಖಾನೆಗಳು ಬಂದಿವೆ, ಎಷ್ಟು ಜನ ಕನ್ನಡಿಗರು ಕೆಲಸದಲ್ಲಿದ್ದಾರೆ ಎಂಬುದರ ವಿವರಗಳನ್ನು ಈ ಸಭೆಯ ಮುಂದೆ ಇಡಿ. ಈ ಕಾರ್ಖಾನೆಗಳ ಪರವಾಗಿ ಎಲ್ಲಾ ವ್ಯವಹಾರ ನಡೆಯುವುದು ಬೊಂಬಾಯಿನ ಪಂಚತಾರ ಹೋಟಿಲ್‌ಗಳಲ್ಲಿ. ಅಲ್ಲೇ ಕುಳಿತು ಎಲ್ಲಾ ವ್ಯವಹಾರ ಮಾಡಿ ಅಲ್ಲೇ ಅನುಮತಿ ಕೊಟ್ಟು ಬರುತ್ತಾರೆ. ನಮ್ಮ ರಾಜ್ಯದಲ್ಲಿ ಕಾರ್ಖಾನೆಯಾಗಬೇಕೆನ್ನುವುದಕ್ಕೆ ಬೊಂಬಾಯಿನ ಪಂಚತಾರಾ ಹೋಟೆಲ್‌ನಲ್ಲಿ ಕುಳಿತು ಮಾತನಾಡಿ ಅನುಮತಿ ಕೊಡುತ್ತಿದ್ದಾರೆ. ನಮ್ಮ ರಾಜ್ಯ ಸುಭದ್ರವಾದಂಥ ಸುಂದರವಾದ ರಾಜ್ಯ. ರೇಷ್ಮೆ, ಗಂಧ, ಚಿನ್ನ ಈ ರಾಜ್ಯದಲ್ಲಿ ಒಂದೇ, ನೂರೆಂಟು ತರಹ ವೈವಿಧ್ಯಮಯವಾದ ಸಂಪದ್ಭರಿತವಾದ ಈ ನಾಡು ಇವತ್ತು ಸಮಗ್ರವಾಗಿ ಟೊಳ್ಳಾಗುತ್ತಿದೆ. ನಮ್ಮಲ್ಲಿ ಬೆಳೆಯುತಕ್ಕಂಥ ಗಂಧ ಬಹುಶಃ ಇಂಡಿಯಾ ದೇಶದಲ್ಲಿ ಎಲ್ಲೂ ಇಲ್ಲ. ನಮ್ಮಲ್ಲಿ ಬೆಳೆಯುತಕ್ಕಂಥ ಗಂಧ ಕಳ್ಳಸಾಗಣಿಕೆಯಾಗಿ ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಅಮೇಥಿಯಲ್ಲಿ ಗಂಧದ ಸಾಬೂನಿನ ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಗಂಧದ ಎಣ್ಣೆ, ಗಂಧದ ಸಾಬೂನಿನ ಕಾರ್ಖಾನೆಯನ್ನು ಮುಚ್ಚುತ್ತಿದ್ದೇವೆ. ವ್ಯಾಪಾರ ಮಾಡುತ್ತಿದ್ದಾರೆ. ಈ ಕನ್ನಡ ನಾಡು. ಗಂಧದ ನಾಡು ಆದರೆ ಗಂಧದ ವಾಸನೆ ಇಲ್ಲಿ ಇಲ್ಲ ಆ ವಾಸನೆಯೆಲ್ಲಾ ಉತ್ತರದಲ್ಲಿದೆ. ಗಂಧದ ವಾಸನೆ ಎಲ್ಲಿರಬೇಕಾಗಿತ್ತೋ ಅಲ್ಲಿಲ್ಲ. ಇಂತಹ ಪರಿಸ್ಥಿತಿ ಉದ್ಭವವಾಗಿದೆ. ನಮ್ಮ ನಾಡಿನಲ್ಲಿ ಕೈಗಾರಿಕಾ ನೀತಿ ಡೋಲಾಯಮಾನವಾಗಿದೆ. ಕೈಗಾರಿಕಾ ನೀತಿ ಏನಿದ್ದರೂ ಒಂದು ವ್ಯವಹಾರವಾಗಿದೆ, ಒಂದು ವ್ಯಾಪಾರವಾಗಿದೆ. ಈ ರಾಜ್ಯದಲ್ಲಿ ಕೈಗಾರಿಕೆಗಳು ಸಮಗ್ರವಾಗಿ ಬೆಳೆಯಬೇಕೆಂಬುವಕ್ಕಿಂತ ಹೆಚ್ಚಾಗಿ ಒಂದು ವ್ಯಾಪಾರದ ಮಟ್ಟಕ್ಕೆ ಕೈಗಾರಿಕಾ ನೀತಿ ಬಂದಿದೆ. ಯಾರೋ ಕಟ್ಟಿ ಬೆಳೆಸಿದಂಥ ಕಾರ್ಖಾನೆಗಳನ್ನು ರಾತ್ರೋ ರಾತ್ರಿ ಪಂಚತಾರಾ ಹೋಟೆಲ್‌ನಲ್ಲಿ ಕುಳಿತುಕೊಂಡು ಮಾರಿದ್ದಾರೆ. ಕೇವಲ ಒಂದು ರೂಪಾಯಿಗೆ ಒಂದು ಕಾರ್ಖಾನೆ ಮಾರಿದಂಥ ವಿಷಯ ಈ ಸಭೆಯಲ್ಲಿ ಬಂದಿತ್ತು, ಒಂದು ರೂಪಾಯಿಗೆ ಕಾರ್ಖಾನೆ ಮಾರಿದತಕ್ಕಂಥ ನಿದರ್ಶನ ಇದೆ. ಇವೆಲ್ಲಾ ನೋಡಿದಾಗ ಈ ರಾಜ್ಯದಲ್ಲಿ ಕೈಗಾರಿಕಾ ನೀತಿ ಸಮಗ್ರವಾಗಿ ಬದಲಾಗಬೇಕಾಗಿದೆ, ಕೈಗಾರಿಕೆಗಳು ಬೇರೂರಬೇಕಾಗಿದೆ ಮತ್ತು ಕೈಗಾರಿಕೆಯನ್ನು ವಿಕೇಂದ್ರೀಕರಣ ಮಾಡಬೇಕು. ಬೆಂಗಳೂರಿನಲ್ಲಿ ಕೇಂದ್ರೀಕರಿಸದೆ, ತಾಲ್ಲೂಕು ಮಟ್ಟಕ್ಕೆ ಈ ಕೈಗಾರಿಕೆಗಳು ಹೋಗಬೇಕು. ಅಲ್ಲಿ ಉದ್ಯೋಗಕ್ಕೆ ಅತೀ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಅದಕ್ಕಾಗಿ ಒಂದು ಹೊಸ ರೂಪವನ್ನು ಕೊಡಲು ಒಂದು ಹೊಸ ಸೂತ್ರವನ್ನು ಅಳವಡಿಸಲು ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಕಾರ್ಖಾನೆಗಳಿಗೆ ಹಣವನ್ನು ಕೊಡುವಾಗ ನಮ್ಮ ಕರ್ನಾಟಕ ರಾಜ್ಯದ ಹಣಕಾಸು ಸಂಸ್ಥೆ ಎಷ್ಟು ಜನ

ಕನ್ನಡಿಗರಿಗೆ ಹಣ ಕೊಟ್ಟಿದೆ ಎಂಬ ದನ್ನು ಹೇಳಬೇಕು. ಕನ್ನಡಿಗರು ಮುಂದೆ ಬರುವುದಿಲ್ಲ, ಹಣ ಕೇಳುವುದಕ್ಕೆ ಬರುವುದಿಲ್ಲ, ಕಾರ್ಖಾನೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ. ಎಷ್ಟು ಕೈಗಾರಿಕಾ ಷೆಡ್‌ಗಳನ್ನು ಕನ್ನಡಿಗರಿಗೆ ಕೊಟ್ಟಿದ್ದೀರಿ. ಎಂಬುದನ್ನು ಹೇಳಿ ಸ್ವಾಮಿ ತಾವೇ ಆತ್ಮಶೋಧನೆ ಮಾಡಿಕೊಳ್ಳಿ. ಕೈಗಾರಿಕೆಗಳನ್ನು ಮಾಡಬೇಕೆಂದಿರುವವರಿಗೆ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ಹೇಳಿ. ಯಾರಿಗೂ ಇಲ್ಲ. ಕರ್ನಾಟಕದ ಹೆಸರು ಕರ್ನಾಟಕದ ನೆಲ ಕರ್ನಾಟಕದ ಜನ, ಕರ್ನಾಟಕದ ವಿದ್ಯುಚ್ಛಕ್ತಿ, ಆದರೆ ಸಂಪಾದನೆ ಬೇರೆಯವರದ್ದು. ಮಹತಾ ಗ್ರೂಪ್ ಎಂದು ಇದೆ,

ವರ್ಷಕ್ಕೆ ಒಂದು ಹೊಸ ಕಾರ್ಖಾನೆ ಸ್ಥಾಪನೆ ಮಾಡುತ್ತಾರೆ. ಉದ್ಘಾಟನೆಗೆ ರಾಷ್ಟ್ರಪತಿಗಳನ್ನು ಕರೆದು ಕೊಂಡು ಬರುತ್ತಾರೆ. ಉದ್ಘಾಟನೆ ಮಾಡಿಸುತ್ತಾರೆ, ಕೊನೆಗೆ ಮುಚ್ಚುತ್ತಾರೆ. ಉದ್ಘಾಟನೆ ಮಾಡುತ್ತಾರೆ ಮುಚ್ಚುತ್ತಾರೆ. ಅವರೆಲ್ಲಾ ಸದಾಶಿವನಗರದಲ್ಲಿ ಬಿಡಾರ ಮಾಡಿರುತ್ತಾರೆ. ಯಾರು ಮೋಸಗಾರರು ಇದ್ದಾರೆ ಅವರೆಲ್ಲಾ ಸದಾಶಿವನಗರದಲ್ಲಿದ್ದಾರೆ. ಇವರೆಲ್ಲರೂ ನಿಮ್ಮ ಕಣ್ಣಿಗೆ ಕಾಣುವುದಿಲ್ಲವೇ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಚಾಮುಂಡಿ ಮೊಪೆಡ್ಸ್ ಮುಚ್ಚಿದ್ದು ಮತ್ತೆ ಅದರ ಬಾಗಿಲು ತೆಗೆಯಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಚಾಮುಂಡಿ ಮೊಪೆಡ್ಸ್ ತೆಗೆಯಲೇ ಇಲ್ಲ. ಅಲ್ಲಿನ ಕಾರ್ಮಿಕರು ಬೀದಿಗೆ ಹೋದರು. ಮಾಲೀಕರ ಪರವಾಗಿ ತಾವು ಇದ್ದೀರಿ ಇದು ಸರಿಯಲ್ಲ. ಇದು ಸರಿಯಾದ ನೀತಿ ಅಲ್ಲ. ಈ ನೀತಿ ಮುಂದುವರಿಯುವುದಾದರೆ ನಮ್ಮ ಕೈಗಾರಿಕೆಗಳು ಮುಚ್ಚಿಕೊಂಡು ಹೋಗುತ್ತವೆ. ಮೈಸೂರು ಗಂಧದ ಸಾಬೂನು ಇಡೀ ಪ್ರಪಂಚದಲ್ಲೇ ಅತ್ಯಂತ ಹೆಸರುವಾಸಿ ಯಾದುದು. ಆ ಗಂಧದ ಸಾಬೂನಿನ ಕಾರ್ಖಾನೆ ಮುಚ್ಚಿ, ಇವತ್ತು ಕಾರ್ಮಿಕರು ಬೀದಿ ಪಾಲಾಗುವ ಪರಿಸ್ಥಿತಿ ಬಂದಿದೆ. ಈ ಸಾಬೂನಿನ ಕಾರ್ಖಾನೆ ಮುಚ್ಚುವುದಾದರೆ ಕರ್ನಾಟಕದ ಎರಡು ಕಣ್ಣುಗಳನ್ನು ಕಿತ್ತುಕೊಂಡಹಾಗೆ ಆಗುತ್ತದೆ.

ಕರ್ನಾಟಕ ಎರಡು ನೇತ್ರಗಳನ್ನು ಕಿತ್ತದ್ದು ಪರಿಸ್ಥಿತಿ ಬರುತ್ತದೆ. ಆದ್ದರಿಂದ ದಯಮಾಡಿ ನೀವು ಕರ್ನಾಟಕದ ಹಿತವನ್ನು ಕಾಪಾಡುವುದಕ್ಕೆ ಹೊರಗಡೆಯಿಂದ ಬರುವವರಿಗೆ ಕಾರ್ಖಾನೆಗಳನ್ನು ತೆರೆಯಲು ಅನುಮತಿ ಕೊಡಬೇಡಿ. ನಮ್ಮ ಕೋಟಾ ಪರ್ಮಿಟ್‌ಗಳು ಬೇರೆರಾಜ್ಯದವರಿಗೆ ಹೋಗಿವೆ ಕರ್ನಾಟಕ ದಲ್ಲಿ ಈಗ ಕಾರ್ಖಾನೆಗಳನ್ನು ಪ್ರಾರಂಭ ಮಾಡಲು ಬರುವ ಜನಗಳು ಹೆಚ್ಚಾಗಿ ಯಾರ್ಯಾರು ಎಂದರೆ ಮಾರವಾಡಿಗಳು ಗುಜರಾತಿಗಳು ಮತ್ತು ಸಿಂಧಿಗಳು ಬೆಂಗಳೂರು ನಗರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಮಾರವಾಡಿಗಳು ಸಿಂಧಿಗಳು ಮತ್ತು ಗುಜರಾತಿಗಳು ಒಂದು ರೀತಿಯಾಗಿ ಬೇರೆ ರಾಜ್ಯವನ್ನಾಗಿ ಪರಿವರ್ತನೆ ಮಾಡುವಂತಹ ನಗರ ಬೆಂಗಳೂರು ನಗರ ಆಗಿದೆ, ಮತ್ತು ಕರ್ನಾಟಕ ರಾಜ್ಯ ಆಗಿದೆ. ಆದ್ದರಿಂದ ಇವತ್ತು ಕೈಗಾರಿಕೆಗಳನ್ನು ಗಡಿ ಪ್ರಾಂತ್ಯದಲ್ಲಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವವರು ಯಾರು? ನಮ್ಮ ಚಾಮರಾಜನಗರದಲ್ಲಿ ಎರಡು ಕಾರ್ಖಾನೆಗಳು ಇವೆ. ಆ ಎರಡು ಕಾರ್ಖಾನೆಗಳು ಯಾರವು? ಆ ಎರಡು ಕಾರ್ಖಾನೆಗಳು ತಮಿಳು ನಾಡಿನ ಜನರದ್ದು ಬೆಳಗಾಂನಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಎಂದು ಒಂದೇ ಸಮನೆ ಹೇಳುತ್ತಿದ್ದೇವೆ. ಬೆಳಗಾಂನಲ್ಲಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ಸರ್ಕಾರ ತಯಾರು ಇಲ್ಲ. ಹೊರಗಡೆಯಿಂದ ಬಂದಂತಹವರಿಗೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಮತ್ತು ಬೆಂಬಲ ಕೊಡತಕ್ಕಂಥಾದ್ದು ಅತ್ಯಂತ ಶೋಚನೀ ಯವಾದ ಪರಿಸ್ಥಿತಿ ಎನ್ನುವ ಮಾತನ್ನು ನಾನು ತಮ್ಮ ಮುಖೇನ ಸರ್ಕಾರಕ್ಕೆ ಕಳಕಳಿಯಿಂದ ಹೇಳು ತ್ತಿದ್ದೇನೆ. ಇನ್ನು ನಮ್ಮ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಇದೆ. ಈ ನಮ್ಮ ವಿದ್ಯುಚ್ಛಕ್ತಿ ಮಂಡ ಲಿಯಲ್ಲಿ ಯಾರಿಗಾದರೂ ಬಹುಶಃ ಮನುಷ್ಯತ್ವ ಇದೆಯೋ ಇಲ್ಲವೋ ಗೊತ್ತಿಲ್ಲ. ನಾವು ಯಾರಾದರೂ ಅವರನ್ನು ಮನುಷ್ಯರು ಎಂದು ತಿಳಿದುಕೊಂಡಿದ್ದರೆ ನಮಗೆ ಖಂಡಿತವಾಗಿ ಆ ಮಂಡಳಿಯಿಂದ ಗೌರವ ತರತಕ್ಕಂಥ ಮಂಡಲಿ ಅಲ್ಲ. ಒಂದು ಇಲ್ಲಿ ಯಾರ್ಯಾರಿಗೆ ವಿದ್ಯುಚ್ಛಕ್ತಿ ಕೊಡುತ್ತಾರೆ ಎನ್ನುವುದನ್ನು ಹೇಳಲು ಆಮೇಲೆ ಬರುತ್ತೇನೆ. ಇವರು ಯಾವಾಗ ವಿದ್ಯುತ್ ದೀಪ ಹಚ್ಚುತ್ತಾರೆ ಯಾವಾಗ ದೀಪ ತೆಗೆಯುತ್ತಾರೆ, ಇದು ಯಾರ ಇಚ್ಛೆ ತಕ್ಷಣ ದೀಪ ಬರುತ್ತದೆ ತಕ್ಷಣ ದೀಪ ಹೋಗುತ್ತದೆ ಇದಕ್ಕೇನು ಒಂದು ಬೆಲೆ ಬೇಡವೆ ? ನಾವು ಯಾರನ್ನು ಕೇಳಬೇಕು ಇವರ ನೀತಿ ಏನು ? ಇದಕ್ಕೆ ಒಂದು ನೀತಿ ನಿರೂಪಣೆ ಬೇಡವೇ ? ಸುಮಾರು ೬೦ ಸಾವಿರಕ್ಕೂ ಹೆಚ್ಚು ನೀರಾವರಿ ಕೊಳವೇ ಬಾವಿಗಳಿಗೆ ವಿದ್ಯುತ್ ಬೇಕೆಂದು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಇದೆ. ನಿಮಗೆ ಮನುಷ್ಯತ್ವ ಇದೆಯೋ ಮನಸ್ಸು ಇದೆಯೋ, ಹೃದಯ ಇದೆಯೋ ಇಲ್ಲವೂ ಎನ್ನುವ ಮಾತನ್ನು ನಾನು ಕೇಳಬೇಕಾಗುತ್ತದೆ. ಇಲ್ಲಿ ತಾವೆಲ್ಲರೂ ಹೇಳುತ್ತೀರಿ ನಾವೆಲ್ಲ ರೈತರ ಪರವಾಗಿದ್ದೇವೆ ಎಂದು ನಾವೆಲ್ಲ ರೈತರ ಮಕ್ಕಳು ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಕಡೆ ವಿರೋಧ ಪಕ್ಷದವರು ಸಹ ರೈತರ ಮಕ್ಕಳೇ ಎಂದು ಹೇಳುತ್ತಾರೆ ಆದರೆ ಸುಮಾರು ೬೦ ಸಾವಿರಕ್ಕೂ ಹೆಚ್ಚು ಅರ್ಜಿಗಳು ತಮ್ಮ ಕೊಳವೇ ಬಾವಿಗಳಿಗೆ ವಿದ್ಯುತ್‌ಚ್ಛಕ್ತಿ ಬೇಕೆಂದು ಅರ್ಜಿ ಸಲ್ಲಿಸಿದ್ದರೂ ಸಹ ಇವತ್ತಿನವರೆವಿಗೂ ಅವರಿಗೆ ವಿದ್ಯುಚ್ಛಕ್ತಿ ಕಲ್ಪಿಸಿ ಕೊಟ್ಟಿಲ್ಲ ಇದಕ್ಕೆ ನಾವೆಲ್ಲ ನಾಚಿಕೆಪಡಬೇಕು. ನಾವು ಯಾವ ರಾಜ್ಯದಲ್ಲಿಯೂ ಇಂತಹ ಪರಿಸ್ಥಿತಿಯನ್ನು ಕಾಣುತ್ತಿಲ್ಲ ಎನ್ನುವ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ಇವತ್ತು ನಾನು ಹೇಳುತ್ತೇನೆ. ಕಾರ್ಖಾನೆಗಳಿಗೆ ಕೊಡತಕ್ಕಂಥ ವಿದ್ಯುಚ್ಛಕ್ತಿಯನ್ನು ನಾವು ಕೆಲವು ಪ್ರಮಾಣದಲ್ಲಿ ಕೆಲವು ವರ್ಗದ ಕಾರ್ಖಾನೆಗಳಿಗೆ ನಿಲ್ಲಿಸಿದರೂ ಚಿಂತೆ ಇಲ್ಲ, ಸಮಗ್ರವಾಗಿ ನೀರಾವರಿ ಪಂಪ್‌ಸೆಟ್‌ಗಳಿಗೆ ಮತ್ತು ನೀರಾವರಿ

ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಕೂಡಲೇ ಪೂರೈಸಿ ಕೊಡಬೇಕಾಗುತ್ತದೆ. ಈ ಕೆಲಸವನ್ನು ನಾವು ಯುದ್ಧೋಪಾದಿಯಲ್ಲಿ ಸಮರದೋಪಾಧಿಯಲ್ಲಿ ವ್ಯವಸ್ಥೆ ಮಾಡಿ ಎಲ್ಲೆಲ್ಲಿ ವಿದ್ಯುಚ್ಛಕ್ತಿಗೆ ಅರ್ಜಿಗಳು ಬಂದಿವೆಯೋ ಕೂಡಲೇ ಅವರಿಗೆ ವಿದ್ಯುಚ್ಛಕ್ತಿ ಕೊಡಬೇಕು. ನೀರಾವರಿ ಪಂಪ್‌ಸೆಟ್‌ಗಳಿಗೆ ೩-೪ ವರ್ಷವಾದರೂ ಸಹ ನೀವು ವಿದ್ಯುಚ್ಛಕ್ತಿ ಕೊಡಲಿಲ್ಲವೆಂದರೆ, ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕಂಥ ಸಾಲಕ್ಕೆ ಬಡ್ಡಿ ಕೊಡುವವರು ಯಾರು ? ಕೆಲವೊಂದು ಸಾರಿ ಬ್ಯಾಂಕ್‌ಗಳಿಂದ ತೆಗೆದುಕೊಂಡಿರುವ ಸಾಲ ಕಟ್ಟಲಾರದೆ ಬ್ಯಾಂಕ್‌ಗಳವರು ಮನೆಗಳಿಗೆ ಬಂದು ಜಪ್ತಿ ಸಹ ಮಾಡಿದ್ದು, ಹರಾಜು ಹಾಕಿರುವುದುಂಟು ಬ್ಯಾಂಕ್‌ಗಳವರು ಮನೆಗಳಿಗೆ ನುಗ್ಗಿ ಜಪ್ತಿ ಸಹ ಮಾಡಿದ್ದಾರೆ. ಬ್ಯಾಂಕ್ ಸಾಲಕ್ಕಿಂತ ಬ್ಯಾಂಕ್ ಬಡ್ಡಿ ಜಾಸ್ತಿ ಆಗಿರುತ್ತದೆ ಆದ್ದರಿಂದ ಕೊಳವೆ ಬಾವಿಗಳಿಗೆ ಆದ್ಯತೆ ಮೇಲೆ ನೀವು ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ ನಮ್ಮ ಚಾಮರಾಜನಗರ ಗಡಿ ಪ್ರದೇಶ ಎಂದು ಹೇಳುತ್ತಾರೆ. ಅಲ್ಲಿ ವಿದ್ಯುಚ್ಛಕ್ತಿಗೆ ಒಂದು ಗೋಳು ಆಗಿದೆ. ಅಲ್ಲಿಗೆ ಇವತ್ತಿಗೂ ಸರಿಯಾಗಿ ಸಾಮಾನುಗಳ ಸರಬರಾಜು ಆಗಿಲ್ಲ. ಕಂಬ ಇದ್ದರೆ ತಂತಿ ಇಲ್ಲ ತಂತಿ ಇದ್ದರೆ ಬೋಲ್ಟ್ ಇಲ್ಲ ಬೋಲ್ಟ್ ಇದ್ದರೆ ನಟ್ ಇಲ್ಲ, ಇವೆಲ್ಲ ಇದ್ದರೆ ವಿದ್ಯುಚ್ಛಕ್ತಿ ಇಲ್ಲ, ನಿಮ್ಮ ಇಲಾಖೆಯಲ್ಲಿ ಏನೂ ಇಲ್ಲ ನಿಮ್ಮ ಇಲಾಖೆ ಯಾವ ಇಲಾಖೆ ಎಂದು ನಾನು ಕೇಳಬೇಕಾಗುತ್ತದೆ. ಅಲ್ಲಿನ ಪರಿಸ್ಥಿತಿ ನೋಡಿದರೆ ನಾವು ನಾಚಿಕೆ ಪಡಬೇಕಾಗುತ್ತದೆ. ಇದು ಸರಿಯಲ್ಲ ನಾವು ನಾಚಿಕೆ ಪಡಬೇಕು ಇದು ಇಂದಲ್ಲ ಒಂದು ದಿನ ನಿಮಗೆ ತಿರುಗಿ ಬೀಳುತ್ತದೆ ನೀವು ವಿದ್ಯುಚ್ಛಕ್ತಿ ಶಾಕ್ ಹರಿಸುತ್ತಿದ್ದೀರಿ, ರೈತರ ಬೆನ್ನು ಬಗ್ಗಿ ಹೋಗಿ ಅವನು ಬ್ಯಾಂಕ್‌ಗಳಲ್ಲಿ ಮಾಡಿದ ಸಾಲದ ಬಡ್ಡಿ ಜಾಸ್ತಿಯಾಗುತ್ತಿದೆ. ಅವನಿಗೆ ಕಾಲಕ್ಕೆ ಸರಿಯಾಗಿ ವಿದ್ಯುಚ್ಛಕ್ತಿ ಇಲ್ಲ, ಅವನಿಗೆ ಯಾವ ಉತ್ಪಾದನೆ ಇಲ್ಲ. ಆದ್ದರಿಂದ ರೈತರ ಬಗ್ಗೆ ಸರ್ಕಾರ ಸಮಗ್ರವಾಗಿ ಚಿಂತನೆ ಮಾಡಬೇಕು. ಆ ಪರಿಸ್ಥಿತಿ ಇವತ್ತು ಬಂದಿದೆ. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ವಿದ್ಯುಚ್ಛಕ್ತಿಯನ್ನು ರೈತರಿಗೆ ಕೊಡಬೇಕು. ರೈತರ ಕೊಳವೆಬಾವಿಗಳಿಗೆ ಮತ್ತು ನೀರಾವರಿ ಬಾವಿಗಳಿಗೆ ವಿದ್ಯುತ್ ಅನ್ನು ಆದ್ಯತೆ ಮೇಲೆ ಕೊಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ತಮಗೆ ಹೇಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಹೇಳುವುದಾದರೆ ಎಷ್ಟು ಹಣ ಬಾಕಿ ನಿಮಗೆ ಬರಬೇಕಾಗಿದೆ ? ದೊಡ್ಡ ದೊಡ್ಡ ಕಾರ್ಖಾನೆಗಳಿಂದ ದೊಡ್ಡ ದೊಡ್ಡ ಕಾರ್ಖಾನೆ ಮಾಲೀಕರಿಂದ ಬಾಕಿ ಬರಬೇಕಾಗಿದೆ ? ಅವರು ರಾಜಕಾರಣಿಗಳು ಆಗಿರಬಹುದು ದೊಡ್ಡ ದೊಡ್ಡ ಅಧಿಕಾರಿಗಳು ಆಗಿರಬಹುದು, ಯಾರೇ ಇರಬಹುದು ಅವರುಗಳಿಂದ ಬರತಕ್ಕಂಥ ಹಣ ಎಷ್ಟು ಇದೆ ಆ ಹಣ ವಸೂಲಿ ಮಾಡಲಿಕ್ಕೆ ನೀವು ಏನು ಮಾಡಿದ್ದೀರಿ? ವಿದ್ಯುಚ್ಛಕ್ತಿ ಮಂಡಲಿಯು ಲಾಸ್‌ನಲ್ಲಿ ಇದೆ. ತೊಂದರೆಯಲ್ಲಿದೆ ಎಂದು ಹೇಳುತ್ತಿದ್ದೀರಿ. ಯಾರ್ಯಾರಿಂದ ಎಷ್ಟೆಷ್ಟು ಹಣ ಬಾಕಿ ಬರಬೇಕಾಗಿದೆ. ಅಷ್ಟೇ ಅಲ್ಲ, ಯಾವ ಯಾವ ಕಾರ್ಖಾನೆಗಳಿಂದ ಎಷ್ಟೆಷ್ಟು ಹಣ ಬಾಕಿ ಇದೆ ಎಂದು ಹೇಳಬೇಕು ಮತ್ತು ಹೇಳದೆ ಕೇಳದೆ ವಿದ್ಯುಚ್ಛಕ್ತಿ ಮಾರಾಟ ಮಾಡುತ್ತಿರುವಂಥದ್ದು ನಿಮ್ಮ ಗಮನಕ್ಕೆ ಬಂದಿದೆಯೋ ? ಅದು ನಿಮಗೂ ಗೊತ್ತಾಗುವುದಿಲ್ಲ, ನಿಮ್ಮ ದೊಡ್ಡ ದೊಡ್ಡ ಅಧಿಕಾರಿಗಳಿಗೂ ಗೊತ್ತಾಗುವುದಿಲ್ಲ. ಯಾರಿಗೂ ಗೊತ್ತಾಗುವುದಿಲ್ಲ. ವಿದ್ಯುಚ್ಛಕ್ತಿ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಹರಿದು ಹೋಗತಕ್ಕಂಥ ಪರಿಸ್ಥಿತಿ ಇದೆ ಇದನ್ನು ಸಹ ತಡೆಗಟ್ಟಬೇಕಾಗುತ್ತದೆ. ಮತ್ತೊಂದು ವಿಷಯ ಎಂದರೆ, ವಿದ್ಯುತ್ ದರಗಳನ್ನು ಏರಿಸುತ್ತಿರುವ ಬಗ್ಗೆ ಮಾನ್ಯ ಸಚಿವರೇ ಒಂದು ಸ್ಪಷ್ಟವಾದ ಸೂಚನೆಯನ್ನು ನಮಗೆ ಕೊಟ್ಟಿದ್ದಾರೆ. ಈ ಸಭೆ ಮುಗಿದ ತಕ್ಷಣ ವಿದ್ಯುತ್ ದರ ಮತ್ತೆ ಏರಿಸುತ್ತೀರಿ. ನಾವು ಯಾರು ಹೇಳಿದರೂ ನಾವು ಆಕಾಶ ಭೂಮಿ ಮುಟ್ಟಿದರೂ ಸಹ ನಮ್ಮ ಮಾತು ನೀವು ಯಾರೂ ಕೇಳುವಂತೆ ಇಲ್ಲ, ವಿದ್ಯುಚ್ಛಕ್ತಿ ದರ ಏರಿಸತಕ್ಕಂಥದ್ದು ನನಗೆ ಮತ್ತು ಅನೇಕರಿಗೆ ಗೊತ್ತಿದೆ. ಈ ಸರ್ಕಾರ ದರ ಏರಿಸತಕ್ಕಂಥ ಸರ್ಕಾರ ಆಗಬಾರದು. ಟ್ಯಾಕ್ಸ್‌ಗಳನ್ನು ಹಾಕಿ ಜನಗಳನ್ನು ಸುಲಿಯತಕ್ಕ ಸರ್ಕಾರ ಇದು ಆಗಬಾರದು ತೆರಿಗೆಯನ್ನು ಏರಿಸತಕ್ಕಂಥ ಸರ್ಕಾರ ಆಗಬಾರದು. ರಾಜ್ಯದಲ್ಲಿ ಒಂದು ಹೊಸ ನೀತಿಯನ್ನು ತರತಕ್ಕಂತ ಸರ್ಕಾರ ಆಗಬೇಕು. ಕೊನೆಯದಾಗಿ, ಈ ರಾಜ್ಯದಲ್ಲಿ, ಭಾರತದ ಒಟ್ಟು ಬೆಳೆಯಲ್ಲಿ ಶೇಕಡಾ ೮೦ ರಷ್ಟು ಭಾಗ ಕರ್ನಾಟಕದಲ್ಲೇ ಉತ್ಪತ್ತಿಯಾಗುವ ರೇಷ್ಮೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸುಮಾರು ಈ ರೇಷ್ಮೆ ವ್ಯವಸಾಯದಿಂದ ಸ್ವಲ್ಪ ಹೆಚ್ಚು ಕಡಿಮೆ ೧ ಕೋಟಿ ಜನರು ಇವತ್ತು ಇದರಿಂದ ಬದುಕುತ್ತಿದ್ದಾರೆ. ಇವತ್ತು ವಿಶ್ವಬ್ಯಾಂಕಿನಿಂದ ರೇಷ್ಮೆ ಉದ್ಯಮಕ್ಕೆ ನಮಗೆ ನೆರವು ಬಂದಿದೆ. ಇದನ್ನು ಯಾವ ರೂಪದಲ್ಲಿ ಖರ್ಚು ಮಾಡಬೇಕು ? ಬೆಳೆಗಾರರುಗಳಿಗೆ ಯಾವ ರೀತಿ ನಾವು ಸಹಾಯ ಮಾಡಬೇಕು ಎಂಬುದೇ ಇವತ್ತಿನ ಪ್ರಶ್ನೆ. ಈ ರೇಷ್ಮೆ ಬೆಳೆ ಎಂದರೆ ಸೊಪ್ಪನ್ನು ಹಾಕುವುದು. ಮೊಟ್ಟೆ ತರುವುದು. ಹುಳು ಸಾಕುವುದು, ಗೂಡು ಕಟ್ಟುವುದು, ನೂಲು ಮತ್ತು ದುಡ್ಡು ಇಷ್ಟು ಮಾತ್ರ ರೇಷ್ಮೆಗೆ ಸಂಬಂಧಪಟ್ಟ ವಿಚಾರ. ಇದೇ ಅದರ ಸೂತ್ರ. ಇದೊಂದು ತರಹ ಲಾಟರಿ ಇದ್ದ ಹಾಗೆ, ಒಂದು ಎಕರೆಯಲ್ಲಿ ಒಂದು ತಿಂಗಳಿಗೆ ಸಾವಿರಾರು ರೂಪಾಯಿಗಳನ್ನು ಸಂಪಾದನೆ

ಮಾಡಬಹುದು. ಇಲ್ಲ ಎಂದರೆ ಮಗುವಿನಂತೆ ಸಾಕಿದಂಥ ಹುಳುಗಳನ್ನು ಹೊರಕ್ಕೆ ಸುರಿಯುವುದು. ಏನು ಗೂಡು ಕಟ್ಟಬೇಕು ಆ ಸಮಯದಲ್ಲಿ ಏನಾದರೂ ವ್ಯತ್ಯಾಸವಾದರೆ ಎಲ್ಲಾ ಹುಳುಗಳನ್ನು ಬೀದಿಗೆ ಸುರಿಯುತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ, ಎಲ್ಲಾ ರೀತಿಯಲ್ಲೂ ರೈತನಿಗೆ ಸರ್ಕಾರದವರು ಮಾರ್ಗದರ್ಶನ ಕೊಟ್ಟು ಸಹಾಯ ಮಾಡಬೇಕು. ವಿಶ್ವಬ್ಯಾಂಕಿನಿಂದ ರೇಷ್ಮೆ ಉದ್ಯಮಕ್ಕೆಂದು ಕೊಟ್ಟಿರುವ ಹಣವನ್ನು ಸರ್ಕಾರ ಏನು ಮಾಡಿದೆ ? ಆ ಹಣದಲ್ಲಿ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಲಾಗಿದೆ. ಈ ವಿಶ್ವಬ್ಯಾಂಕಿನಿಂದ ಬಂದ ಹಣದಲ್ಲಿ ಹಳ್ಳಿ ರೈತನಿಗೆ ಯಾವ ರೀತಿಯಲ್ಲೂ ಸಹಾಯ ವಾಗುತ್ತಿಲ್ಲ. ಇದರ ಬಗ್ಗೆ ಒಂದು ಯೋಜನೆಯನ್ನು ಮಾಡಬೇಕು. ಪ್ರಾರಂಭದಲ್ಲಿ ಮೈಸೂರು ಜಿಲ್ಲೆ ಕಡೆ ಇದ್ದ ಈ ರೇಷ್ಮೆ ಉದ್ಯಮ ಈಗ ಇಡೀ ರಾಜ್ಯದಲ್ಲಿ ಬೆಳೆಯುತ್ತಿದೆ. ಈ ಉದ್ಯಮವನ್ನು ಬೆಳೆಸುವುದಕ್ಕೆ ಸರ್ಕಾರದವರು ಎಲ್ಲ ರೀತಿಯ ಪ್ರಯತ್ನ ಮಾಡಬೇಕು. ಎಲ್ಲೆಲ್ಲಿ ಈ ರೇಷ್ಮೆಯನ್ನು ಬೆಳೆಯುವುದಕ್ಕೆ ಅನುಕೂಲಗಳು ಇದೆಯೋ ಅಂಥಾ ಜಾಗಗಳಲ್ಲೆಲ್ಲಾ ರೇಷ್ಮೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು ರೇಷ್ಮೆ ಬೆಳೆಯುತ್ತೇನೆಂದು ಮುಂದೆ ಬರತಕ್ಕಂಥ ರೈತರುಗಳಿಗೆ, ಬಾವಿಗಳನ್ನು ತೋಡಿಸುವುದಕ್ಕೆ ತಕ್ಷಣ ಸಾಲವನ್ನು ಕೊಡಿ ತೋಡಿಸಿದ ಬಾವಿಗಳಿಗೆ ತಕ್ಷಣ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಿ ಆಮೇಲೆ ಮೊಟ್ಟೆಗಳನ್ನು ಸಪ್ಲೈ ಮಾಡುವಾಗ ಮೊದಲನೇ ಸಾರಿ ಇಟ್ಟ ಮೊಟ್ಟೆಗಳನ್ನು ಮತ್ತು ಕೊನೆಯ ಸಾರಿ ಇಟ್ಟ ಮೊಟ್ಟೆಗಳನ್ನು ಕೊಡಬೇಡಿ. ಎರಡನೇ ಸಾರಿ ಇಟ್ಟ ಮೊಟ್ಟೆಗಳು ಮಾತ್ರ ಉತ್ತಮವಾಗಿರುವುದರಿಂದ ಎರಡನೇ ಸಾರಿ ಇಟ್ಟ ಮೊಟ್ಟೆಗಳನ್ನು ಮಾತ್ರ ಧಾರಾಳವಾಗಿ ರೈತರುಗಳಿಗೆ ಸಪ್ಲೈ ಮಾಡಿ. ಸರಿಯಾದರೀತಿಯಲ್ಲಿ ಮೊಟ್ಟೆಗಳನ್ನು ರೈತರುಗಳಿಗೆಒದಗಿಸತಕ್ಕಂಥ ವ್ಯವಸ್ಥೆ ಮಾಡಿದರೆ ತುಂಬಾಅನುಕೂಲವಾಗುತ್ತದೆ. ಆಮೇಲೆ ರೇಷ್ಮೆ ಉದ್ಯಮದ ಮೇಲೆ ಶೇಕಡ 2 ಪರ್ ಸೆಂಟ್ ತೆರಿಗೆಯನ್ನು ತಾವು ಹಾಕಿದ್ದೀರಿ. ಈ ಬಗ್ಗೆ ಹಠಮಾರಿತನ ನಿಮಗೆ ಬೇಡ. ಮಾರಾಟ ತೆರಿಗೆ ಹೆಸರಿನಲ್ಲಿ ರೈತರುಗಳಿಗೆ ತೊಂದರೆ ಕೊಡುವುದು ಸರಿಯಲ್ಲ ಈ ರೀತಿ ಟ್ಯಾಕ್ಸ್ ಹಾಕಿರುವುದರಿಂದ ಅಧಿಕಾರಿಗಳು ಬಂದು ಆ ಅಕೌಂಟ್ಸ್ ತೆಗೆಯಿರಿ ಈ ಅಕೌಂಟ್ಸ್ ತೆಗೆಯಿರಿ ಎಂದು ರೈತರುಗಳಿಗೆ ಕಿರುಕುಳ ಕೊಡುವ ಹಾಗಾಗುತ ದೆ ಇದರಿಂದ ರೇಷ್ಮೆ ಉದ್ಯಮವೇ ಮುಚ್ಚುವ ರೀತಿಯಲ್ಲಿ ಬರುತ್ತಿದೆ. ಸಮಗ್ರವಾಗಿ ಈ ಉದ್ಯಮ ನೆಲ ಕಚ್ಚತಕ್ಕಂಥ ಪರಿಸ್ಥಿತಿಗೆ ಬರುತ್ತೆದೆ. ರೈತನಿಗ ಅನುಕೂಲವಾಗಬೇಕು. ಮಾರಾಟಗಾರರಿಗೂ ಅನುಕೂಲವಾಗಬೇಕು, ಆಮೇಲೆ ಸಿಲ್ಕ್ ಫಿಲೇಚರ್‌ಗಳು ಬಹಳ ಹಳೆಯ ಮಾದರಿಯಲ್ಲಿ ಇವೆ. ಅವುಗಳಿಗೆ ತಾವು ಕಾಯಕಲ್ಪ ಕೊಡಬೇಕು. ಯಾವುದೋ ಕಾಲದ ಮಾದರಿಗಳು, ಯಾವುದೋ ಕಾಲದ ವ್ಯವಸ್ಥೆ ಈ ವ್ಯವಸ್ಥೆಯ ಮೂಲಕ ಗೂಡುಗಳನ್ನು ಬೇಯಿಸಿ ಅದರಲ್ಲಿ ದಾರ ತೆಗೆಯುವುದು ಏನಿದೆ, ಇದು ಸರಿಯಲ್ಲ, ಒಂದು ವೈಜ್ಞಾನಿಕವಾದ ರೀತಿಯಲ್ಲಿ ಈ ಸಿಲ್ಕ್ ಫಿಲೇಚರ್‌ಗಳಿಗೆ ಹೊಸ ರೂಪ ಕೊಡಬೇಕು. ರೇಷ್ಮೆ ಉದ್ಯಮವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸುಮ್ಮನೆ ಮಾತನಾಡಿದರೆ ಏನೂ ಆಗುವುದಿಲ್ಲ. ಮಾರುಕಟ್ಟೆ ವ್ಯವಸ್ಥೆಯಲ್ಲಿ ರೈತನ್ನು ಬೆಳೆದ ಗೂಡುಗಳನ್ನು ಸರಿಯಾದ ಬೆಲೆಯಲ್ಲಿ ಮಾರಾಟ ಮಾಡುವುದಕ್ಕೆ ಅನುಕೂಲವಾಗಲು ಬೆಲೆಯನ್ನು ನಿಗದಿ ಮಾಡಬೇಕು, ಇದನ್ನು ಉತ್ತಮವಾದ ರೀತಿಯಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಮಾಡುವುದು ಒಳ್ಳೆಯದು. ಒಂದು ಸಾರಿ ಮಾರುಕಟ್ಟೆಯಲ್ಲಿ ಸತ್ಯಾಗ್ರಹವಾದಾಗ ಸುಮಾರು 2 ಲಕ್ಷ ಟನ್ ನಷ್ಟು ರೇಷ್ಮೆ ಗೂಡು ಶೇಖರಣೆಯಾಗಿತ್ತು. ಈ ರೀತಿ ಆದರೆ ಪರಿಸ್ಥಿತಿ ಏನು ? ಈ ಎಲ್ಲಾ ವಿಷಯವನ್ನು ತಾವು ಗಮನದಲ್ಲಿಟ್ಟುಕೊಂಡು ರೇಷ್ಮೆ ಉದ್ಯಮವನ್ನು ಅಭಿವೃದ್ಧಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ತಾವು ಒಳ್ಳೆಯ ಕೆಲಸ ಮಾಡುತ್ತೀರೆಂದು ನನಗೆ ಗೊತ್ತಿದೆ. ತಮ್ಮ ಮೇಲೆ ನನಗೆ ಅಭಿಮಾನ ಇದೆ. ರೇಷ್ಮೆ ಬಗ್ಗೆ ಹೊಸ ರೂಪದ ವ್ಯವಸಾಯವನ್ನು ಮಾಡಬೇಕೆಂದು ಮಾನ್ಯ ರೇಷ್ಮೆ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ರೈತನಿಗೆ ಸರಿಯಾದ ಬೆಂಬಲ ಬೆಲೆ ಕೊಡಲಿಲ್ಲವೆಂದರೆ ಆ ಉದ್ಯಮವೇ ನಾಶವಾಗುತ್ತದೆ ಆದ್ದರಿಂದ, ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕು ಎಳಂದೂರು ತಾಲ್ಲೂಕು, ಗುಂಡ್ಲುಪೇಟೆ ತಾಲ್ಲೂಕು ಇಲ್ಲೆಲ್ಲಾ ಮತ್ತು ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ ಹೀಗೆ ಇಡೀ ರಾಜ್ಯದಲ್ಲಿ ಸುಮಾರು 1 ಕೋಟಿ ಜನ ಇದರ ಒಂದು ಉದ್ಯಮವನ್ನು ಮಾಡಿಕೊಂಡು ಜೀವನ ಮಾಡತಕ್ಕ ಪರಿಸ್ಥಿತಿ ಇದೆ. ನನಗನಿಸುತ್ತದೆ, ಈ ಒಂದು ಕೋಟಿ ಜನಕ್ಕೆ ಕೆಲಸ ಕೊಡುವ ಈ ಉದ್ಯಮ ಬಹಳ ಮಹತ್ವರವಾದಂಥ ಉದ್ಯಮವೆಂದು ಹೇಳಬಹುದು. ಈ ಉದ್ಯಮಕ್ಕೆ ತಾವು ಬೆಂಬಲ ಕೊಟ್ಟರೆ ಒಳ್ಳೆಯದು.

ಈ ಒಂದು ಉದ್ಯಮಕ್ಕೆ ತಾವು ಬೆಂಬಲ ಕೊಡಬೇಕು. ವಿಶ್ವಬ್ಯಾಂಕ್‌ನ ನೆರವನ್ನು ಕೂಡಾ ಈ ದಿಸೆಯಲ್ಲಿ ಪಡೆದಿದ್ದೀರಿ ; ಒಟ್ಟಿನಲ್ಲಿ ಸರ್ವ ವಿಧದಲ್ಲಿಯೂ ತಾವುಗಳು ಉದ್ಯಮಕ್ಕೆ ಬೆಂಬಲ ಕೊಟ್ಟರೆ, ಈ ಉದ್ಯಮ ಉಳಿಯಲು, ಬೆಳೆಯಲು ತಾವುಗಳು ಪ್ರಯತ್ನ ಮಾಡಿದಂತಾಗುತ್ತದೆ. ಈ ದಿಸೆಯಲ್ಲಿ ತಾವುಗಳು ಕಾರ್ಯತತ್ಪರರಾಗಿ ಸರ್ವಪ್ರಯತ್ನಗಳನ್ನು ಮಾಡುತ್ತೀರಿ ಎಂದು ವಿಶ್ವಾಸವನ್ನು ವ್ಯಕ್ತಪಡಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—Mr. Lakkappa, would you yield for a minute. I am happy to announce that to-day happens to be the birthday of Deputy Speaker Smt. Nagamma Keshavamurthy. May I wish her on your behalf and on my own behalf all the best.

MADAM DEPUTY SPEAKER.—Thank you very much for the sentiments expressed.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರು ಜನ್ಮ ದಿನದ ಶತಮಾನೋತ್ಸವವನ್ನು ಆಚರಿಸಲಿ ಎಂದು ಸಭೆಯ ಪರವಾಗಿ ನಾನು ಸಹ ಶುಭಾಶಯಗಳನ್ನು ಅರ್ಪಿಸುತ್ತೇನೆ.

† ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಸನ್ಮಾನ್ಯ ಸಭಾಧ್ಯಕ್ಷರೆ, ಇದು ಬಹಳ ಪ್ರಮುಖವಾದಂಥ ಬೇಡಿಕೆ. ಈಗಾಗಲೇ ನಮ್ಮ ಅನೇಕ ಜನ ಮಿತ್ರರು ಈ ಸಭೆಯಲ್ಲಿ ಮಾತನಾಡಿ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಈ ರಾಜ್ಯದ ಕೈಗಾರಿಕಾ ನೀತಿ ರಾಷ್ಟ್ರದ ಕೈಗಾರಿಕಾ ನೀತಿಗೆ ಈ ರಾಜ್ಯದ ಕೈಗಾರಿಕಾ ನೀತಿ ಮತ್ತು ರಾಷ್ಟ್ರದ ಕೈಗಾರಿಕಾ ನೀತಿಯ ಬಗ್ಗೆ ನಮ್ಮ ಸಂವಿಧಾನದ ಚೌಕಟ್ಟಿನಲ್ಲಿ ನಾವು ಈ ರಾಷ್ಟ್ರವನ್ನು ಸಮಾಜದ ಹಾಗೂ ಒಂದು ಗಣರಾಜ್ಯವನ್ನು ಮಾಡಿ ಈ ರಾಜ್ಯದ ಎಲ್ಲಾ ಜನರಿಗೂ ಕೂಡ ಸುಖೀ ರಾಜ್ಯವನ್ನು ಕೊಡಬೇಕೆಂಬುದು ನಮ್ಮ ಉದ್ದೇಶ. ಇದನ್ನು ಕೊಡತಕ್ಕಂಥ ವಿಚಾರದಲ್ಲಿ ತಮ್ಮ ತಮ್ಮ ಅನೇಕ ರಾಜ್ಯಗಳಲ್ಲಿರತಕ್ಕಂಥ ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡು, ಅದನ್ನು ರೂಢಿಸಿಕೊಂಡು, ಅದನ್ನು ಕ್ರೋಢೀಕರಿಸಿಕೊಂಡು ಅದರಲ್ಲಿನ ಆರ್ಥಿಕ ವ್ಯವಸ್ಥೆಯನ್ನು ಸಮಾಜದ ಎಲ್ಲಾ ಜನರಿಗೂ ಕೂಡ ಸಮಾನವಾಗಿ ಹಂಚಬೇಕೆನ್ನುವ ಉದ್ದೇಶ ಇದೆ. ಇದರಲ್ಲಿ ಬಹಳ ಪ್ರಾಮುಖ್ಯವಾದಂಥ ಈ ಬೆಳವಣಿಗೆಗೆ ಕೈಗಾರಿಕೆಗಳು ಬಹಳ ಮುಖ್ಯ.

(MADAM DEPUTY SPEAKER (occupied the Chair)

ಈ ಕೈಗಾರಿಕೆಗಳ ನೀತಿ ಏನಾಗಿದೆ ಅಂದರೆ, ಈಗ ರಾಷ್ಟ್ರಮಟ್ಟದಲ್ಲಿಯೂ ಕೂಡ ಈ ಕೈಗಾರಿಕೆಗಳ ನೀತಿ ಅನೇಕ ರೀತಿಯಲ್ಲಿ ಸಂವಿಧಾನದ ವಿರುದ್ಧ ಪರಿವರ್ತನೆ ಆಗತಕ್ಕಂಥ ಚಿಹ್ನೆಗಳು ಕಾಣುತ್ತಾ ಇವೆ. ಅದೇ ರೀತಿ ನಮ್ಮ ರಾಜ್ಯದ ರಾಜಕಾರಣದಲ್ಲಿಯೂ ಕೂಡ ನಮ್ಮ ನೈಸರ್ಗಿಕ ಸಂಪತ್ತು ಹೇರಳವಾಗಿದೆ ಎಂಬ ಮಾತನ್ನು ನಾನು ಇಲ್ಲಿ ಪುನಃ ಪುನಃ ಹೇಳಬೇಕಾಗಿದೆ ಎಂದು ನನಗೆ ಅನ್ನಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಅಪಾರವಾಗಿ ಇದೆ. ಕಾಡಿನ ಸಂಪತ್ತು ಬಹಳಷ್ಟು ಇದೆ. ರಾಜ್ಯದಲ್ಲಿ ಗಣಿ ಸಂಪತ್ತು ಹೇರಳವಾಗಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ನೈಸರ್ಗಿಕ ಸಂಪತ್ತು ಬಹಳಷ್ಟು ಚೆನ್ನಾಗಿ ಇದೆ. ಗಂಧ, ಚಿನ್ನ, ಅದಿರುಗಳು ಮೊದಲಾದ ಸಂಪತ್ತುಗಳು ಬೇರೆ ಯಾವ ರಾಜ್ಯಗಳಲ್ಲಿಯೂ ಇಷ್ಟು ಅಪಾರವಾಗಿ ಇಲ್ಲ. ಇಷ್ಟೆಲ್ಲವನ್ನೂ ಪಡೆದ ನಾವು ಅವುಗಳನ್ನು ಬಳಸಿಕೊಂಡು ಮುನ್ನಡೆಯುವಲ್ಲಿ ಸಫಲರಾಗಿದ್ದೇವೆಯೋ ಎಂಬ ಪ್ರಶ್ನೆ ನಮ್ಮ ಮುಂದಿದೆ. ನಾವು ಈ ಕಾಡಿನ ಉತ್ಪನ್ನಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಎಷ್ಟು ಮಾಡಿದ್ದೇವೆ? ಈ ರಾಜ್ಯದಲ್ಲಿರತಕ್ಕಂಥ ಈ ಎಲ್ಲ ಸಾಮಗ್ರಿಗಳನ್ನು ಕ್ರೋಢೀಕರಿಸಿ ಈ ರಾಜ್ಯವನ್ನು ನಾವು ಕೈಗಾರಿಕಾ ಒಂದು ಕ್ರಾಂತಿಯನ್ನು ಮಾಡುವುದಕ್ಕೆ ಅವಕಾಶ ಹೇರಳವಾಗಿ ಇದ್ದಂಥ ರಾಜ್ಯದಲ್ಲಿ ನಮ್ಮ ಕೈಗಾರಿಕೆಗಳಿನ್ನೂ ಹಿಂದೆ ಉಳಿದಿವೆ. ಇದನ್ನು ಏತಕ್ಕಾಗಿ ಹೇಳುತ್ತೇನೆ ಅಂದರೆ ನಮ್ಮ ಕಾಡುಗಳನ್ನು ಕಡಿದು ಹಾಳು ಮಾಡುತ್ತಿದ್ದಾರೆ. ಕಾಡಿನಲ್ಲಿರತಕ್ಕಂಥ ಬಹಳ ಬೆಲೆಯುಳ್ಳ ಮರಗಳನ್ನು ಕಡಿದು ಮಾರುತ್ತಿದ್ದಾರೆ. ಈಗ ದಂತಗಳ ಕಳ್ಳ ಸಾಗಾಣಿಕೆಯು ಅತೀ ಆಗಿದೆ. ಆದರೆ ಸರಕಾರವೇ ಒಂದು ಈ ಬೆಲೆಯುಳ್ಳ ದಂತಗಳ ಸಂಬಂಧಪಟ್ಟ ಒಂದು ಕೈಗಾರಿಕೆಯನ್ನು ಮಾಡಲು ವ್ಯವಸ್ಥೆ ಮಾಡಿಲ್ಲ. ಈ ದಂತಗಳ್ಳರಿಂದ ನಮ್ಮ ಆನೆಗಳ ಸಂತತಿಯ ಸಾವು, ಚರ್ಮಗಳನ್ನು ಆಮದು ಮಾಡಿ ಕಳ್ಳ ಸಾಗಾಣಿಕೆ ಮಾಡತಕ್ಕಂಥ ದುಷ್ಟರಿಂದಾಗಿ ಹುಲಿಗಳ ಸಾವು. ಮುಂತಾಗಿ ನೋಡುತ್ತಾ, ಕೇಳುತ್ತಾ ಇದ್ದೇವೆ. ಪ್ರಾಚೀನವಾಗಿ ಬಂದಿರತಕ್ಕಂಥ ನಮ್ಮ ಅರಣ್ಯ ಮತ್ತು ಇತರ ನೈಸರ್ಗಿಕ ಸಂಪತ್ತನ್ನು ಹೇಗೆ ಬಳಸಿಕೊಳ್ಳಬೇಕೆಂಬ ವಿವೇಚನಾಯುಕ್ತವಾದ ಸಾರ್ವಜನಿಕ ಕಾರ್ಯಕ್ರಮಗಳು ನಮ್ಮಲ್ಲಿ ಇಲ್ಲ. ಹೀಗಾಗಿ ಒಂದು ರೀತಿಯಲ್ಲಿ ಕಾಡಿನ ಸಂಪತ್ತನ್ನು ನಿರ್ಮೂಲನೆ ಮಾಡುತ್ತಾ ಇದ್ದೇವೆ. ಈ ಕಾರಣಗಳಿಗಾಗಿ ಕೈಗಾರಿಕೆಗಳು ಕೂಡ ನಿಂತಿವೆ. ಕುಶಲ ಕೈಗಾರಿಕೆಯಲ್ಲಿ ಗಂಧದ ಮರಗಳನ್ನು ಉಪಯೋಗಿಸಿ ಎಲ್ಲ ರಾಷ್ಟ್ರಗಳಿಗೂ ಕೂಡ ಕಳಿಸುವ ಒಂದು ಕರ್ನಾಟಕದ ನೀತಿ, ಹಿರಿಮೆ ಕೀರ್ತಿ ಇವತ್ತು ಕುಗ್ಗಿಹೋಗಿದೆ.

(† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಏಕೆಂದರೆ ಶ್ರೀಗಂಧವನ್ನು ಕುಶಲ ಕೈಗಾರಿಕೆಯ ಅಂಗ ಕೊಡಲು ಕುಶಲ ಕೈಗಾರಿಕಾ ಕಾರ್ಪೋರೇಷನ್ ಎಂದು ಮಾಡಿದ್ದೇವೆ. ಆದರೂ ಗುಡಿಗಾರರಿಗೆ ತೊಂದರೆಯಾಗಿದೆ. ಈ ಒಂದು ಕರಕುಶಲ ಕೈಗಾರಿಕೆಗಳೂ ಸಹ ನಾಶ ಹೊಂದುತ್ತಿರುವ ಪರಿಸ್ಥಿತಿ ಇದೆ. ನಮ್ಮ ರಾಜ್ಯದ ಸರ್ಕಾರಿ ವಲಯದ ಕೈಗಾರಿಕೆಗಳನ್ನು ಪರಿಶೀಲನೆ ಮಾಡಿದರೆ ಹಿಂದಿನ ಸರ್ಕಾರದವರು ಬೇರೆ ದೇಶದಿಂದ ಹಣ ತಂದು ಇಲ್ಲಿ ಹೂಡಿ, ಇಲ್ಲಿ ಉದ್ಯಮಗಳನ್ನು ಸ್ಥಾಪಿಸಬೇಕೆಂದು ಹೇಳಿದ್ದರು. ಆ ಕಾರಣಕ್ಕಾಗಿ ಹಿಂದೆ ಮುಖ್ಯ ಕಾರ್ಯದರ್ಶಿಗಳಾಗಿದ್ದ ಮೂರ್ತಿಗಳು, ಕೈಗಾರಿಕಾ ಸಚಿವರು, ಮುಖ್ಯಮಂತ್ರಿಗಳೂ ಅಮೇರಿಕಾ ಯುರೋಪ್ ಮುಂತಾದ ಕಡೆ ಸಂಚಾರ ಮಾಡಿ ಬಂದರು. ಇವರು ಅಲ್ಲಿಗೆ ಹೋದಾಗ ಎನ್‌ಆರ್‌ಐ ಇನ್‌ವೆಸ್ಟ್‌ಮೆಂಟ್ ಬಗ್ಗೆ ಏನೇನು ಮಾತನಾಡಿದರು; ಯಾವ್ಯಾವ ಸರ್ಕಾರಗಳು ನೆರವು ಕೊಡುತ್ತೇವೆಂದು ಹೇಳಿದ್ದರು ಎಂಬುದರ ಬಗ್ಗೆ ಇವತ್ತಿನ ಸರ್ಕಾರ ನಮಗೆ ಒಂದು ಪತ್ರವನ್ನು ಕೊಡಬೇಕಾಗುತ್ತದೆ. ಈ ಸಭೆಗೆ ಆ ವಿಚಾರಗಳನ್ನು ತಿಳಿಸಬೇಕಾಗಿದೆ. ವಿದೇಶಿಯರ ಹಣವನ್ನು ತರುತ್ತೇನೆಂದು ಹೋಗಿ ಈ ರಾಜ್ಯದ ಸೈಟ್‌ಗಳನ್ನು ಕೊಟ್ಟಿದ್ದೋ ಅಥವಾ ಈ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯುವುದಕ್ಕೆ ಏನಾದರೂ ವ್ಯವಸ್ಥಿತವಾದ ಮಾತುಕತೆಗಳಾಗಿದ್ದರೆ ಆ ಮಾತುಗಳೇನು ಆ ಕಂಪೆನಿಗಳು ಯಾವುವು, ಎಷ್ಟು ಹಣವನ್ನು ಈ ಊರಿನಲ್ಲಿ ಹೂಡುವುದಕ್ಕೆ ಮುಂದೆ ಬಂದಿದ್ದಾರೆ ಎಂಬುದಲ್ಲ ಬಹಳ ಮುಖ್ಯ. ಏಕೆಂದರೆ ಈ ರಾಜ್ಯದ ಈ ರಾಷ್ಟ್ರದ ಹಿತವನ್ನು ನಾವು ಶ್ರೀಮಂತವರ್ಗದ ಕೈಲಿ ಕೊಟ್ಟಿದ್ದೇ ಆದರೆ, ಈ ರಾಜ್ಯದ ಆರ್ಥಿಕ ಸ್ಥಿತಿಯೆಲ್ಲ ಅವರ ಕೈಗೆ ಹೋಗಿ, ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಸಮಾಜವಾದವನ್ನು ಬೆಂಕಿಗೆ ಹಾಕಿದಂತಾಗುತ್ತದೆ. ಆದಕ್ಕಾಗಿ ರಾಜ್ಯದ ಕೈಗಾರಿಕಾ ನೀತಿ ಏನಿದೆ, ಆ ಪ್ರಕಾರ ಪಬ್ಲಿಕ್ ಸೆಕ್ಟರ್‌ನಲ್ಲಿ ಬಹಳಷ್ಟು ಹಣ ಹೂಡಿದ್ದೇವೆ. ಇಂದು ಪಬ್ಲಿಕ್ ಸೆಕ್ಟರ್ ಕೈಗಾರಿಕೆಗಳನ್ನು ಜಾಯಿಂಟ್ ಸೆಕ್ಟರ್ ವಲಯದ, ಕೋಆಪರೇಟಿವ್ ಸೆಕ್ಟರ್ ವಲಯದ, ಪ್ರೈವೇಟ್ ಸೆಕ್ಟರ್ ವಲಯದ ಕೈಗಾರಿಕೆಗಳ ಜೊತೆಯಲ್ಲಿ ಹೋಲಿಕೆ ಮಾಡಿ ನೋಡಿದರೆ ಈ ರಾಜ್ಯದಲ್ಲಿ ಸರ್ಕಾರಿ ವಲಯದ ನಷ್ಟ ಹೊಂದುತ್ತಿರುವ ಕೈಗಾರಿಕೆಗಳನ್ನೆಲ್ಲಾ ಖಾಸಗೀಯವರಿಗೆ ಮಾರಾಟ ಮಾಡಬೇಕು ಎನ್ನುವ ಮಾತನ್ನು ಕೇಳಿ ನನಗೆ ಬಹಳ ವ್ಯಸನವಾಗಿದೆ. ನಾವು ಸರ್ಕಾರಿ ವಲಯದಲ್ಲಿ ಅನೇಕ ಕೈಗಾರಿಕೆಗಳನ್ನು ಬಹಳ ವರ್ಷಗಳಿಂದ ಕಟ್ಟಿ, Public Sector Undertakings should be a commanding height of our society to see that the industries are grown and rapid industrialisation is the object and reason to find solution to this unemployment and also poverty in this State and in this country... ಈ ಬಗ್ಗೆ ಈ ರಾಜ್ಯದಲ್ಲೂ ಕೂಡ ಸರ್ಕಾರಿ ವಲಯದಲ್ಲಿ ನಡೆಯತಕ್ಕಂಥ ಕೈಗಾರಿಕೆಗಳು ನಷ್ಟದಲ್ಲಿ ನಡೆಯುತ್ತಿವೆ ಎಂದು ಹೇಳಿ ಇವನ್ನು ಖಾಸಗೀಯವರಿಗೆ ಮಾರಾಟ ಮಾಡುತ್ತೇವೆನ್ನುವುದು ಈ ರಾಜ್ಯದ ಹಿತವನ್ನು ಮಾರಾಟ ಮಾಡಿದಂತಾಗುತ್ತದೆ. ಆದ್ದರಿಂದ ಈ ಪ್ರಸ್ತಾವವನ್ನು ನಮ್ಮ ಸರ್ಕಾರ ಕೈಬಿಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಏಕೆಂದು ಹೇಳಿದರೆ ಇದಕ್ಕೆ ಒಂದೇ ಕಾರಣ. ಸರ್ಕಾರಿ ವಲಯದಲ್ಲಿ ನಡೆಯತಕ್ಕಂಥ ಕಂಪನಿಗಳು ಸುಮಾರು ೩೪, ಅವು ಹೇಗಿವೆ ಎಂದು ಹೇಳಿದರೆ ಲೆಕ್ಕಪತ್ರ ಇಲ್ಲದ ಉದ್ಯಮಗಳಾಗಿವೆ. ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿ ಬಂಡವಾಳವನ್ನು ಈ ಪಬ್ಲಿಕ್ ಸೆಕ್ಟರ್‌ನಲ್ಲಿ ಹಾಕಿದ್ದೇವೆ. ಈ ಪಬ್ಲಿಕ್ ಸೆಕ್ಟರ್‌ನಲ್ಲಿ ಹಾಕಿರತಕ್ಕಂಥ ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತಿವೆ ಎನ್ನತಕ್ಕಂಥದ್ದನ್ನು ನಿನ್ನೆ ನನ್ನ ಮಿತ್ರರೊಬ್ಬರು ಹಾಗೂ ಭಾಷಣ ಮಾಡಿದವರೆಲ್ಲರೂ ಹೇಳಿದರು. ಎಲ್ಲಾ ಕಾರ್ಖಾನೆಗಳು ಕೂಡ ನಷ್ಟದಿಂದ ಕೂಡಿವೆ. ಅದರ ಉದ್ದೇಶವನ್ನು ಅವರು ನಿರ್ವಹಣೆ ಮಾಡತಕ್ಕಂಥ ಶಕ್ತಿ ಇಲ್ಲದಂತೆ ಆಗಿವೆ. ವಿಶ್ವೇಶ್ವರಯ್ಯನವರಂಥ ಶಿಲ್ಪಿ ಇದ್ದಂಥ ಕಾಲದಲ್ಲಿ ಈ ರಾಜ್ಯಕ್ಕೆ ಗಂಧದ ನಾಡು, ಚಿನ್ನದ ನಾಡು ಎಂದು ಎಲ್ಲಾ ಹೆಸರಿನಿಂದ ಹಾಡಿ ಹೊಗಳಿದ್ದಾಗ್ಯೂ ಈ ದಿವಸ ಚಿನ್ನವೂ ಸಿಗುತ್ತಿಲ್ಲ, ಗಂಧವೂ ಸಿಗುತ್ತಿಲ್ಲ, ದಂತವೂ ಕೂಡಾ ಸಿಗುತ್ತಿಲ್ಲ. ಈ ರಾಜ್ಯದಲ್ಲಿ ಉದ್ಯೋಗಗಳು ಕೂಡಾ ಸರಿಯಾದ ರೀತಿಯಲ್ಲಿ ಜನರಿಗೆ ವ್ಯವಸ್ಥಿತವಾಗಿ ಸಿಗದೆ ಕೈಗಾರಿಕೆಗಳು ಕೂಡಾ ಬರುತ್ತಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸುಮಾರು ೩೪ ಸರ್ಕಾರಿ ವಲಯದಲ್ಲಿ ನಡೆಯತಕ್ಕಂಥ ಕಾರ್ಖಾನೆಗಳು ಮತ್ತು ೮ ಸಬ್ಸಿಡಿಯರಿ ಕಾರ್ಖಾನೆಗಳು ೧೩ ವರ್ಷದಿಂದ ಲೆಕ್ಕ ಪತ್ರವನ್ನು ಕೊಟ್ಟಿಲ್ಲ. ಕೆ.ಎಸ್.ಆರ್.ಟಿ.ಸಿ. ಯಲ್ಲಿ ೧೦೪ ಕೋಟಿ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯವರು ಲೆಕ್ಕ ಕೊಟ್ಟಿಲ್ಲ. ಕಾಪರ್ ಕಂಪನಿ, ಚಿತ್ರದುರ್ಗದವರು ಲೆಕ್ಕ ಕೊಟ್ಟಿಲ್ಲ. The Leather Industries Corporation is running under loss since its inception. ಅದೇ ರೀತಿ ಕುಶಲಕರ್ಮಿಗಳ ಕಾರ್ಪೋರೇಷನ್ ಕೂಡ ಒಂದು ಕೋಟಿ ರೂಪಾಯಿ ಈ ವರ್ಷ ನಷ್ಟವನ್ನು ಹೊಂದಿದೆ, ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಉದ್ಯೋಗ ಇಲ್ಲದಂತಾಗಿದೆ. ಗಂಧದ ಮರಗಳೇ ಸಿಕ್ಕದೇ ಇರತಕ್ಕಂಥ ಕಷ್ಟದ

ಪರಿಸ್ಥಿತಿಯಲ್ಲಿ ಈ ದಿವಸ ಅದು ನಡೆಯುತ್ತಿದೆ. ಇದಕ್ಕೆ ವರ್ಕಿಂಗ್ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ೧೨೦ ಕೋಟಿ ರೂಪಾಯಿ. ಆದರೆ ಆ ಹಣಕ್ಕೆ ಲೆಕ್ಕಪತ್ರ ಇಲ್ಲ, ಮತ್ತೆ ಅದರಲ್ಲಿ ಯಾವ ಒಂದು ಪಾಲಿಸಿಗೋಸ್ಕರವಾಗಿ ನಾವು ಕೊಟ್ಟಿದ್ದೇವೋ, ಯಾವ ಉದ್ದೇಶಕ್ಕೋಸ್ಕರ ಕೊಟ್ಟಿದ್ದೇವೋ ಅದು ಸಫಲವಾಗುತ್ತಿಲ್ಲ. ಮಾನ್ಯ ರಾಜಶೇಖರಮೂರ್ತಿಯವರು ಭಾಷಣ ಮಾಡುತ್ತಾ ಖಾಸಗೀಯವರಿಗೆ ಈ ನಷ್ಟದ ಉದ್ಯಮವನ್ನು ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ಈ ಮಾತನ್ನು ಅವರು ಹೇಳಬೇಕಾದರೆ, ಸರ್ಕಾರಿ ವಲಯದಲ್ಲಿ ನಡೆಯುತಕ್ಕಂಥಾ ಕಾರ್ಖಾನೆಗಳು ಅನೇಕ ರೀತಿಯಲ್ಲಿ

೩-೦೫ ಪಿ.ಎಂ.

ಅವುಗಳ ಉದ್ದೇಶವನ್ನೇ ಪಾಲಿಸಿಲ್ಲ. ಇನ್‌ಸ್ಟಾಲ್ಡ್ ಕೆಪಾಸಿಟಿಯನ್ನು ಉಪಯೋಗಿಸಿಕೊಂಡಿಲ್ಲ, ನಷ್ಟವನ್ನು ಹೊಂದಿದೆ, ಗುಣಮಟ್ಟ ಇಲ್ಲ, ಇದೆಲ್ಲಾ ಕಾರ್ಯಕ್ರಮಗಳು ಮತ್ತು ಅದರ. ಕಾರ್ಯವೈಖರಿಗಳನ್ನೆಲ್ಲಾ ಉಲ್ಲೇಖ ಮಾಡಿ ಖಾಸಗಿಯವರಿಗೆ ನಷ್ಟದ ಉದ್ಯಮವನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದಾರೆ. ನಮ್ಮ ರಾಷ್ಟ್ರದ ಮತ್ತು ನಮ್ಮ ರಾಜ್ಯದ ನೀತಿ ಏನು ಇದೆ ಎಂದು ಹೇಳಿದರೆ, ನಾವು ಯಾವ ಕಂಪನಿಗಳನ್ನಾಗಲಿ ನಷ್ಟ ಹೊಂದಿರತಕ್ಕಂಥ ಅನೇಕ ಕಂಪನಿಗಳು ಇದ್ದರೂ ಕೂಡಾ ಆ ನಷ್ಟ ಹೊಂದುವುದಕ್ಕೆ ಕಾರಣವೇನು ಎನ್ನುವುದನ್ನು ನಾವು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡದೆ ಅದನ್ನು ಮಾರಾಟ ಮಾಡುವುದರಿಂದ ಸುಲಭವಾಗಿ ನಾವು ಸರ್ಕಾರಿ ವಲಯದ ಕಾರ್ಖಾನೆಗಳ ಹಣವನ್ನೆಲ್ಲಾ ಖಾಸಗಿಯವರ ಕೈಯಲ್ಲಿ ಕೊಡತಕ್ಕಂಥದ್ದು : ಅಂದರೆ we are giving these industries in the hands of woolves. We are giving these industries to multi-nationals. They are coming in a big way to startindustries. If the State Government cannot organise these industries and make them yield returns I think it is a total failure on the part of the Government. I feel that there should be no failure on the part of the Government. The State Government should take all the industries which are handed over to private people because there is concentration of wealth in the hands of few people. This will destrey the entire face of the State and the country and we are at the mercy of these multi-nationals. That is why I am asking the previous Government as to why they had entangled with the conspiracy of these multi-nationals. Many of them have gone on a so-journ journey spending hugeaums of money in the guise of bringing technical know-how and racting NRI Investment. They have not brought anything, What was the discussion the had ? Who were all the persons they met ? Who were all the multi-nationals they met. What has happened to be these multinationals and their said investment. This is a big conspirace to see that democratic set up and social structure have been dilutey It may be directly or indirectly. Public Sector industries should not be handed over to private people,

SRI T. N. NARASIMHA MURTHY.—We are not going to give any public sector industry to private people.

SRI K. LAKKAPPA.—I am poing this question to Sri Yahya. Why the Government has failed in its duty to see that sick industries are activised ? There are inumerable sick industries in the State, either they are sick because of the lack of managerial ability or technigue or they may be sick due to artificial reasons. There is a bureau of public enterprises and according to this Bureau all these public sector undertakings should be lead by technical persons.

A technical man trained for the purpose should be appointed in these public sector undertakings. Take for example Mysore Minerals Ltd.. which is running under profit. Whey they have not appointed a Technical Director as Managing Director and Chairman ? Why an IAS Officer has been appointed there ? Inspite of the representations by about 50 MLAs and 4 MPs a technical man has not been appointed to MML to head , This Officer takes money with kerchief. This kind of things should be stopped and the Government should take care of it. An intelligent officer should be posted there and that inefficient Officer should be removed forthwith. Why the Government taken this as a prestige issue, I don't know. I met the Chief Minister, Finance Minister and everybody and not less than 40-50 MLAs and some 4-5 MPs have also represented but no action has been taken. What is the vested interest involved I do not know there. That is how you want to sell it to private people ? This is not the policy. You have to see that the public sector should be survived. They have become sick for various reasons which I have already quoted.

As regards allotment of lands to the industrialists, KIADB is working in such a manner that the industrialists are not benefitted. They purchase land in various parts of our State and they are selling the same for an abnormal rate to the small industrialists. You are not going to give electricity ; you are not going to give finance through financial institutions and you are not going to give water but you only purchase lands from the farmers at a small price and selling it to the industrialists at Rs. 3, 4 or 5 lakhs and in Tumkur and other areas, the land value has gone upto Rs. 2 lakhs. What is that you are encouraging the small industrialists in bringing the industrial glory in the State ? I don't know how KIADB is functioning. Their job is only to acquire lands and sell them to industrialists at a high rate. Therefore, they should see that the lands be given to the small industrialists at a small price.

As regards the details of the sick units subsidy & development loan due from the Government, I would like to say few things. Once again the single window concept, how it has failed. I will explain. The single window concept is that money, land, water, electricity, technical know-how for a project and everything mooted through a single agency... ...

MADAM DEPUTY SPEAKER.—Mr. Lakkappa, please conclude. You have taken 20 minutes.

SRI K. LAKKAPPA.—Alright. I will conclude in another 20 minutes. I have requested yesterday itself and my time cannot be taken by others.

MADAM DEPUTY SPEAKER.—There is a long list.

SRI K. LAKKAPPA.—I know that. That is why yesterday only they wanted to close this debate but I only raised the point that the debate should continue.

The single window concept is to give encouragement to the small scale industries but what is happenning to small scale industries to-day ? To-day, everywhere, they are closed and only big people who have got money are surviving because they enjoy all partonage. In Bangalore, these few big people are merrily enjoying all patronage but outside Bangalore, these small scale industries had become sick. Madam, unfortunately, in rural parts, there is no arrangement for a sinnle window concept. Therefore, at the highest level, the discussion had taken place in this regard. Than, no agro-industries are coming up. They have prepared a list which is not workable because of out-moded technology and there is no upgrading of technology. Even in Karnataka, sofar as rapid industrialisation is concerned what is the investment in rural and in urban areas ? The concentration of industies is in Bangalore only and now we have made it very clear that because of hazards of pollution, atmosphere pollution, water pollution, air pollution etc., there should not be further growth or concentration of industries in Bangalore. Therefore, no action has been taken except only constructing some industrial sheds. Then, these industrial sheds had been allotted according to their tastes, according to their manovures. This is going on everywhere and rural industrialist, small entrepreneur and unemployed person is not getting anything. As regards Self-employment scheme, I would like to know how many of them have become self-employed. I will take the Hon'ble Minister for Industries to various parts of our State where self-employed industrialists have started industries. Then only he will be able to know how many of them have survived and what is the infra-structure they have developed and what is the incentives they have been given.

ಶ್ರೀ ವಾಟಾಳ್ ನಾಗರಾಜ್.—ನಾವು ಕರ್ನಾಟಕದಲ್ಲಿದ್ದೇವೆ. ಇವರು ಕನ್ನಡದಿಂದ ಇಂಗ್ಲೀಷಿಗೆ ಹೊರಟು ಹೋಗಿದ್ದಾರೆ. ಇದು ಕರ್ನಾಟಕದ ವಿಧಾನ ಸಭೆ. ಇಲ್ಲಿ ಕನ್ನಡದಲ್ಲಿಯೇ ಮಾತನಾಡಬೇಕು. ಇದು ದೆಹಲಿಯ ಲೋಕಸಭೆಯಲ್ಲ. ಇನ್ನೂ ನಮಗೆ ಲೋಕಸಭೆಯ ಆ ಗುಂಗು ಹೋಗಿಲ್ಲ.

ಉಪಾಧ್ಯಕ್ಷರು.—ತಾವು ಜಾಗ್ರತೆ ಮುಗಿಸಿ.

SRI K. LAKKAPPA.—I would like to list out the details of the sick Units, subsidy and development loans due from the Government

ಶ್ರೀ ಎಂ. ರಾಮಪ್ಪ.—ನನ್ನಗೊಂದು ಕ್ರಿಯಾಲೋಪವಿದೆ. ಏನೆಂದರೆ. ನಮ್ಮನ್ನು ಕನ್ನಡದಲ್ಲೇ ಮಾತನಾಡಬೇಕು ಎಂದು ಹೇಳುವ ಅಧಿಕಾರ ಅವರಿಗೆ ಇಲ್ಲ. ನಾನು ತೆಲುಗಿನಲ್ಲಿ ಮಾತನಾಡುತ್ತೇನೆ ಮಾತನಾಡಬಾರದೆಂದು ಹೇಳಲು ಇವರಿಗೆ ಏನು ಅಧಿಕಾರ ಇದೆ,

ಶ್ರೀ ವಾಟಾಳ್ ನಾಗರಾಜ್.—ಇಡೀ ಕರ್ನಾಟಕದ ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ. ೧೦೦ಕ್ಕೆ ೧೦೦ ರಷ್ಟು ಕನ್ನಡದಲ್ಲಿಯೇ ಮಾತನಾಡಬೇಕು. ಬೇರೆ ಭಾಷೆಯಲ್ಲಿ ಮಾತನಾಡಬಾರದು. ಆ ರೀತಿ ಮಾಡಿದರೆ ಅದು ಈ ರಾಜ್ಯಕ್ಕೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ, ಈ ರಾಜ್ಯಕ್ಕೆ ಅಪರಾಧ ಮಾಡಿದಂತಾಗುತ್ತದೆ. ಈ ರಾಜ್ಯಕ್ಕೆ ಅಗೌರವ ಮಾಡಿದಂತಾಗುತ್ತದೆ.

ಉಪಾಧ್ಯಕ್ಷಣಿಯವರು.—ವಾಟಾಳ ನಾಗರಾಜ್ ಅವರೇ ತಾವು ಎಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೀರಿ. ನೀವು ನಿಮ್ಮ ಜಾಗಕ್ಕೆ ಹೋಗಿ ಮಾತನಾಡಬೇಕು.

ಶ್ರೀ ಎಂ. ರಾಮಪ್ಪ.—ಕನ್ನಡದ ದುರಭಿಮಾನ ಕನ್ನಡವನ್ನು ಹಾಳು ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಎಲ್ಲವೂ ಕನ್ನಡದಲ್ಲೇ ನಡೆಯಬೇಕು. ಬೇರೆ ಮಾತೆ ಇಲ್ಲ. ಇದು ಆಂಧ್ರ, ತಮಿಳುನಾಡು ಅಲ್ಲ, ಇದು ಕರ್ನಾಟಕ ರಾಜ್ಯ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾನು ಕನ್ನಡದಲ್ಲಿ ಮಾತನಾಡಬೇಕೆಂದು ಹೇಳುತ್ತೇನೆ. ಮಾತನಾಡುವುದು ಬಿಡುವುದು ನಿಮಗೆ ಸೇರಿದ್ದದು ಈ ರಾಜ್ಯದ ಭಾಷೆ ಕನ್ನಡ ಕನ್ನಡಕ್ಕೆ ಇಲ್ಲಿ ಮಾನ್ಯತೆ ಕೊಡಬೇಕು. ಕನ್ನಡ ಬಿಟ್ಟು ಇಲ್ಲಿ ಬೇರೆ ಏನೂ ಇಲ್ಲ.

ಶ್ರೀ ಎಂ. ರಾಮಪ್ಪ.—ತಾವು ರೂಲಿಂಗ್ ಕೊಡಬೇಕು. ಇದರ ಬಗ್ಗೆ ಹೇಳಲು ಅವರಿಗೆ ಅಧಿಕಾರ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ರಾಜ್ಯದ ಆಡಳಿತ ಭಾಷೆ ಕನ್ನಡ. ಇದು ಕರ್ನಾಟಕ ರಾಜ್ಯ ಆದ್ದರಿಂದ ಇಲ್ಲಿ ಎಲ್ಲವೂ ಕನ್ನಡದಲ್ಲೇ ನಡೆಯಬೇಕು ಎಂಬುದು ನನ್ನ ಮನವಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದೇ ಭಾಷೆಯಲ್ಲಿ ಮಾತನಾಡಬೇಕು ಎಂದು ಹೇಳುವ ಅಧಿಕಾರ ಇವರಿಗೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ನಾಗಮಂಗಲದ ಶಾಸಕರು ನನಗೆ ಏನೂ ಕಲಿಸಬೇಕಾಗಿಲ್ಲ. ಏನು ಮಾತನಾಡಬೇಕು ಎಂಬುದು ನನಗೆ ಗೊತ್ತಿದೆ. ಇವರು ಬೇಕಾದರೆ ನಾಳೆ ತಮಿಳಿನಲ್ಲಿಯೂ ಮಾತನಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಈ ಟೈಂ ನನ್ನದಲ್ಲ. ಕನ್ನಡದಲ್ಲಿ ಮಾತನಾಡಬೇಕೆಂದು ಹೇಳಿ ದೆಹಲಿಯಲ್ಲಿ ಪಾರ್ಲಿಮೆಂಟ್‌ನಲ್ಲಿ ನಾನು ಮತ್ತು ಜೆ. ಹೆಚ್. ಪಟೇಲರು ಕನ್ನಡದಲ್ಲೇ ಭಾಷಣ ಮಾಡಿದ್ದೆವು. ಹಾಗೂ ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುವವರದ್ದನ್ನು ಆ ಕೂಡಲೇ ಬೇರೆ ಭಾಷೆಗೆ ತರ್ಜುಮೆ ಮಾಡಿಸಿದವನು ನಾನು ಆದ್ದರಿಂದ ನನಗೆ ಕನ್ನಡದ ಬಗ್ಗೆ ಎಲ್ಲರಿಗಿಂತ ಹೆಚ್ಚು ಅಭಿಮಾನ ಇದೆ.

ಉಪಾಧ್ಯಕ್ಷಣಿಯವರು.—ವಾಟಾಳ್ ನಾಗರಾಜ್ ಅವರೇ ನೀವು ಯಾವ ಸೀಟಿನಲ್ಲಿ ಕುಳಿತು ಮಾತನಾಡುತ್ತಿದ್ದೀರಿ ? ಇದು ನಿಮ್ಮ ಜಾಗ ಅಲ್ಲ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಆಶೀರ್ವಾದದಿಂದ ಈ ಜಾಗಕ್ಕೆ ಬಂದಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈಗ ವಾಟಾಳ್ ನಾಗರಾಜ್‌ರವರ ಜಾಗ ಈಗ ಬದಲಾವಣೆಯಾಗಿದೆ

ಉಪಾಧ್ಯಕ್ಷಣಿಯವರು.—ಅವರಿಗೆ ಯಾವ ಭಾಷೆಯಲ್ಲಿ ಬೇಕಾದರೂ ಮಾತನಾಡುವ ಹಕ್ಕಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾಗಮಂಗಲದ ಶಾಸಕರೂ ವಾಟಾಳ್ ನಾಗರಾಜ್‌ರವರೂ ಒಂದೇ ಕಡೆ ಇದ್ದರು. ಇವತ್ತು ಆ ಇಬ್ಬರನ್ನೂ ಬೇರೆ ಬೇರೆ ಮಾಡಿದ್ದೀರಿ. ಇವತ್ತು ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡಿದ್ದಾರೆಂದು ನನಗೆ ತಿಳಿಯಿತು.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವು ಅರ್ಥ ಮಾಡಿಕೊಂಡಿದ್ದೇವೆ. ಅದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಯಾವ ಭಾಷೆಯಲ್ಲಿ ಚರ್ಚೆ ಪ್ರಾರಂಭ ಮಾಡಿದರೂ ಅದೇ ಭಾಷೆಯಲ್ಲಿ ಮುಗಿಸಬೇಕೆಂದು ನಿಯಮದಲ್ಲಿದೆ.

ಶ್ರೀ ಸಿ. ಬೈರೇಗೌಡ.—ಯಾವ ಭಾಷೆಯಲ್ಲಿ ಅವರು ಚರ್ಚೆ ಪ್ರಾರಂಭಿಸಿದರೂ ಅದೇ ಭಾಷೆಯಲ್ಲಿ ಮುಗಿಸಬೇಕು.

ಶ್ರೀ ಕೆ. ಲಕ್ಕಪ್ಪ.—ಕನ್ನಡದಲ್ಲೇ ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ.—ರೂಲ್ಸ್ ಆಫ್ ಪ್ರೊಸೀಜರನಲ್ಲಿ ಏನಿದೆ ಅಂದರೆ ಯಾವ ಭಾಷೆಯಲ್ಲಿ ಪ್ರಾರಂಭ ಮಾಡಿದರೂ ಅದೇ ಭಾಷೆಯಲ್ಲಿ ಮುಂದುವರಿಸಬೇಕೆಂದು. ಅದನ್ನು ನಾನು ಹೇಳುತ್ತಿದ್ದೇನೆ

ಉಪಾಧ್ಯಕ್ಷಣಿಯವರು.—ಅವರು ಹಳೆಯ ಮೆಂಬರ್ ಇದ್ದಾರೆ, ಅವರಿಗೆ ಎಲ್ಲಾ ಗೊತ್ತಿದೆ. ಶ್ರೀ ಲಕ್ಕಪ್ಪನವರೇ ನೀವು ಮುಂದುವರಿಸಿ,

ಶ್ರೀ ಎಲ್ ಆರ್. ಶಿವರಾಮೇಗೌಡ.— ಅವರು ಹಿರಿಯರು, ಬಹಳ ಅನುಭವಿಗಳು ಇದ್ದಾರೆ. ಅವರಿಗೆ ಕನ್ನಡ ಚೆನ್ನಾಗಿ ಬರುತ್ತದೆ. ಕೈಗಾರಿಕೆಗಳ ಬಗ್ಗೆ ಕನ್ನಡದಲ್ಲಿಯೇ ಹೇಳಿದರೆ ಚೆನ್ನಾಗಿರುತ್ತದೆ.

SRI K. LAKKAPPA.—I will list out the names of the districts which are in arrears of not paying the subsidies.

Bangalore (Rural)...6.90
Bangalore (Urban)...46,25
Belgaum...16.27
Bellary...2,96
Bidar...22.5
Bijapur...3.60
Chickkamagalur...same
Chitradurga...12.89
Dharwad...6,61
D. K. Dt....16.15
Gulbarga ..Samething
Kodagu...Samething
Kolar...1.07

Hassan, same thing, Mandya 0.51, Mysore 14.67. Raichur 4.29, Shimoga 17.80, Tumkur 38.54, Uttar Kannada, same thing 210.57 in arrears. They have not paid. How can anybody survive ? Becauce Previous Government taken away all the money which was kept it in the treasury and closed the treasury me cheques given of them were boumed But they have also eaten this money. Therefore our Government wich is six months old, should see somehow for survival of these industries.

MADAM DEPUTY SPEAKER.—Mr Lakkappa, please conclude. According to the Business Advisory Committee...

SRI K. LAKKAPPA.—I would like to touch few more points.

MADAM DEPUTY SPEAKER.—Please co-operate.

SRI K. LAKKAPPA.—Electricity is most important because one has to supplement and complement the other, for smooth indusrial growth Unless the electricity is available to the industries there is no progress in the industrial development and industrial growth Electricity we are getting is only through hydal power we will get about 49 percent and in thermal we have got 26, and in the nuclsar it is only one point. Therefore taking all these things into consideration the power corporation is making a good administ ration and progress. unfortunately, varabi, kaiga and thermal in Raichur, they are all delayed. but I hope only because yahya told recently that the Varabi is coming up and all these things.

ಉಪಾಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ತಾವು ಇನ್ನು ಎರಡು ನಿಮಿಷಗಳಲ್ಲಿ ಮುಗಿಸಬೇಕು.

SRI K. LAKKAPPA.—And that corporation is running properly and why transmission and distribution loses? This loses is in the electricity board. These transmission and distribution should be changed from this Board, that means, it should be re-structured because there is an average of Rs. 200.04 crores. For pumpset and other things If a farmer fail to pay his electricity bill will they cut off the electricity bill with the crores and crores of rupees arrears all these industrialists are going merrily and they are running industries and stealing electricity by the changing the meter. This is the type of administration in conviance with the officers attached to this Board. That is your electricity Board. Then this NGEF has got a big story. Our former Chief Minister has gone to patronise his son to run an industry. He has got another NGEF branch at Hubli. I think he should be explaining to you better. Wherever ancillaries are available, ancillary units have been patronised to their own kith and kins.

DEPUTY SPEAKER.—Mr. Lakkappa, I want you to conclude.

ಶ್ರೀ ಎಸ್. ಹೆಚ್. ಕೌಜಲಗಿ.—ಉತ್ತರ ಕರ್ನಾಟಕದಲ್ಲಿ ಯಾವ ಇಂಡಸ್ಟ್ರೀಸ್ ಬರಬಾರದು ಎನ್ನುವುದು ನಿಮ್ಮ ಉದ್ದೇಶವೇ ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಆ ಭಾಗಕ್ಕೆ ಕೈಗಾರಿಕೆ ಬರಲಿ ; ಆದರೆ ನಿಮ್ಮ ನಾಯಕರ ಮಗನಿಗೆ ಕೊಡುವುದು ಬೇಡ.

SRI K. LAKKAPPA.—There is lack of planning, strategy and skill. Nothing is available in the public sector undertaking and except making the Industry Sick. The officers who are working in the public undertakings, are all transferred to private undertaking and they are enjoying their patronise. This is the situation. Therefore, I would like to see that this commanding height of the public sector should survive in this state and wherever it is possible and this multi national and Fera violators should not be allowed to operate in Karnataka. I am asking another very important pertinent question, as to what happened to that NRI people, and discussion with them, a report in this behalf should come before this House and you must make an enquiry about that matter who are all those persons, etc; I am afraid because the outmoded technology is costing the progress of our State. Because of that, under the guise of NRI investment, has been brought here. Therefore, in Europe or in in America they are selling the outmoded technology even for consumer goods, Agriculture and allied industries. Today agriculture industry is starving in the State and woodindustries are starving, lether industries are loosing and this is the kind of situation that has been prevailing. Thererefore, the whole industrial structure has to be changed and policy of adopting and bifircation and demarcation of the public sector and private sector, corporate sector has to be done and immediately all these industries

sick industries have to be broughtup. Managerial posts even top people have not been posted to various public undertakings. Therefore, the Karnataka's glory, Karnataka's prestige, Karnataka's status should not be impaired while diverting the industrial policy and selling out to these private industrialsts.

ಉಪಾಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ. ಲಕ್ಕಪ್ಪ.—ಉಪಾಧ್ಯಕ್ಷರೆ. ನಾನು ಕನ್ನಡದಲ್ಲಿಯೇ ನನ್ನ ಭಾಷಣವನ್ನು ಮುಗಿಸಬೇಕೆಂದು ಮಾನ್ಯ ಬೈರೇಗೌಡರು ಹೇಳಿದರು. ಈ ಒಂದು ಕಾರ್ಯಕ್ರಮವನ್ನು ನಮ್ಮ ಕೈಗಾರಿಕಾ ಮಂತ್ರಿಗಳು ಈ ಅನೇಕ ವಿಚಾರಗಳನ್ನೆಲ್ಲಾ ಸಂಗ್ರಹಣೆ ಮಾಡಿ, ಈ ಒಂದು ಕೈಗಾರಿಕೆಗೆ ಒಳ್ಳೆಯ ಚಿಕಿತ್ಸೆ ಮಾಡಿ ಈ ರಾಜ್ಯದ ಗೌರವವನ್ನು, ಘನತೆಯನ್ನು ಮತ್ತು ಈ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಸಾಮಾಜಿಕ ನೀತಿಯನ್ನು ಮತ್ತು ಈ ರಾಜ್ಯದ ಮಕ್ಕಳಿಗೆ ಉದ್ಯೋಗವನ್ನು ಕಲ್ಪಿಸಿಕೊಡತಕ್ಕಂಥ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಆಗಲಿ, ಮತ್ತೆ ಅನ್‌ಎಂಪ್ಲಾಯ್ಡ್ ಗ್ರಾಜ್ಯುಯೇಟ್ಸ್ ಪ್ರೋಗ್ರಾಮ್ಸ್ ಪ್ರಾಜೆಕ್ಟ್ ಆಗಲಿ, ಪ್ರತಿಯೊಂದರಲ್ಲೂ ಕೂಡ, ತಾವು ಸರಿಯಾದ ರೀತಿಯಲ್ಲಿ ನಡೆಸಿ. ಸರಿಯಾದ ಹಾದಿಯಲ್ಲಿ ಇಡಬೇಕೆಂದು ಹೇಳಿ ನಾನು ಪ್ರಾರ್ಥನೆ ಮಾಡಿಕೊಂಡು ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಧ್ಯಕ್ಷರೆ. ಇವರು ರಾಜೀವ್ ಗಾಂಧಿಯವರು ಭಾಷಣ ಮಾಡಿದಂತೆ ಆಯಿತು. ಕನ್ನಡದಲ್ಲಿ ಶುರುಮಾಡಿ, ಕನ್ನಡದಲ್ಲಿ ಮುಗಿಸಿದ ಹಾಗೆ ಇವರೂ ಸಹ ತಮ್ಮ ಭಾಷಣವನ್ನು ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಉಪಾಧ್ಯಕ್ಷರೆ. ನೆನ್ನೆ ತಾನೇ ಕಾರ್ಯಕಲಾಪಗಳ ಸಲಹಾ ಮಂಡಲಿಯಲ್ಲಿ, ಇವೊತ್ತು ಒಂದು ಗಂಟೆ ಕಾಲ ಚರ್ಚೆ ಮುಂದುವರಿಸಬೇಕು ಆಮೇಲೆ ಸನ್ಮಾನ್ಯ ಸಚಿವರಿಂದ ಉತ್ತರ ಆಗಬೇಕೆಂದು ನಿರ್ಣಯ ಆಗಿದೆ. ಇಂದು ಎರಡು ಗಂಟೆಗೆ ಚರ್ಚೆ ಪ್ರಾರಂಭವಾಗಿದೆ ಈಗಾಗಲೇ ಮೂರೂವರೆ ಗಂಟೆಯಾಗಿದೆ. ದಯಮಾಡಿ ಇದನ್ನು ನಿಯಂತ್ರಿಸಿ ನಾಲ್ಕು ಗಂಟೆಗೆ ಸರಿಯಾಗಿ ಮಾನ್ಯ ಸಚಿವರು ಉತ್ತರವನ್ನು ಕೊಡುವುದಕ್ಕೆ ತಾವು ಅನುವು ಮಾಡಿ ಕೊಡಬೇಕು.

ಉಪಾಧ್ಯಕ್ಷರು.—ಎಲ್ಲರೂ ಹತ್ತು, ಹತ್ತು ನಿಮಿಷ ಮಾತನಾಡಿದರೆ ಇನ್ನೂ ಮೂರು ನಾಲ್ಕು ಜನರು ಮಾತನಾಡಬಹುದು. ಈಗ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಇಂದಿನ ಬೇಡಿಕೆಗಳ ಚರ್ಚೆಯಲ್ಲಿ, ಪಾಲ್ಗೊಳ್ಳುವ ಇಚ್ಛೆ ನನಗೆ ಇರಲಿಲ್ಲ. ಆದರೆ ನನಗೆ ಸ್ಫೂರ್ತಿ ನೀಡಿದವರು ಈಗಿನ ವಿದ್ಯುತ್ ಮತ್ತು ಕೈಗಾರಿಕಾ ಮಂತ್ರಿಗಳು. ಅವರು ಜುಲೈ ಒಂದನೇ ತಾರೀಖು ಮಾಡಿದ ಭಾಷಣದ ವರದಿ ಎರಡನೆಯ ತಾರೀಖು ಪತ್ರಿಕೆಯಲ್ಲಿ ಪ್ರಕಟ ಆಗಿದೆ. ಕರ್ನಾಟಕ ರಾಜ್ಯದ ಹಣಕಾಸು ಸಂಸ್ಥೆಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಾಖೆಯನ್ನು ಉದ್ಘಾಟನೆ ಮಾಡುತ್ತಾ ಮಾನ್ಯ ಮಂತ್ರಿಗಳು ಎರಡು ಮಾತನ್ನು ಹೇಳಿದ್ದಾರೆ. ಅದನ್ನು ನಾನು ಹೇಳುತ್ತೇನೆ.

> "ರಾಜ್ಯದ ವಿದ್ಯುತ್ ಕೊರತೆಯನ್ನು ಪರಿಹರಿಸುವುದು ಸರ್ಕಾರದ ಪ್ರಥಮ ಆದ್ಯತೆ. ಇನ್ನು ಮುಂದೆ ವರ್ಷಕ್ಕೆ ಕನಿಷ್ಟ ಎರಡು ವಿದ್ಯುತ್ ಘಟಕಗಳನ್ನು ಸರ್ಕಾರ ಆರಂಭಿಸಲಿದೆ ಎಂದರು. ಕಪ್ಪುಯುಗ ೧೯೮೫ ರಿಂದ ೧೯೯೦ರ ವರೆಗಿನ ಅವಧಿ ಅನುತ್ಪಾದಕವಾಗಿತ್ತು."

ಎಂದು ಯಾಹ್ಯಾ ಅವರು ಒಂದೇ ಒಂದು ವಿದ್ಯುತ್ ಉತ್ಪಾದನಾ ಘಟಕ ಕೂಡ ಈ ಅವಧಿಯಲ್ಲಿ ಕಾರ್ಯಾರಂಭ ಮಾಡಿಲ್ಲ. ಇದ್ದಷ್ಟೇ ವಿದ್ಯುತ್ತನ್ನು ಎಲ್ಲರಿಗೂ ಹಂಚಿದ ಹಿಂದಿನ ಸರಕಾರ ಈ ವಿಷಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿತ್ತು ಎಂದು ಟೀಕಿಸಿದರು ಎಂದು ಇದೆ. ವಿದ್ಯುತ್ ನಿಲುಗಡೆಯ ಈ ದಿನಗಳು ಕಪ್ಪು ಯುಗ ಅದನ್ನು ಮರೆತು ಬಿಡಿ ಎಂದು ಹೇಳಿದ್ದಾರೆ. ಮಾನ್ಯ ಯಾಹ್ಯಾರವರನ್ನು ನಾನು ಪ್ರಶ್ನೆ ಮಾಡುತ್ತೇನೆ, ಇವತ್ತು ಒಬ್ಬ ಹುಡುಗಿ ಮದುವೆಯಾಗಿ ನಾಳೆ ಒಂದು ಗಂಡು ಮಗುವನ್ನು ಎತ್ತಿಕೊಂಡು ಬಂದು ಇದು ನನ್ನ ಮಗು ಎಂದು ಹೇಳುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಅದಕ್ಕೂ ಕಾಲ, ಸಮಯ ನಿಯಮ ಎಲ್ಲಾ ಬೇಕಾಗುತ್ತವೆ, ಕರ್ನಾಟಕ ರಾಜ್ಯಕ್ಕೆ

ಸೀಮಿತವಾಗಿ ನಾನು ಹೇಳುತ್ತಿಲ್ಲ. ವಿದ್ಯುತ್ ಉತ್ಪಾದನೆಗೆ ನಮಗೆ ಮೂರು ಮೂಲಗಳು ಇದೆ. ಒಂದು ಜಲ ವಿದ್ಯುತ್, ಮತ್ತೊಂದು ಅಣು ವಿದ್ಯುತ್ ಹಾಗೂ ಇನ್ನೊಂದು ಥರ್ಮಲ್ ಪ್ರಾಜೆಕ್ಟ್. ಇವನ್ನು ಬಿಟ್ಟರೆ ವಿಶ್ವದಲ್ಲಿ ಹೊಸದಾಗಿ ಕ್ಯಾಲಿಫೋರ್ನಿಯಾದಲ್ಲಿ ೨೫೦ ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡತಕ್ಕಂತಹ ವಿಂಡ್ ಎನರ್ಜಿ ಇದೆ. ಇತ್ತೀಚೆಗೆ ಹೊಸದಾಗಿ ನಾನ್-ಕನ್‌ವೆನ್‌ಷನಲ್ ಆಗಿ ಮಾಡತಕ್ಕಂಥಾದ್ದು ಇದೆ. ಅಂದರೆ ಸೂರ್ಯ ಕಿರಣಗಳಿಂದ ವಿದ್ಯುತ್ ಉತ್ಪಾದನೆ ಮಾಡತಕ್ಕಂತಹ ಪದ್ಧತಿ ಹೊಸದಾಗಿ ಬಂದಿದೆ. ಸೂರ್ಯ ಕಿರಣದಿಂದ ಮನೆಯಲ್ಲಿ ನೀರು ಕಾಯಿಸಬಹುದು. ಇದರಿಂದ ಅಡಿಗೆ ಮಾಡುವುದಕ್ಕೆ ಕೂಡ ಸಾಧ್ಯವಾಗುವುದಿಲ್ಲ. ಕ್ಯಾಲಿಫೋರ್ನಿಯಾದ ವಿಂಡ್ ಎನರ್ಜಿ ಒಂದನ್ನು ಬಿಟ್ಟರೆ ಜಗತ್ತಿನ ಬೇರೆಲ್ಲೂ ಕೂಡ ಹತ್ತು ಮೆಗಾವಾಟ್‌ಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡತಕ್ಕಂತಹ ವಿಂಡ್ ಎನರ್ಜಿ ಇರುವುದು ನನಗೆ ಕಾಣಲಿಲ್ಲ. ಇಂತಹ ಪರಿಸ್ಥಿತಿಯೊಳಗೆ ಹಿಂದಿನ ಸರಕಾರದ ಮೇಲೆ ಮಾನ್ಯ ಯಾಹ್ಯಾರವರು ಮಾಡಿರತಕ್ಕಂತಹ ಆಪಾದನೆ ಏನು ಇದೆ ಅದನ್ನು ಅವರು ಸಾಬೀತು ಮಾಡಬೇಕು, ಅದು ಸಾಬೀತಾಗದಿದ್ದರೆ ಅವರು ಹೇಳಿದ್ದು ಏನು ಇದೆ ಅದು ನನ್ನ ಅಪರಾಧವೆಂದು ಒಪ್ಪಿಕೊಳ್ಳಬೇಕು. ೧೯೮೯-೯೦ರ ವರದಿಯನ್ನು ನೋಡಿದರೆ ನಮಗೆ ಕೆಲವು ವಿವರಗಳು ಸಿಕ್ಕುತ್ತವೆ. ನಮ್ಮಲ್ಲಿರತಕ್ಕಂತಹ ವಿದ್ಯುಚ್ಛಕ್ತಿಯ ಮೂಲಗಳು ಏನು ? ನಾನು ಮೊದಲೇ ಹೇಳಿದ ಹಾಗೆ ಏನು ಬಹಳ ವಿಶೇಷವಾಗಿ ಜಲ ಮೂಲಗಳೇ ಆಗಿವೆ. ಶಿವನ ಸಮುದ್ರ, ಶಿಂಪಾ, ಜೋಗ್ ಮತ್ತು ಮುನಿರಾಬಾದ್ ಈ ನಾಲ್ಕನ್ನು ಈ ಜಲ ಮೂಲ ವಿದ್ಯುತ್ ಅನ್ನು ಉತ್ಪಾದನೆ ಮಾಡುವ ಪಟ್ಟಿಯಲ್ಲಿ ಸೇರಿಸಿದ್ದೇವೆ. ನಮ್ಮ ಕರ್ನಾಟಕದಲ್ಲಿ ಜಲ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಅವಕಾಶ ಇನ್ನೂ ಸಾಕಷ್ಟು ಇದೆ. ಆದರೆ ಅದನ್ನು ಮಾಡುವುದಕ್ಕೆ ಹೋದರೆ ಕೆಲವರು ವಿರೋಧ ಮಾಡುತ್ತಾರೆ. ಮಹದಾಯಿ ಯೋಜನೆಯನ್ನು ಮಾಡಬೇಕೆಂದರೆ ಪರಿಸರವಾದಿಗಳು ವಿರೋಧ ಮಾಡುತ್ತಾರೆ. ಮಡಕೇರಿಯಲ್ಲಿ ಒಂದು ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಪ್ರಯತ್ನ ನಡೆಯಿತು, ಅದರ ವಿರುದ್ಧ ಪರಿಸರವಾದಿಗಳು ದೊಡ್ಡ ರಾದ್ಧಾಂತವನ್ನೇ ಮಾಡಿದರು.

ಶ್ರೀ ಕೆ. ರಮಾನಾಥ ರೈ.—ಅದರ ನಾಯಕರುಗಳು ಯಾರೆಂದು ಗೊತ್ತಿದೆಯೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮಗೆ ಗೊತ್ತಿಲ್ಲದಿದ್ದರೆ ಹೇಳೋಣ ಬಿಡಿ, ಒರಪ್ಪೋಳೆ. ಮಹದಾಯಿ ಈ ಜಲ ವಿದ್ಯುತ್ ಯೋಜನೆಗಳ ಮೂಲಗಳಿಂದ ವಿದ್ಯುತ ಅನ್ನು ಉತ್ಪಾದನೆ ಮಾಡತಕ್ಕಂಥ ಕೆಲಸ ಇನ್ನು ಮುಂದಕ್ಕೆ ಸಾಧ್ಯವಿಲ್ಲವೋ ಏನೋ ಎನ್ನುವ ಸ್ಥಿತಿಗೆ ಹಿಂದಿನ ಸರಕಾರ ಬಂದಿತ್ತು ಮತ್ತು ಮುಂದಿನ ಸರಕಾರ ಬರಬೇಕಾಗಿದೆ. ಹೊಸದಾಗಿ ವರಾಹಿ ಮೊದಲನೇ ಘಟಕದ ವಿದ್ಯುತ್ ಉತ್ಪಾದನೆ ಮಾಡಿದೆ. ೨ನೇ ಘಟಕ ಇನ್ನು ೧೫ ದಿವಸದಲ್ಲಿ ಪ್ರಾರಂಭವಾಗುತ್ತದೆಂದು ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿದ್ದಾರೆ. ವರಾಹಿ ಮುಳುಗಡೆ ಪ್ರದೇಶದಿಂದ ಬಂದಿರತಕ್ಕಂತಹ ಮನುಷ್ಯ ನಾನು ೧೯೮೪-೮೫ರಲ್ಲಿ ನಾನು ವಿಧಾನ ಸಭೆಯ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದು, ಆ ಕಾಲದಲ್ಲಿ ವರಾಹಿ ಬಗ್ಗೆ ನಾನು ಮತ್ತು ನನ್ನ ಅಂದಿನ ಸರಕಾರ ವಿಶೇಷವಾದ ಆಸಕ್ತಿಯನ್ನು ವಹಿಸದಿದ್ದರೆ ಇವತ್ತು ಮಾನ್ಯ ಯಾಹ್ಯಾರವರು ಏನು ಇನ್ನು ೧೫ ದಿವಸದಲ್ಲಿ ಅದನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ, ಅದನ್ನು ಉದ್ಘಾಟನೆ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

೩-೩೫ ಪಿ. ಎಂ.

೨೪ ಸಾವಿರ ಎಕರೆ ಮುಳುಗಿದೆ. ಅಲ್ಲಿಯ ಜನರು ಇನ್ನೂ ಪರಿಹಾರಕ್ಕೋಸ್ಕರ ಹಂಬಲಿಸುತ್ತಿದ್ದಾರೆ. ಅಲ್ಲಿಯ ಜನರು ಇನ್ನೂ ಕಂಬ ಕಂಬ ಸುತ್ತುತ್ತಿದ್ದಾರೆ. ಇವತ್ತಿನವರೆಗೂ ಇವರಿಗೆ ಹೈ ಪವರ್ ಕಮಿಟಿಯನ್ನು ಕರೆಯುವುದಕ್ಕೆ ಆಗಿಲ್ಲ. ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಇಡೀ ಕರ್ನಾಟಕದ ಮುಖ್ಯಮಂತ್ರಿಗಳಾದಿಯಾಗಿ ಕ್ಯಾಬಿನೆಟ್ ಸಭೆ ನಡೆಯಿತು. ಅದು ಏತಕ್ಕಾಗಿ ನಡೆಯಿತು ? ಅಲ್ಲಿ ಮುಳುಗಡೆಯಾದ ಜನರಿಗೆ ಪುನರ್ ವ್ಯವಸ್ಥೆ ಕಾರ್ಯವನ್ನು ಪೂರ್ಣಗೊಳಿಸುವುದಕ್ಕೆ ಕ್ಯಾಬಿನೆಟ್ ಸಭೆಯೇ ಅಲ್ಲಿಗೆ ಹೋಯಿತು. ಆದರೆ ಇವತ್ತಿನವರೆಗೂ ಪರಿಹಾರ ಕಾರ್ಯ ಮಾಡುವುದಕ್ಕೆ ಆಗಿಲ್ಲ. ೧೧೫ ಮೆಗಾವ್ಯಾಟ್‌ನ ೨ ಯೂನಿಟ್‌ಗಳನ್ನು ಇನ್ನು ೧೫ ದಿನಗಳಲ್ಲಿ ಪ್ರಾರಂಭ ಮಾಡುತ್ತೇವೆಂದು ಇಂದಿನ ಮಂತ್ರಿಗಳು ಹೇಳುವುದಾದರೆ, ಇದು ಹೇಗೆ ಸಾಧ್ಯ ಎಂಬುದನ್ನು ತಾವು ಯೋಚನೆ ಮಾಡಬೇಕು. ಯಾವುದೇ ಒಂದು ವಿದ್ಯುತ್ ಯೋಜನೆ ೨೦೦೦ ಇಸವಿಗೆ ಆಗಬೇಕೆಂದು ಯೋಜನೆಯನ್ನು ಇವತ್ತು ಮಾಡಿದರೆ ಅದು ೨೦೦೦ ಇಸವಿಗೆ ಕಾರ್ಯಾರಂಭ ಶುರುವಾಗುತ್ತದೆ. ೧೯೭೪-೭೫ರಲ್ಲಿ ಪ್ರಾರಂಭವಾದ ವರಾಹಿ ಏನಿದೆ ಇದರ ೨ನೇ ಘಟಕವನ್ನು ೧೬ ವರ್ಷಗಳಾದ ಮೇಲೆ ಈಗ ಉದ್ಘಾಟನೆ ಮಾಡುತ್ತಿದ್ದೀರಿ,

ಆದರೆ ಹಿಂದಿನ ಸರ್ಕಾರದವರು ಏನೂ ಮಾಡಲಿಲ್ಲ ಎಂದು ಹೇಳುವುದಾದರೆ ನಮ್ಮ ಹಿಂದಿನ ಸರ್ಕಾರದವರು ಏನೂ ಮಾಡದೇ ಇದ್ದಿದ್ದರೆ ಇವತ್ತು ನೀವು ಈ ೨ನೇ ಘಟಕವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿತ್ತೇ ಎಂಬುದನ್ನು ನಾನು ಕೇಳಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಮಂತ್ರಿಗಳಾಗಿ ಜವಾಬ್ದಾರಿ ಸ್ಥಾನದಲ್ಲಿರುವವರು ಯಾವುದಾದರೂ ಒಂದು ಆಪಾದನೆಯನ್ನು ಯಾರಮೇಲಾದರೂ ಮಾಡುವಾಗ ಕನಿಷ್ಟ ನಿಯಮಗಳನ್ನಾದರೂ ಪಾಲನೆ ಮಾಡಬೇಕು.

ಶ್ರೀ ಕೆ. ಸಿದ್ದಯ್ಯ.—೧೯೮೪-೮೫ ರಿಂದ ನೀವು ಅಧಿಕಾರವನ್ನು ಬಿಡುವವರೆಗೂ ಪ್ರತಿವರ್ಷ ಬಜೆಟ್‌ನಲ್ಲಿ ವಿದ್ಯುತ್ ಉತ್ಪಾದನೆಗಾಗಿ ಎಷ್ಟು ಹಣವನ್ನು ಇಟ್ಟಿದ್ದಿರಿ ? ಎಷ್ಟು ಹಣವನ್ನು ಈ ಬಾಬಿಗೆ ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.— ಅದನ್ನೂ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಏನು ಮಾಡಿದ್ದಾರೆಂಬುದನ್ನು ನಾನು ತಮಗೆ ನೆನಪು ಮಾಡಿಕೊಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಿಂದ ಕಳುಹಿಸಿದಂಥ ಒಂದೇ ಒಂದು ಯೋಜನೆಗೆ ಕೇಂದ್ರದವರು ಮಂಜೂರಾತಿಯನ್ನು ಕೊಟ್ಟಿದ್ದರೂ ಅದಕ್ಕೆ ನಾವು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಯೋಜನೆಯೇ ಮಂಜೂರಾತಿ ಆಗದಿರುವಾಗ ನಾನು ಹಣವನ್ನು ತೆಗೆದುಕೊಂಡು ಹೋಗಿ ನೀರಿನಲ್ಲಿ ಸುರಿಯಲು ಸಾಧ್ಯವಿಲ್ಲ. ತಾವು ಹೊಸ ಶಾಸಕರಾಗಿರುವುದರಿಂದ ಹೇಳುತ್ತಿದ್ದೇನೆ. ಯಲಹಂಕ ಯೋಜನೆ ಏನಿದೆ, ಅದು ಮಲ್ಟಿ ಫ್ಯೂಯಲ್ ಪ್ರಾಜೆಕ್ಟ್. ಇವತ್ತಿನ ಲೆಕ್ಕದಲ್ಲಿ ಹೇಳುವುದಾದರೆ ಒಂದು ಮಲ್ಟಿ ಫ್ಯೂಯಲ್ ಪ್ರಾಜೆಕ್ಟ್‌ಗೆ ೧೨೦ ಕೋಟಿ ರೂಪಾಯಿಗಳು ಆಗಬೇಕು. ಆದರೆ ಇದನ್ನು ಪ್ರಾರಂಭ ಮಾಡಿದಾಗ ೬೦ ಕೋಟಿ ರೂಪಾಯಿಯ ಅಂದಾಜು ಇತ್ತು. ೪ ವರ್ಷಗಳಾದರೂ ಕೂಡ ಮಾನ್ಯ ರಾಜೀವ್ ಗಾಂಧಿಯವರ ಸರ್ಕಾರದಿಂದ ಕ್ಲಿಯರೆನ್ಸ್ ಸಿಕ್ಕಲಿಲ್ಲ. ಮೊನ್ನೆ ನಮ್ಮ ಹೊಸ ಸರ್ಕಾರ ಬಂದಮೇಲೆ ಇದಕ್ಕೆ ಕ್ಲಿಯರೆನ್ಸ್ ಮಾಡಿಕೊಟ್ಟಿದ್ದಾರೆ ಇವತ್ತು ಈ ಪ್ರಾಜೆಕ್ಟ್‌ನ ಕಾಸ್ಟ್ ೧೨೦ ಕೋಟಿ ರೂಪಾಯಿ. ಹಾಗಾದರೆ ಈ ಹಣವನ್ನು ಯಾರು ಕೊಡಬೇಕು? ಕಳೆದ ಸುಮಾರು ೨೦-೨೫ ವರ್ಷಗಳಿಂದ ನಮ್ಮ ರಾಜ್ಯಸರ್ಕಾರದಲ್ಲಿ ಒಂದೇ ಒಂದು ರೂಪಾಯಿಯನ್ನು ಈ ಬಾಬಿಗೋಸ್ಕರ ಖರ್ಚು ಮಾಡಿದೆ ಎಂದು ತಾವು ತೋರಿಸುವುದಾದರೆ ನೀವು ಕೊಡಬಹುದಾದ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ಇಂಥ ಪ್ರಾಜೆಕ್ಟ್‌ಗಳಿಗೆ ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್‌ನ್ನು ಕೊಡದೆ ರಾಜ್ಯ ಸರ್ಕಾರದವರು ಒಂದೇ ಒಂದು ಪ್ರಾಜೆಕ್ಟ್‌ನ್ನೂ ಕೂಡ ಕೈಗೆತ್ತಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ೧೯೯೦ರಲ್ಲಿ ವರಾಹಿ ಯೋಜನೆಯ ೨ನೇ ಘಟಕ ಪ್ರಾರಂಭವಾಗುತ್ತದೆಂದು ಹೇಳುತ್ತಿದ್ದೀರಿ. ಇದೇ ಕೈಗಾ ಪ್ರಾಜೆಕ್ಟ್‌ಗೆ ಸುಮಾರು ೬-೭ ವರ್ಷಗಳ ಹಿಂದೆ ಕ್ಲಿಯರೆನ್ಸ್‌ನ್ನು ಕೊಟ್ಟಿದ್ದಿದ್ದರೆ ಇವತ್ತು ನಮ್ಮ ವಿದ್ಯುಚ್ಛಕ್ತಿಯ ಅಭಾವವೇ ಬರುತ್ತಿರಲಿಲ್ಲ. ಆದರೆ ಕೇಂದ್ರ ಸರ್ಕಾರದವರು ಒಂದೇ ಒಂದು ಪ್ರಾಜೆಕ್ಟ್‌ನ್ನೂ ಕ್ಲಿಯರ್ ಮಾಡಲಿಲ್ಲ. ಕಾಳಿ ಯೋಜನೆಯ ಜಲ ವಿದ್ಯುತ್ ಯೋಜನೆಯನ್ನು ೧೯೯೫ಕ್ಕೆ ಮುಗಿಸುತ್ತೇವೆಂದು ಪುನಃ ಹೇಳಿಕೊಂಡಿದ್ದಾರೆ. ಇದು ಯಾವಾಗ ಪ್ರಾರಂಭವಾಯಿತು? ನಾನು ಮಾನ್ಯ ಮಿತ್ರರಲ್ಲಿ ಕೇಳಿಕೊಳ್ಳುತ್ತೇನೆ. ಹಣವನ್ನು ಖರ್ಚು ಮಾಡಿ, ಖರ್ಚು ಮಾಡಿ ಎಂದರೆ ನಾವು ಹೇಗೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾವು ವಿದ್ಯುಚ್ಛಕ್ತಿಗೋಸ್ಕರ ಕಳೆದ ಸಾರಿ ೮೯-೯೦ರಲ್ಲಿ ೧೧೦೦ ಕೋಟಿ ರೂಪಾಯಿಗಳನ್ನು ಇಯರ್ ಮಾರ್ಕ್ ಮಾಡುವಾಗ, ಯಾವ ಪ್ರಾಜೆಕ್ಟ್ ಮೇಲೆ ಖರ್ಚು ಮಾಡಬೇಕಾಗಿತ್ತು? ಏಕೆಂದರೆ ಆಗ ಯಲಹಂಕ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಸಿಕ್ಕಿರಲಿಲ್ಲ. ಶರಾವತಿ ಟೈಲ್ ರೈಸ್ ಪ್ರಾಜೆಕ್ಟ್ ಇನ್ನೂ ಕ್ಲಿಯರ್ ಆಗಿಲ್ಲ. ಹೀಗೆ ಹಲವಾರು ಪ್ರಾಜೆಕ್ಟ್‌ಗಳು ಕ್ಲಿಯರ್ ಆಗಿಲ್ಲ. ಆಗ ಎಲ್ಲಾ ಸಂಸತ್ ಸದಸ್ಯರೂ ಸೇರಿ ಆಗಿನ ಇಂಧನ ಮಂತ್ರಿಯವರ ಹತ್ತಿರ ಹೋದೆವು. ಒಂದೇ ಒಂದು ಪ್ರಾಜೆಕ್ಟ್‌ಗೆ ಆದರೂ ಕ್ಲಿಯರೆನ್ಸ್ ಕೊಡಿ ವಿದೇಶಿ ಹಣವನ್ನು ತರುವಹಾಕಬೇಕಾದ ಸಂದರ್ಭ ಇದೆ ಎಂದು ಕೇಳಿದೆವು. ಆಗ ಇಂಥ ಮಾನ್ಯ ವಸಂತ್ ಸಾಠೆಯವರು ನಮಗೆ ಹೇಳಿದರು. ನೀವು ಎಲ್ಲಿಂದ ಆದರೂ ಹಣವನ್ನು ತನ್ನಿ ವಿದ್ಯುಚ್ಛಕ್ತಿಗಾಗಿ ಖರ್ಚು ಮಾಡತಕ್ಕ ಹಣಕ್ಕೆ ಯಾವ ದೇಶದಿಂದ ಹಣವನ್ನು ತಂದರೂ ಅದಕ್ಕೆ ನಾನು ನಿಮ್ಮ ಜೊತೆ ಇರುತ್ತೇನೆ ಎಂದು. ಆದರೆ ಪ್ರಾಜೆಕ್ಟ್ ಕ್ಲಿಯರ್ ಆಗಲಿಲ್ಲ. ಅದು ಕ್ಲಿಯರ್ ಆಗದೆ ನಾವು ಯಾವುದಕ್ಕೆ ಹಣವನ್ನು ಖರ್ಚು ಮಾಡಬೇಕಾಗಿತ್ತು. ೨ ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ಕೈಗಾ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಅಲ್ಲಿಯ ಪರಿಸರವಾದಿಗಳ ಅಡ್ಡಿ, ರೈತರ ಅಡ್ಡಿ. ನಮಗೆ ಬೇರೆ ಪ್ರದೇಶ ಇಲ್ಲ. ಎಂದರೆ ಅವರ ವಾದ ಮತ್ತೊಂದು ಕಡೆ ಅಣು ವಿದ್ಯುತ್ ಕೇಂದ್ರವನ್ನು ಮಾಡುತ್ತೇವೆಂದರೆ ಪರಿಸರ ಮಾಲಿನ್ಯ ವಾಗುತ್ತದೆ, ಆದ್ದರಿಂದ, ಇದನ್ನು ಮಾಡಬೇಡಿ ಎಂದು ಹೇಳುತ್ತಾರೆ. ಹೋಗಲಿ ಇನ್ನು ಥರ್ಮಲ್ ಪ್ರಾಜೆಕ್ಟ್‌ಗಳನ್ನಾದರೂ ಮಾಡೋಣ ಎಂದರೆ ನಮ್ಮಲ್ಲಿ ಕಲ್ಲಿದ್ದಲು ಇಲ್ಲ. ಹಾಗಾದರೆ ಇಂಥ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕು?

ನೀವು ಕೇಳಿದಹಾಗೆ ಪವರ್ ಕೊಟ್ಟಿದ್ದರಿಂದಲೇ ಪಾಪ್ಯುಲರ್ ಆದುದು ಎಂದು ಹೇಳಿದರು. ನಾವು ಆರೀತಿ ಪವರ್ ಕೊಡುವುದಕ್ಕೆ ಹೋಗಿಯೇ ಈ ಸರ್ಕಾರ ಅನ್ ಪಾಪ್ಯುಲರ್ ಆದುದು ೪೦ ರಿಂದ ೪೫ ಸಾವಿರ ರೈತರಿಗೆ ಐ.ಪಿ. ಸೆಟ್ಟುಗಳಿಗೆ ಎನರ್ಜೈಸ್ ಮಾಡಿದ ಕೀರ್ತಿ ನಮ್ಮ ಸರ್ಕಾರಕ್ಕೆ ಬಂದಿದೆ. ಇವತ್ತು ನಮ್ಮ ಮಿತ್ರರು ಹೇಳಿದರು. ಕೈಗಾರಿಕೆಗಳಿಗೆ ಪವರ್ ಕೊಡುವುದನ್ನು ನಿಲ್ಲಿಸಿಬಿಟ್ಟು ರೈತರಿಗೆ ಕೊಡಿ ಎಂದು. ನಾನು ಅದಕ್ಕೆ ವಿರೋಧಿ ಇಲ್ಲ. ಆದರೆ ಎಲ್ಲಿಂದ ತಂದು ಕೊಡಬೇಕು ? ಐ. ಪಿ. ಸೆಟ್‌ಗಳಿಗೆ ೪೫ ಸಾವಿರ ಸೆಟ್‌ಗಳಿಂದ ೫೦ ಸಾವಿರ ಸೆಟ್‌ಗಳಿಗೆ ಹಿಂದಿನ ಸರ್ಕಾರ ಪ್ರತಿವರ್ಷ ಪವರ್ ಕೊಟ್ಟಿದೆ. ಆರು ಲಕ್ಷ ಚಿಲ್ಲರೆ ವರೆಗೆ ಇದ್ದರೆ ೬ ಲಕ್ಷ ೭ ಲಕ್ಷದವರೆಗೆ ಐ.ಪಿ. ಸೆಟ ಗಳಿಗೆ ಪವರ್ ಕೊಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ ದುಡ್ಡು ಎಲ್ಲಿಂದ ಬರುತ್ತದೆ, ಕೆ. ಇ. ಬಿ. ಯಿಂದಲಾಗಲಿ ಅಥವಾ ಮೈಸೂರು ಪವರ್ ಕಾರ್ಪೊರೇಷನ್‌ನಿಂದಲಾಗಲಿ ದುಡ್ಡು ಎಲ್ಲಿಂದ ಬರುತ್ತದೆ? ಯಾರು ೨೭೫ ಕಿಲೋವಾಟ್ಸ್ ಮೇಲೆ ಇಂಡಸ್ಟ್ರೀಸ್‌ಗೆ ಬಳಸುತ್ತಾರೋ, ಅವರಿಗೆ ಸರಿ ಸುಮಾರಾಗಿ ಲೆಕ್ಕ ಹಾಕಿದರೆ ಪರ್ ಯೂನಿಟ್‌ಗೆ ಎರಡು ರೂಪಾಯಿ ಕೊಡುತ್ತಾರೆ ಅದೇ ಮೂಲ. ಇವತ್ತು ನಾವು ಹತ್ತಿರ ಹತ್ತಿರ ೨೦೦ ಕೋಟಿ ರೂಪಾಯಿಗಳವರೆಗೆ ಐ. ಪಿ. ಸೆಟ್‌ಗಳಿಗೆ ಸಬ್‌ಸಿಡಿ ಕೊಟ್ಟು ನಾವು ಪವರ್ ಜನರೇಟ್ ಮಾಡಿ ಕೊಡುತ್ತಿದ್ದೇವೆ. ಇನ್ನೂ ಹೆಚ್ಚು ಕೊಡಲಿಕ್ಕೆ ಇಲ್ಲಿ ನಿಲ್ಲಿಸಿ ಕೊಡಿ ಎಂದರೆ, ತಾವು ಯಾವರೀತಿ ಸರಿದೂಗಿಸುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಿ ? ನಾನು ರಾಜ್ಯದ ಹಿತದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಬಹಳ ಮುಖ್ಯವಾಗಿ ನಮಗೆ ಎಷ್ಟು ಪವರ್ ಬೇಕಾಗುತ್ತದೆ. ನಮಗೆ ಎಷ್ಟು ಪವರ್ ಬರುತ್ತಿದೆ ಎನ್ನುವುದು ದಿನಕ್ಕೆ ೪೧ ದಶಲಕ್ಷ ಯೂನಿಟ್‌ಗಳಷ್ಟು ಕರ್ನಾಟಕ ರಾಜ್ಯಕ್ಕೆ ಪವರ್ ಬೇಕಾಗುತ್ತದೆ. ಅರ್ಥಾತ್ ನಾಲ್ಕು ಸಾವಿರಕ್ಕಿಂತ ಸ್ವಲ್ಪ ಹೆಚ್ಚು ಮೆಗಾವ್ಯಾಟ್ ಪವರ್ ಕರ್ನಾಟಕ ರಾಜ್ಯದಲ್ಲಿ ಬೇಡಿಕೆ ಇದೆ ಆದರೆ ಉತ್ಪಾದನೆ ಎಷ್ಟು? ತಾವು ಹೇಳಿದಹಾಗೆ ೨೬೦೦ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಆದರೆ ಇವತ್ತು ನಮ್ಮ ಬೇಡಿಕೆಯನ್ನು ಪೂರೈಸುವುದಕ್ಕೆ ಮೂರನೇ ಒಂದು ಭಾಗದಷ್ಟು ಹೊರಗಡೆಯಿಂದ ತರಿಸುತ್ತಿದ್ದೇವೆ. ಮೂರನೆಯ ಎರಡು ಭಾಗ ಮಾತ್ರ ನಾವು ಉತ್ಪಾದನೆ ಮಾಡುತ್ತಿದ್ದೇವೆ ಮೂರನೆಯ ಒಂದು ಭಾಗ ಎಲ್ಲಿಂದ ಬರುತ್ತದೆ ಎಂದರೆ ಇದರಲ್ಲಿ ಕೇಂದ್ರ ಸರ್ಕಾರದ ಪಾಲು, ಮತ್ತು ಬೇರೆ ಬೇರೆ ರಾಜ್ಯಗಳು ಕೊಡತಕ್ಕಂಥ ಪಾಲು ಇದೆ. ನಮ್ಮ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನೆ ರಾಮಗೊಂಡಮ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ, ನೈವೇಲಿ ಲಿಗ್ನೈಟ್ ಕಾರ್ಪೊರೇಷನ್‌ನಿಂದ, ಮದ್ರಾಸ್ ಕಲ್ಪಾಕಮ್ ಪ್ರಾಜೆಕ್ಟಿನಿಂದ ನಮಗೆ ಸ್ವಲ್ಪಮಟ್ಟಿಗೆ ಕೇಂದ್ರ ಸರ್ಕಾರದ ಮೂಲಗಳಿಂದ ವಿದ್ಯುತ್ ಬರತಕ್ಕಂಥದ್ದು ಇದೆ. ಹಾಗೆಯೇ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳದಿಂದಲೂ ಕೂಡ ನಾವು ಸ್ವಲ್ಪಮಟ್ಟಿಗೆ ಪವರನ್ನು ತೆಗೆದುಕೊಂಡು ನಮಗಿರತಕ್ಕಂಥ ಕೊರತೆ ಏನು ಇದೆ ಅದನ್ನು ಸರಿದೂಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಹಾರಾಷ್ಟ್ರದಲ್ಲಿ ಪವರ್ ಪ್ರಾಜೆಕ್ಟ್‌ಗೆ ಎಷ್ಟು ಖರ್ಚು ಮಾಡುತ್ತಿದ್ದಾರೆಂದರೆ, ಪ್ರತಿವರ್ಷ ಸರಿ ಸುಮಾರು ೮೫೦ ಕೋಟಿಯಿಂದ ೧೦೦೦ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡುತ್ತಿದ್ದಾರೆ. ಪವರ್ ಪ್ರಾಜೆಕ್ಟ್‌ಗಳಿಗೆ ನಮ್ಮಲ್ಲಿ ಎಷ್ಟು ಇನ್‌ವೆಸ್ಟ್‌ಮೆಂಟ್ ಮಾಡಲಾಗುತ್ತಿದೆ ಎಂದರೆ ೨೫೦ ಕೋಟಿ ರೂಪಾಯಿಗಳು ಖರ್ಚು ಮಾಡದಿರುವುದಕ್ಕೆ ಕಾರಣ ಏನೆಂದರೆ ೨-೩ ಕಾರಣಗಳಿವೆ. ಐದು ವರ್ಷಗಳಿಂದ ಸತತವಾಗಿ ಬರಗಾಲದಿಂದಾಗಿ ನಮ್ಮ ಇರಿಗೇಷನ ನಲ್ಲಿಯ ಪ್ರೊಡಕ್ಷನ್ ಕಡಿಮೆಯಾಯಿತು. ಹಾಗೆಯೇ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಕಡಿಮೆಯಾಯಿತು. ಎಲ್ಲಾ ರೀತಿಯಿಂದಲೂ ಆರ್ಥಿಕವಾಗಿ ಕರ್ನಾಟಕ ರಾಜ್ಯವು ಹಿಂದುಳಿಯುವುದಕ್ಕೆ ೫-೬ ವರ್ಷಗಳ ಕಾಲ ಸತತವಾಗಿ ಬರಗಾಲ ಬಂದುದೇ ಕಾರಣವಾಯಿತು. ಆದರೂ ಇರತಕ್ಕಂಥ ಹಣವನ್ನು ಬಳಸೋಣವೆಂದರೆ, ಕೇಂದ್ರ ಸರ್ಕಾರದ ಅನುಮತಿ ದೊರಕದೇ, ಯಾವ ಪ್ರಾಜೆಕ್ಟ್‌ಗಳಿಗೂ ಕ್ಲಿಯರೆನ್ಸ್ ಸಿಕ್ಕದಿದ್ದರಿಂದ ಪ್ರಯತ್ನವನ್ನು ಮಾಡಲು ಸಾಧ್ಯವಾಗಲಿಲ್ಲ. ಈಗ ಪ್ರಾರಂಭವಾಡಿ ಅಂತಿಮವಾಗಿ ಮುಗಿಸುವ ಸ್ಟೇಜ್‌ನಲ್ಲಿರತಕ್ಕಂಥದ್ದು ಅಂದರೆ, ಉದಾಹರಣೆಗೆ ಮಂಗಳೂರು ಹತ್ತಿರ ಪವರ್ ಥರ್ಮಲ್ ಪ್ರಾಜೆಕ್ಟ್‌ಗೆ ಎನ್. ಟಿ. ಪಿ. ಸಿ ಅವರು ಏನು ಇನ್‌ವೆಸ್ಟ್‌ಮೆಂಟ್ ಮಾಡಿ ಆ ಪ್ರಾಜೆಕ್ಟನ್ನು ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ, ಕರ್ನಾಟಕ ರಾಜ್ಯದಲ್ಲಿ ದುಡ್ಡು ಇದ್ದಿದ್ದರೆ ನಾವೇ ಆ ಪ್ರಾಜೆಕ್ಟನ್ನು ಮಾಡಬಹುದಾಗಿತ್ತು. ಇವತ್ತು ಕೇಂದ್ರ ಸರ್ಕಾರದ ಎನ್. ಟಿ. ಪಿ ಸಿ. ಅವರು ಅಲ್ಲಿ ಪ್ರಾಜೆಕ್ಟ್ ಮಾಡಿ ಒಟ್ಟು ಪವರ್‌ನಲ್ಲಿ ನಮಗೆ ಎಷ್ಟು ಬರುತ್ತದೆ. ಷೇರು ಎಷ್ಟು ಹಾಕಬೇಕಾಗುತ್ತದೆ, ರಾಮಗೊಂಡಮ್‌ನಿಂದ ಆದರೂ ಅಷ್ಟೇ ಕಲ್ಪಾಕಮ್‌ನಿಂದ ಆದರೂ ಅಷ್ಟೇ ನೈವೇಲಿಯಿಂದಲಾದರೂ ಅಷ್ಟೆ ಸದರನ್ ಜೋನ್‌ಗೆ ಹಾಕಿ ನಮಗೆಷ್ಟು ಬರುತ್ತದೆಯೋ ಅಷ್ಟು ಬರುತ್ತಿದೆ. ಹೊರಗಡೆಯಿಂದ ಬರತಕ್ಕ ಪ್ರತಿಯೊಂದು ಯೂನಿಟ್‌ಗೆ ನಾವು ಎಷ್ಟು ದುಡ್ಡು ಕೊಡುತ್ತೇವೆ, ಅದನ್ನು ಇಲ್ಲಿ ಯಾವ ರೀತಿ ವಿತರಣೆ ಮಾಡುತ್ತಿದ್ದೇವೆ, ಇದರ ಒಂದು ಲೆಕ್ಕವನ್ನು ತಾವು ದಯಮಾಡಿ ಇಡಿ,

ಈಗ ಸಮಯದ ಅಭಾವ ಇರುವುದರಿಂದ ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ನಮಗೆ ಸರಿದೂಗುವುದಕ್ಕೆ ಬೇಕಾಗಿರತಕ್ಕ ದಿನಕ್ಕೆ ಕನಿಷ್ಟ ೩೦ ಸಾವಿರ ಮಿಲಿಯನ್ ಯೂನಿಟ್ ವಿದ್ಯುತ್ತನ್ನು ಒದಗಿಸುವುದಕ್ಕೆ ಸರ್ಕಾರ ಏನು ಆಲೋಚನೆ ಮಾಡುತ್ತದೆಂಬ ಬಗ್ಗೆ ನನಗೆ ಅದರ ವಿವರ ಬೇಕು. ಇದರ ಜೊತೆಗೆ ಬಹಳ ಮುಖ್ಯವಾದ ಮತ್ತೊಂದು ಅಂಶವೆಂದರೆ, ನಮ್ಮ ಉತ್ಪಾದನೆಯ ಘಟಕಗಳೆಲ್ಲ ಹೆಚ್ಚಾಗಿ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಬರುತ್ತವೆ. ವಾರಾಹಿ ಕೂಡ ಅದೇ ಸಾಲಿನಲ್ಲಿ ಬರತಕ್ಕದ್ದು. ಅಲ್ಲಿಂದ ಸುಮಾರು ೬೦೦ ಕಿಲೋಮೀಟರ್ ಟ್ರಾನ್ಸ್‌ಮಿಷನ್ ಮಾಡಬೇಕು, ಇದರಿಂದ ಆಗತಕ್ಕ ಟ್ರಾನ್ಸ್‌ಮಿಷನ್ ಲಾಸ್ ನೂರಕ್ಕೆ ೨೨ ರಿಂದ ೨೩ರಷ್ಟು ಇದೆ. ಒಂದು ಮೆಗಾವ್ಯಾಟ್ ಪವರ್ ಲಾಸ ಆದರೆ ಎರಡೂಕಾಲು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗುತ್ತದೆ. ಅದಕ್ಕೆ ಏನು ಮಾಡಬೇಕು. ಯಾವ ಯಾವ ಭಾಗದಲ್ಲಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ, ಅಲ್ಲಿ ಪ್ರಯತ್ನ ಮಾಡಬೇಕು? ಮೇಕೆದಾಟು ಮುಂತಾದ ಸಣ್ಣಪುಟ್ಟ ಪ್ರಾಜೆಕ್ಟ್‌ಗಳಲ್ಲಿ ೫೦-೬೦ ಮೆಗಾವ್ಯಾಟ್ ವಿದ್ಯುತ್ ಬರತಕ್ಕದ್ದರಲ್ಲಿ ಉತ್ಪಾದನೆ ಪ್ರಾರಂಭ ಮಾಡಿದರೆ ಟ್ರಾನ್ಸ್‌ಮಿಷನ್ ಲಾಸ್ ಕಡಿಮೆ ಆಗುತ್ತದೆ. ಟ್ರಾನ್ಸ್‌ಮಿಷನ್ ಲಾಸ್ ಪ್ರತಿ ವರ್ಷ ೫೦-೬೦ ಕೋಟಿ ರೂಪಾಯಿ ಮೀರುತ್ತದೆ. ಈ ಲಾಸ್ ಅನ್ನು ತಪ್ಪಿಸುವುದಕ್ಕೆ ಸಣ್ಣಪುಟ್ಟ ಪ್ರಾಜೆಕ್ಟ್‌ಗಳನ್ನು ಮಾಡಬೇಕು. ಯಲಹಂಕ ಪ್ರಾಜೆಕ್ಟ ಏನಾಯಿತು ? ಫ್ರಾನ್ಸ್‌ನವರು ದುಡ್ಡು ಹಾಕುತ್ತಾರೆ. ಖರ್ಚು ಮಾಡುತ್ತಾರೆಂದು ಹೇಳಿದ್ದು ಏನಾಯಿತು ? ಅದು ಇನ್ನೂ ಚರ್ಚೆಯಲ್ಲಿದೆ. ಇದು ಯಾವತ್ತು ಮುಗಿಯುತ್ತದೆ ? ಸರಿಯಾಗಿ ಪ್ರಾರಂಭ ಮಾಡಿದರೆ ಇಂಡಸ್ಟ್ರಿಯಲಿಸ್ಟ್ ಕಾಂಟ್ರಿಬ್ಯೂಟ್ ಮಾಡುತ್ತಾರೆ. ಈಗಾಗಲೇ ಅವರು ಮಾಡಿದ್ದಾರೆ. ೧೨೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕ ಈ ಮಲ್ಟಿಪಲ್ ಪ್ರಾಜೆಕ್ಟ್ ಏತಕ್ಕೆ ಡಿಲೇ ಆಗುತ್ತಿದೆ. ಅದನ್ನು ಎಕ್ಸ್‌ಪಿಡಿಟ್ ಮಾಡದೆ ಮಂತ್ರಿಗಳು ಪ್ರತಿ ವರ್ಷ ಎರಡೆರಡು ವಿದ್ಯುತ್ ಉತ್ಪಾದನಾ ಘಟಕಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಯಾವ ಘಟಕ ಎಲ್ಲಿ ? ಅದಕ್ಕೆ ಬೇಕಾದ ಪೂರಕವಾದ ಒಂದು ಪ್ರೇರಣೆ ಎಲ್ಲಿಂದ ಬರಬೇಕು ? ಆ ಪ್ರೇರಣೆಗೆ ಬೇಕಾದ ಸಲಕರಣೆಗಳನ್ನು ಒದಗಿಸಿ ಇಂಥ ಪ್ರಾಜೆಕ್ಟ್‌ಗಳನ್ನು ಆಲೋಚನೆ ಮಾಡಿದ್ದೇವೆಂದು ಹೇಳಿದರೆ ಒಪ್ಪಬಹುದು. ಅದನ್ನು ಬಿಟ್ಟು ಸುಮ್ಮನೆ ೬ ತಿಂಗಳಿಗೊಂದು ಪ್ರಾಜೆಕ್ಟ್ ಮಾಡುತ್ತೇವೆಂದು ಶಭಾಷ್‌ಗಿರಿ ಪಡೆಯುವುದಕ್ಕೆ ಪ್ರಸಿದ್ಧಿಗಳಿಸುವುದಕ್ಕೆ ಮಾಡಿದರೆ ಅದನ್ನು ನಾವು ಒಪ್ಪುವುದಿಲ್ಲ. ಮಾನ್ಯ ಯಾಹಾ, ಅವರಲ್ಲಿ ಪ್ರಾರ್ಥಿಸುತ್ತೇನೆ. ಈ ನಿಮ್ಮ ಮಾತು ಏನಿದೆ ಪ್ರತಿ ವರ್ಷ ಎರಡು ಘಟಕಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಅವು ಯಾವುವು? ಅವುಗಳ ಉದ್ದೇಶಿತ ವೆಚ್ಚವೆಷ್ಟು ? ಜಾಗ ಯಾವುದು ? ಯಾವ ಯಾವ ಭಾಗದಲ್ಲಿ ಮಾಡುತ್ತೀರಿ, ದಯಮಾಡಿ ತಿಳಿಸಿ ಮತ್ತೆ ವರಾಹಿ ಪ್ರಾಜೆಕ್ಟ್‌ನಲ್ಲಿ ಕನಿಷ್ಟ ಪಕ್ಷ ಹೈ ಪವರ್ ಕಮಿಟಿ ರಚನೆ ಮಾಡಿ ಅಲ್ಲಿರತಕ್ಕ ಸಮಸ್ಯೆಗಳನ್ನು ಬಗೆಹರಿಸಿ. ರೈತರು ಇವತ್ತು ಮುಳುಗಿದ್ದಾರೆ. ಅವರಿಗೆ ವ್ಯವಸಾಯ ಬಿಟ್ಟು ಬೇರೆ ಏನೂ ಗೊತ್ತಿಲ್ಲ. ಹತ್ತಾರು ಕುಟುಂಬಗಳಿಗೆ ಅನ್ನ ಹಾಕುತ್ತಿದ್ದ ಸಂಸಾರಗಳು ಇವತ್ತು ಬೀದಿಯಲ್ಲಿ ಭಿಕ್ಷೆ ಎತ್ತತಕ್ಕ ಸ್ಥಿತಿಗೆ ಹೋಗಿವೆ. ಆದರೂ ಸಾಕಷ್ಟು ಪರಿಹಾರ ಒದಗಿಸುವ ವ್ಯವಸ್ಥೆ ಮಾಡಿಲ್ಲ. ಸುತ್ತಲೂ ನೀರು ಬಂದಿದೆ. ಮಧ್ಯೆ ಇವರು ಇದ್ದಾರೆ ಒಂದೊಂದು ಸಾರಿ ೭-೮ ಕಿಲೋಮೀಟರ್ ನಡೆದುಕೊಂಡು ಹೋಗುತ್ತಿದ್ದವರನ್ನು ದೋಣಿಯಲ್ಲಿ ಕರೆದುಕೊಂಡು ಹೋಗಿ ವಾಪಸ್ಸು ಕರೆದುಕೊಂಡು ಬರಬೇಕಾಗಿದೆ. ಅವರಿಗೆ ಪರ್ಯಾಯ ರಸ್ತೆ ಮಾಡಿಸಿ. ೧೩೫ ಲಕ್ಷ ರೂಪಾಯಿಗಳ ಅಂದಾಜಿನ ಆ ರಸ್ತೆಗೆ ಕೆಪಿಸಿ ಯವರು ದುಡ್ಡು ಕೊಡುತ್ತಾರೆ. ಲೋಕೋಪಯೋಗಿ ಇಲಾಖೆಯವರು ಜವಾಬ್ದಾರಿ ವಹಿಸಿಕೊಳ್ಳುತ್ತಾರೆ. ಅಲ್ಲಿ ೩೦೨ ಮರಗಳನ್ನು ತೆಗೆಯಬೇಕು. ಈ ಮರಗಳನ್ನು ತೆಗೆಯುವುದಕ್ಕೆ ಆಗದೆ ರಸ್ತೆ ಮಾಡಿಸುವುದಕ್ಕಾಗುವುದಿಲ್ಲ. ಇದಕ್ಕಿಂತ ದುರಂತ ಈ ರಾಜ್ಯದಲ್ಲಿ ಬೇರೆ ಇರುವುದಕ್ಕೆ ಸಾಧ್ಯವಿಲ್ಲ.

ಇದಕ್ಕೆ ಕಾರಣ ಏನು ? Because the Forest is in the Concurrent List. ಪ್ರಧಾನ ಮಂತ್ರಿಗಳು ಇದರ ಉದ್ಘಾಟನೆಗೆ ಬಂದಾಗ ಕ್ಲಿಯರ್ ಮಾಡಿಕೊಡುತ್ತೇವೆಂದು ಹೇಳಿದರು ಈಗ ಆ ದ್ವೀಪದಲ್ಲಿರುವ ಜನ ೮ ತಿಂಗಳುಗಳ ಕಾಲ ಈಚೆಗೆ ಬರುವ ಹಾಗೆ ಇಲ್ಲ. ಆ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಪ್ರಾಜೆಕ್ಟ್‌ಗಳು ಹೇಗೆ ಕ್ಲಿಯರ್ ಆಗುತ್ತವೆ? ಈ ಸ್ಥಿತಿ ನೋಡಿದರೆ ಈ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ......

ಶ್ರೀ ಕಾಗೋಡು ತಿಮ್ಮಪ್ಪ.—ತಾವು ರಾಮಕೃಷ್ಣ ಹೆಗಡೆಯವರನ್ನು ಭೇಟಿ ಮಾಡಿ ಆಗಲೇ ಚಳುವಳಿ ಮಾಡಿದ್ದರೆ ಶರಾವತಿ ಮತ್ತು ವರಾಹಿ ಪ್ರದೇಶದಲ್ಲಿ ರಕ್ಷಣೆ ಆಗುತ್ತಿತ್ತು. ನಿಮಗೆ ಈಗ ಬುದ್ಧಿ ಬಂದಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಚಳುವಳಿ ಮಾಡುವುದಕ್ಕೆ ಹೋಗಲಿಲ್ಲ. ಮಂತ್ರಿ ಮಂಡಲದ ಸಭೆ ವರಾಹಿ ಯೋಜನೆಗೋಸ್ಕರವೇ ಶಿವಮೊಗ್ಗದಲ್ಲಿ ನಡೆಯಿತು. ವರಾಹಿ ಪ್ರಾಜೆಕ್ಟ್ ಗೋಸ್ಕರವೇ ಯಾವ ಯಾವ ರೂಪದಲ್ಲಿ ಪರಿಹಾರ ಒದಗಿಸಿಕೊಡಬೇಕು ಎಂಬ ಬಗ್ಗೆ ತೀರ್ಮಾನ ತೆಗೆದುಕೊಂಡು ಅದೊಂದೇ ಕೆಲಸ ಮಾಡಿಕೊಂಡು ಬೆಂಗಳೂರಿಗೆ ವಾಪಸ್ ಬಂದರು ರೈತರಿಗೆ ಪರಿಹಾರ ಕೊಡಬೇಕು. ಅದಕ್ಕೆ ಚಳುವಳಿ ಮಾಡಬೇಕಿಲ್ಲ. ದುರ್ದೈವ. ನಾಲ್ಕು ವರ್ಷಗಳಿಂದ ಎಷ್ಟು ಪ್ರಯತ್ನ ಮಾಡಿದರೂ ಪ್ರಯೋಜನ ಆಗಲಿಲ್ಲ. ಅವರು ಬಹಳ ಜನ ಇಲ್ಲ. ೧೦-೨೦ ಕುಟುಂಬಗಳು ಮಾತ್ರ ಈಗ ಉಳಿದಿರಬಹುದು. ದಯಮಾಡಿ ಹೈ ಪವರ್ ಕಮಿಟಿ ಮಾಡಿ ಅವರ ಸಮಸ್ಯೆಯನ್ನು ಬಗೆಹರಿಸಿ. ದೇಶಕ್ಕೆ ಬೆಳಕು ಕೊಟ್ಟವರನ್ನು ಕತ್ತಲಲ್ಲಿ ಇಡಬೇಡಿ. ಆ ಭಾಗದಲ್ಲಿ ಚಕ್ರಾ, ವರಾಹಿ, ಬೇಡ್ತಿ ಈ ಪ್ರಾಜೆಕ್ಟ್‌ಗಳು ಏನು ಬಂದಿವೆ, ಅಲ್ಲಿ ಮುಳುಗಡೆಯಾಗತಕ್ಕವರಿಗೆ ಮತ್ತೊಂದು ದುರಂತ ಇದೆ. ಏನೆಂದರೆ, ಮುಳುಗಡೆ ಪ್ರದೇಶದವರು ಎಂದು ಅವರಿಗೆ ವಿದ್ಯುಚ್ಛಕ್ತಿ ಕೊಡುವುದಿಲ್ಲ. ಬ್ಲಾಕ್‌ಲಿಸ್ಟ್ ಮಾಡಿ ಇಟ್ಟಿದ್ದಾರೆ ಅವರನ್ನು. ಒಂದು ಕಡೆ ಮುಳುಗಡೆಯಾದರೂ ಪರಿಹಾರ ಸಿಗಲಿಲ್ಲ. ಇನ್ನೊಂದು ಕಡೆ ಬೇರೆ ರೀತಿ ಬೆಳಕು ಕೊಡಿ ಎಂದರೆ, ನಿಮ್ಮದು ಮುಳುಗಡೆ ಪ್ರದೇಶ ಆದ್ದರಿಂದ ಬೆಳಕು ಕೊಡುವುದಿಲ್ಲ ಎಂದು ಹೇಳುತ್ತಾರೆ. ಇಂಥ ದುರಂತಗಳು ನಮ್ಮ ರಾಜ್ಯದಲ್ಲಿ ಆಗಬಾರದು. ಸಭಾಧ್ಯಕ್ಷರೆ, ಈಗ ನನಗೆ ಬಹಳ ಸಮಯ ಮಾತನಾಡುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ವಿದ್ಯುಚ್ಛಕ್ತಿ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ವಿದ್ಯುಚ್ಛಕ್ತಿ ಕಳುವು ಏನು ನಡೆಯುತ್ತಿದೆ ಇದರ ಬಗ್ಗೆ ಗಮನ ಕೊಡಬೇಕು. ವಿದ್ಯುಚ್ಛಕ್ತಿ ಉತ್ಪಾದನೆ, ಆಡಳಿತ, ಮತ್ತು ಸಮತೋಲನ ಇವುಗಳನ್ನು ಕಾದುಕೊಂಡು ಬರುವುದಕ್ಕೆ ಕೆ. ಪಿ. ಸಿ. ಮತ್ತು ಕೆ. ಇ. ಬಿ. ಇದೆ. ಕೆ. ಪಿ. ಸಿ. ವಿದ್ಯುತ್ ಸಂಪಾದನೆ ಮಾಡುವುದು ಈ ಪವರ ಅನ್ನು ಖರ್ಚು ಮಾಡುವ ಅಧಿಕಾರ ಇರುವುದು ಕೆ. ಇ. ಬಿ. ಗೆ, ಕೆ. ಇ. ಬಿ. ಯಲ್ಲಿ ವಿದ್ಯುಚ್ಛಕ್ತಿ ಶುಲ್ಕ ವಸೂಲಾಗದೆ ಬಾಕಿ ಉಳಿದಿದೆ ಎಂದು ಹೇಳಿದ್ದಾರೆ. ಏತಕ್ಕೆ ಬಾಕಿ ಇದೆ? ನಾನೇ ನಮ್ಮ ಮನೆಯಲ್ಲಿ ಹೇಳಿದ್ದೇನೆ, ಎಂದೆಂದಿಗೂ ವಿದ್ಯುಚ್ಛಕ್ತಿ ಬಿಲ್ಲನ್ನು ನಗದು ಕೊಡಬೇಡಿ ಎಂದು. ಏತಕ್ಕೆ ಎಂದು ತಮಗೆ ಅರ್ಥವಾಗುತ್ತದಲ್ಲ. ಬರೀ ಕ್ರಾಸ್ಡ್ ಚೆಕ್ ಹಾಕಿ ಕೊಡಿ ಎಂದು ಹೇಳಿದ್ದೇನೆ. ಕೆ. ಇ. ಬಿ. ಯಲ್ಲಿ ಎಷ್ಟೆಷ್ಟು ತರಹ ಬಿಲ್‌ಗಳು ಅಚ್ಚಾಗಿವೆ ಎಂಬುದನ್ನು ದಯಮಾಡಿ ಎಗ್ಸಾಮಿನ್ ಮಾಡಿಸಿ. ಬೆಂಗಳೂರು ನಗರದಲ್ಲಿ ನಗರದವರು ಎ. ಇ. ಎಚ್. ಗೆ ಎಲ್ಲಾ ಸೇರಿ ಸರಿಸುಮಾರು ಶೇಕಡ ೩೧ ರಷ್ಟು ವಿದ್ಯುಚ್ಛಕ್ತಿಯನ್ನು ಖರ್ಚು ಮಾಡುತ್ತಿದ್ದಾರೆ. ರೈತರಿಗೆ ಕೊಟ್ಟಿರುವುದು ಶೇಕಡ ೨೦ ರಷ್ಟು, ರೈತರಿಗೆ ಕೊಟ್ಟಿರುವುದು ಲೆಕ್ಕಕ್ಕೆ ಬರುತ್ತದೆ. ಬೆಂಗಳೂರಿನಲ್ಲಿ ಖರ್ಚು ಮಾಡುವುದು ಲೆಕ್ಕಕ್ಕೆ ಬರುವುದಿಲ್ಲ. ಆ ಕಾರಣಕ್ಕೆ ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಇದರ ವಿತರಣೆಯಲ್ಲಿ ಆದ್ಯತೆ ಯಾವುದಕ್ಕೆ ಕೊಡಬೇಕು? ಇದು ಬಹಳ ಪ್ರಮುಖವಾದ ವಿಚಾರ. ಈ ಆದ್ಯತೆ ಕೊಡುವಾಗ ಬದುಕಿನ ಎಲ್ಲ ಹಂದರಗಳನ್ನು ವಿದ್ಯುಚ್ಛಕ್ತಿ ಪ್ರವೇಶ ಮಾಡಿದೆ. ವಿದ್ಯುಚ್ಛಕ್ತಿ ಒಂದು ದಿವಸ ನಿಂತರೆ ನಮಗೆ ಊಟವೂ ಇಲ್ಲ, ಸ್ನಾನವೂ ಇಲ್ಲ. ಈ ಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಈ ವಿದ್ಯುಚ್ಛಕ್ತಿ ವಿತರಣೆ ಮಾಡುವಾಗ ಯೋಚನೆ ಮಾಡಬೇಕಾಗಿದೆ ಜನಸಂಖ್ಯೆ ಜಾಸ್ತಿ ಆದ ಹಾಗೆ ಭೂಮಿ ಬೆಳೆಯುವುದಿಲ್ಲ, ಇದ್ದ ಭೂಮಿಯಲ್ಲೇ ಉತ್ಪಾದನೆ ಜಾಸ್ತಿ ಮಾಡಬೇಕು. ಜಾಸ್ತಿ ಬೆಳೆಯ ಬೇಕಾದರೆ ವಿದ್ಯುಚ್ಛಕ್ತಿ ಅನಿವಾರ್ಯ. ಹಿಂದೆ ಆ ಕಾರಣದಿಂದ ೪೫–೫೦ ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುದ್ದೀಕರಣ ಮಾಡಿದ್ದೇವೆ. ಅದೇ ರೀತಿ ನೀವೂ ಪ್ರತಿ ವರ್ಷ ಒಂದು ಪ್ರೋಸ್ಡ್ ಪ್ರೋಗ್ರಾಂ ಹಾಕಿ ಕೊಂಡು ವಿದ್ಯುಚ್ಛಕ್ತಿ ಒದಗಿಸಬೇಕು. ನನ್ನ ಲೆಕ್ಕದಲ್ಲಿ ೬೦ ರಿಂದ ೬೫ ಸಾವಿರ ಪಂಪ್‌ಸೆಟ್‌ಗಳಿಗೆ ಅದರಲ್ಲೂ ವಿಶೇಷವಾಗಿ ಮಲೆನಾಡಿನಲ್ಲಿ ಏತ ನೀರಾವರಿಗೆ ಎರಡು ಬೆಳೆಗೆ ಎರಡು ಹದ ನೀರು ಕೊಟ್ಟರೆ ಸಾಕು. ಬ್ಯಾಂಕುಗಳಲ್ಲಿ ಸಾಲ ಮಾಡಿ ಪಂಪ್‌ಸೆಟ್‌ಗಳನ್ನು ಹಾಕಿ ಕೊಂಡಿದ್ದಾರೆ, ಎಲ್ಲಾ ತೊಂದರೆ ಇರುವುದೂ ಮಲೆನಾಡಿನವರಿಗೆ, ಪ್ರಾಜೆಕ್ಟ್‌ಗಳನ್ನು ಕಟ್ಟಿ ಮಲೆನಾಡು ಮುಳುಗಿಸುತ್ತೀರಿ ನದಿಯಲ್ಲಿ ಏನಾದರೆ ಪಂಪ್‌ಸೆಟ್ ಹಾಕಿ ಕೊಂಡರೆ ಪಂಪ್‌ಸೆಟ್ ಹಾಕಿಕೊಳ್ಳಬೇಡಿ, ಎರಡು ಸಾವಿರದ ಇಸವಿ ಹೊತ್ತಿಗೆ ಪ್ರಾಜೆಕ್ಟ್‌ನಲ್ಲಿ ನೀರು ಉಪಯೋಗಿಸಿಕೊಳ್ಳಬೇಕು ಈಗ ಪ್ರಾಜೆಕ್ಟ್ ಕಟ್ಟುತ್ತಿದ್ದೇವೆ. ಎಂದು ರಿಸ್ಟ್ರಿಕ್ಟ್ ಮಾಡುತ್ತೀರಿ. ಪಂಪ್‌ಸೆಟ್ ಹಾಕಿದರೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ತೊಂದರೆ ಮಾಡುತ್ತೀರಿ. ವಿದ್ಯುಚ್ಛಕ್ತಿ ಕೊಡದಿದ್ದರೆ ರೈತ ಸಾಲ ವಾಪಸ್ ಮಾಡುವುದಕ್ಕಾಗುವುದಿಲ್ಲ. ವಿದ್ಯುಚ್ಛಕ್ತಿ ಕೊಡುತ್ತೇವೆಂದು ಕಮಿಟ್‌ಮೆಂಟ್ ಇದೆ. ಕಮಿಟ್‌ಮೆಂಟ್ ಮಾಡದಿದ್ದರೆ ರೈತ ಸಾಲಗಾರನಾಗುತ್ತಿರಲಿಲ್ಲ. ಅವನನ್ನು ಸಾಲಗಾರನನ್ನಾಗಿಯೂ ಮಾಡಿ ಇದ್ದ ಆಸ್ತಿಯನ್ನು ಕಳೆದು ಉಳಿದ ಆಸ್ತಿಯನ್ನು ಕಳೆದು ಕೊಳ್ಳುವುದಕ್ಕೆ ಅವಕಾಶ ಮಾಡಬೇಡಿ. ಇಂಥ ಒಂದು ಪ್ರಾಜೆಕ್ಟ್‌ಗಳನ್ನು ತಯಾರು ಮಾಡುವಾಗ ೬ (೧), ೪ (೧) ನೋಟಿಫಿಕೇಷನ್ ಬರುವುದಕ್ಕೆ ಮುಂಚೆ ಕ್ರಮ ಕೈಗೊಳ್ಳಿ ತಮಗೆ ಹೇಳುತ್ತೇನೆ, ಇದು ಬಹಳ

ವಿಸ್ತಾರವಾದ ಚರ್ಚೆ. ೬ (೧) ನೋಟಿಫಿಕೇಷನ್ ಫೈನಲೈಸ್ ಆಗಿ ಇನ್ನೂ ಹಣ ಪಾವತಿ ಮಾಡಿಲ್ಲ ಎಂದರೆ ಪ್ರತಿ ವರ್ಷ ೬ (೧) ನೋಟಿಫಿಕೇಷನ್ ಆದ ತಾರೀಖಿನಿಂದ ೧೨ ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಪ್ರತಿ ವರ್ಷ ೬೦೦ ರಿಂದ ೮೦೦ ರೂಪಾಯಿ ವರೆಗೆ ಬೆಳೆ ಪರಿಹಾರ ಎಂದು ತೆಗೆದುಕೊಳ್ಳುತ್ತಾರೆ ಒಟ್ಟಾರೆ ಪರಿಹಾರ ಕೊಟ್ಟರೆ ಇದು ಬರುತ್ತಾ ಇರಲಿಲ್ಲ. ೬ (೧) ನೋಟಿಫಿಕೇಷನ್‌ನಿಂದ ೧೨ ಪರ್ಸೆಂಟ್‌ನಂತೆ ಎಂದರೆ ೧೬ ವರ್ಷಗಳ ಕೆಳಗಿನಿಂದ ಬಡ್ಡಿ ಸಮೇತ ಕೊಡಬೇಕಾಗುತ್ತದೆ, ಇವತ್ತು ಅಸಲಿಗಿಂತಾ ಬಡ್ಡಿಯೇ ಜಾಸ್ತಿ ಆಗುತ್ತದೆ, ಈ ಪ್ರಾಜೆಕ್ಟ್‌ನಲ್ಲಿ ಇರುವ ಸಮಸ್ಯೆಗಳನ್ನು ತಾವು ಬಗೆಹರಿಸಬೇಕೆಂದು ಹೇಳುತ್ತೇನೆ, ಇವತ್ತು ಕೆಪಿಸಿ ಮತ್ತು ಕೆಇಬಿ ಬಗ್ಗೆ ನಾನು ವಿವರವಾಗಿ ಚರ್ಚೆ ಮಾಡುವುದಕ್ಕೆ ಕಾಲದ ಮಿತಿ ಇದೆ. ಈ ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಬಗ್ಗೆ ಒಂದು ಪರಿಹಾರವನ್ನು ಕಂಡು ಹಿಡಿಯಲು ಒಂದು ಸಣ್ಣ ಸಮಿತಿಯನ್ನು ಮಾಡಿ ಅದರ ಮುಖಾಂತರ ಒಂದೆರಡು ದಿವಸ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರಬೇಕೆಂದು ಹೇಳಿ ತಾವು ಏನು ಒಂದು ಬೇಡಿಕೆ ಇಟ್ಟಿದ್ದೀರಿ ಇದು ವಸ್ತು ನಿಷ್ಠ ಬೇಡಿಕೆ ಅಲ್ಲ ಎಂದು ಹೇಳಿ, ಮತ್ತು ರಾಜ್ಯದ ಜವಾಬ್ದಾರಿ ಹೊತ್ತ ಒಬ್ಬ ಮಂತ್ರಿಗಳು ಹೇಳುವ ಮಾತು ಇದಲ್ಲ ಎಂದು ಹೇಳಿ, ಮುಂದೆ ಇಂತಹ ಮಾತನ್ನು ಆಡಬಾರದು ಎಂದು ಹೇಳಿ ಈ ಒಂದು ಬೇಡಿಕೆಯನ್ನು ವಿರೋಧಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ೪ ಗಂಟೆ ಆಗಿದೆ. ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

(ಈ ಸಮಯದಲ್ಲಿ ಅನೇಕ ಸದಸ್ಯರು ಎದ್ದು ನಿಂತು ತಮಗೆ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದರು)

ಉಪಾಧ್ಯಕ್ಷರು.—ಬಹಳ ಸದಸ್ಯರು ಮಾತನಾಡಬೇಕೆಂದಿರುವುದರಿಂದ ಉತ್ತರವನ್ನು ೪–೩೦ಕ್ಕೆ ಮುಂದೂಡಿದ್ದೇನೆ. ಮಾನ್ಯ ಸದಸ್ಯರು ಹತ್ತು ನಿಮಿಷ ಇಲ್ಲವೇ ಐದೈದು ನಿಮಿಷ ಮಾತನಾಡಿದರೆ ಒಳ್ಳೆಯದು.

† ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).—ಮಾನ್ಯ ಉಪಾಧ್ಯಕ್ಷಿಣಿಯವರೇ, ನಿನ್ನೆಯಿಂದ, ಕೈಗಾರಿಕೆ ಇಂಧನ ಮತ್ತು ರೇಷ್ಮೆ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದು ಬಹಳ ಜನ ಸದಸ್ಯರು ಮಾತನಾಡಿದ್ದಾರೆ. ಆ ಒಂದು ಮಾತುಗಳಲ್ಲಿ ಎದ್ದು ಕಾಣುತ್ತಿದ್ದ ಒಂದು ವಿಚಾರದ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಈ ಸರ್ಕಾರದ ಕೈಗಾರಿಕಾ ನೀತಿ, ಅದಕ್ಕೆ ಸಂಬಂಧಪಟ್ಟ ಹಾಗೆ ಖಾಸಗೀಕರಣ ಎಂದು ಏನು ಮಾತು ಬರುತ್ತಾ ಇದೆ. ಅದರ ಬಗ್ಗೆ ಬಹಳ ಜನ ಸದಸ್ಯರು ಗಾಬರಿ ಆದ ಹಾಗೆ ಕಾಣುತ್ತದೆ. ಅದಕ್ಕೆ ಕಾರಣ ಉಂಟು ಆ ಕಾರಣಾನೇ ಖಾಸಗೀಕರಣದ ಪರ, ಖಾಸಗೀಕರಣದ ವಿರುದ್ಧ, ರಾಷ್ಟ್ರೀಕರಣದ ಪರ, ರಾಷ್ಟ್ರೀಕರಣದ ವಿರುದ್ಧ ಮಾತುಗಳನ್ನು ನಮ್ಮ ಸದಸ್ಯರು ಆಡಲು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಕಾರಣ ನನಗನ್ನಿಸಿದ್ದು, ಹಣಕಾಸಿನ ಮಂತ್ರಿಗಳು ತಮ್ಮ ಆಯವ್ಯಯ ಮಂಡಿಸುವಾಗ ಯಾವುದೋ ಒಂದು ಪದ ಉಪಯೋಗಿಸಿದ್ದಾರೆ.

ಅದೇ ಕಾರಣ ನಮಗೂ ಬಹಳ ಗಾಬರಿಯಾಗಿದೆ. ಇದು ಅತ್ಯಂತ ಅಪಾಯದ ದಾರಿ. ನಮ್ಮ ಸರ್ಕಾರ ಖಾಸಗೀಕರಣದ ಬಗ್ಗೆ ಮಾತನಾಡುತ್ತಿರುವುದು, ನಮ್ಮ ಕೈಗಾರಿಕಾ ನೀತಿಯನ್ನು ಅತ್ಯಂತ ಅಪಾಯದ ದಾರಿಯಲ್ಲಿ ತೆಗೆದುಕೊಂಡು ಹೋಗುವಂಥ ಒಂದು ತೀರ್ಮಾನ ಎನ್ನುವುದು ನಮ್ಮ ಸ್ಪಷ್ಟ ಅಭಿಪ್ರಾಯ. ಈಗಿರುವಂಥ ಸರ್ಕಾರಕ್ಕೂ ಕೂಡ ಆದ ಅಪಾಯ, ಆದರೆ, ಸರ್ಕಾರದ ಮೇಲಾಗುವ ಅಪಾಯದ ಪರಿಣಾಮ ದೊಡ್ಡದೇನೂ ಅಲ್ಲ, ಆದರೆ ಅಪಾಯ ಕರ್ನಾಟಕದ ಜನರಿಗೆ ಬಹಳ ದೊಡ್ಡದಾಗಿ ಪರಿಣಮಿಸ ಬಹುದು ಎನ್ನುವುದು ನಮ್ಮ ಆತಂಕ. ಪರಿಣಮಿಸುತ್ತೆ, ಅದರಲ್ಲಿ ಯಾವ ಅನುಮಾನ ಇಲ್ಲ. ಆ ಕಾರಣದಿಂದ ನಾನು ಸರ್ಕಾರಕ್ಕೆ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರಷ್ಯಾದಲ್ಲಿ ಆಗಿರುವಂಥ ಬದಲಾವಣೆಗಳು ಅಥವಾ ಪೂರ್ವ ಯುರೋಪಿನಲ್ಲಿ ಆಗಿರುವಂಥ ಬದಲಾವಣೆಗಳ ನೆಪ ಹೂಡಿ. ಖಾಸಗೀಕರಣದ ಪ್ರಯತ್ನ ಮಾಡಬೇಡಿ. Prestroike cannot be an excuse for you for privatisation. ಅದರಿಂದ ಆಗುವಂಥ ಪರಿಣಾಮದಿಂದಾಗಿ ನೀವು ಬಹಳ ದೊಡ್ಡ ಶಾಪಕ್ಕೆ ಗುರಿಯಾಗುತ್ತೀರಿ ಎನ್ನುವ ಎಚ್ಚರಿಕೆ ಕೊಡುತ್ತಿದ್ದೇನೆ. ಅದಕ್ಕೆ ಕಾರಣ ಇಷ್ಟೆ; ನಮ್ಮ ಸರ್ಕಾರದ ನಡೆಸುತ್ತಿರುವರಿಗೆ. ರಷ್ಯಾದವರು ಈ ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ಎಷ್ಟು ಕಾಲ ಅವರ ಆರ್ಥಿಕ ವ್ಯವಸ್ಥೆಯನ್ನು ಒಂದು ಸುಭದ್ರವಾದ ತಳಹದಿಯ ಮೇಲೆ ಬೆಳೆಸಿದರು ಎನ್ನುವುದನ್ನು ನೆನಪಿಸಿಕೊಳ್ಳಿ, ಜ್ಞಾಪಿಸಿಕೊಳ್ಳಿ. ೭೦ ವರ್ಷದ ನಂತರ ಅವರು ಒಂದು ಹೊಸ ಪ್ರಯೋಗಕ್ಕೆ ಕೈಹಾಕುತ್ತಿದ್ದಾರೆ. 70 ವರ್ಷದ ನಂತರ ಅದನ್ನು ನೆನಪಿಟ್ಟುಕೊಳ್ಳಿ ರಷ್ಯಾ ಈ ಹೊಸ

ಪ್ರಯೋಗಕ್ಕೆ ಕೈಹಾಕುತ್ತಿರುವುದರಿಂದ ಕಮ್ಯೂನಿಸಂ ಸಿದ್ಧಾಂತ ಸೋತಿದೆ ಒಂದು ಕಾರ್ಯಕ್ರಮವಾಗಿ ಸೋತಿದೆ. ಕ್ಯಾಪಿಟಾಲಿಸಂ ಅಥವಾ ಬಂಡವಾಳಶಾಹಿ ವಿಚಾರ ಗೆದ್ದಿದೆ ಎನ್ನುವ ಭ್ರಮೆಗೆ ಒಳಗಾಗಬಾರದು. ಇವತ್ತು ಆಗತಕ್ಕಂಥ 'ಪೆರಿಸ್ಟ್ರಾಯಿಕಾ' ರಷ್ಯಾದಲ್ಲಿ ಯಾವ ಪ್ರಮಾಣದಲ್ಲಿ, ಯಾವಮಟ್ಟದಲ್ಲಿ ಎಂಬುದನ್ನು ಮಾನ್ಯ ಕೈಗಾರಿಕಾ ಮಂತ್ರಿಗಳನ್ನು ಸಭಾಧ್ಯಕ್ಷಣಿಯವರೆ, ರಷ್ಯಾಕ್ಕೆ ಕಳುಹಿಸಿಕೊಡಿ; ಅವರು ಹೋಗಿ ನೋಡಿಕೊಂಡು ಬರಲಿ. ಹಾಗೆ ಬರುತ್ತಾ ಚೈನಾಕ್ಕೂ ಹೋಗಿ ಬರಲಿ. "ಪೆರಿಸ್ಟ್ರಾಯಿಕಾ" ಅಂದಕೂಡಲೇ ಸಂಪೂರ್ಣವಾಗಿ ಖಾಸಗೀಕರಣವಲ್ಲ. ಯಾವ ಪ್ರಮಾಣದಲ್ಲಿ ಸಾರ್ವಜನಿಕ ಕ್ಷೇತ್ರವನ್ನು ಅವರು ೭೦ ವರ್ಷಗಳಿಂದ ಬೆಳೆಸಿದರೋ ಅದು ಅಷ್ಟೇ ಸುಭದ್ರವಾಗಿ ಉಳಿದಿದೆ, ಇವತ್ತಿಗೂ ರಷ್ಯಾದಲ್ಲಿ ಮತ್ತು ಚೈನಾದಲ್ಲಿ. ಯಾವುದೋ ಕೆಲವು ಕ್ಷೇತ್ರಗಳಲ್ಲಿ ಮಾತ್ರ, ಆ ಕಮ್ಯೂನಿಸಂ ಸಿದ್ಧಾಂತದಲ್ಲಿರುವಂಥ ದೋಷದಿಂದ ಬಂದಿರುವಂಥ ಜನಗಳಲ್ಲಿ ಬಂದಿರುವಂಥ ಒಂದು ಆಶೆಗಳನ್ನು ಪೂರೈಸುವುದಕ್ಕೋಸ್ಕರ ಒಂದು ಸಡಿಲಿಕೆಯ ಪ್ರಯೋಗ ನಡೆಸಿದ್ದಾರೆ ಅಷ್ಟೆ Communism as an idealogy de troyed, property as an institution only. Communism did not destroy property as a desire or as an emotion. ಇದು ಮಾರ್ಕ್ಸ್ ಮಾಡಿದಂಥ ತಪ್ಪು, ಮಾರ್ಕ್ಸ್ ವಾದದಲ್ಲಿರುವಂಥ ದೋಷ. ಆ ಕಾರಣದಿಂದ, ರಷ್ಯಾದಲ್ಲಿ ಅತ್ಯಂತ ಆರೋಗ್ಯಕರವಾದಂಥ ಆರ್ಥಿಕ ಬೆಳವಣಿಗೆಯಾದ ಮೇಲೆ, ಕೇಂದ್ರೀಕರಣದ ಪರಿಣಾಮವಾಗಿ ವರ್ಗ ರಚನೆಯಾದ ಮೇಲೆ ಅತ್ಯಂತ ಮೇಲ್ವರ್ಗಗಳು ''ಐಶಾರಾಮ'' ಜೀವನ ಮಾಡುವುದನ್ನು ನೋಡಿ, ಕೆಳವರ್ಗಗಳಿಗೆ ''Aisharama jeevana or the desire for an increasing standard of living,'' ಇವರ ದುಡಿತ ಜಾಸ್ತಿಯಾದಾಗ, ಇದು ಗೋರ್ಬಚೇವ್ ಕೊಟ್ಟಂಥ ಘೋಷಣೆ, ಅವರನ್ನು ತೃಪ್ತಿಪಡಿಸುವುದಕ್ಕೋಸ್ಕರ ಅಷ್ಟೆ, ಈ ಕಾರಣದಿಂದ ನಾವು ''ಪೆರಿಸ್ಟ್ರಾಯಿಕ್'' ಅಂದ ಕೂಡಲೇ ಸಂಪೂರ್ಣ ಕಮ್ಯೂನಿಸಂನಿಂದ ಸೋಲು, ಬಂಡವಾಳಶಾಹಿಯ ಗೆಲುವು ಎನ್ನುವಂಥ ಭ್ರಮೆಗೆ ಒಳಗಾಗಿ ಅಂಥಾದ್ದೇ ಕೆಲಸಕ್ಕೆ ಕೈಹಾಕಿದರೆ, ನಮ್ಮಂಥ ಅವಿವೇಕಿಗಳು ಬೇರೆ ಯಾರೂ ಇಲ್ಲ.

೪-೦೫ ಪಿ.ಎಂ.

ರಷ್ಯಾದಲ್ಲಿ ೭೦ ವರ್ಷಗಳ ಹಿಂದೆ ಏನು ಅಲ್ಲಿನ ಆರ್ಥಿಕ ವ್ಯವಸ್ಥೆಯಲ್ಲಿ ಅಶಿಸ್ತು ಏನಿತ್ತು, ಅಂತಹ ಆರ್ಥಿಕ ಅಶಿಸ್ತಿನಲ್ಲಿ ನಾವು ಇಂದು ಇದ್ದೇವೆ. ಭಾರತ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಇರುವಂಥ ಅಶಿಸ್ತನ್ನು ರಷ್ಯಾದಲ್ಲಿ ೭೦ ವರ್ಷಗಳ ಹಿಂದೆ ಇದ್ದಂಥ ಆರ್ಥಿಕ ಅಶಿಸ್ತಿಗೆ ಹೋಲಿಕೆ ಮಾಡಬಹುದು. ಈ ಕಾರಣದಿಂದ ನಾವು ರಾಷ್ಟ್ರೀಕರಣ ಬಗ್ಗೆ ಹೆಚ್ಚು ಒತ್ತು ಮಾಡಬೇಕೇ ಹೊರತು ಖಾಸಗೀಕರಣಕ್ಕೆ ಅಲ್ಲ. ಏತಕ್ಕೆ ಈ ಅಶಿಸ್ತು ಬಂದಿದೆ ಎಂದರೆ ಸ್ವಾತಂತ್ರ್ಯ ಬಂದ ಮೇಲೂ ಕೂಡ ನಾವು ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದು ಖಾಸಗೀ ಕ್ಷೇತ್ರಕ್ಕೆ ಹೊರತು ಸಾರ್ವಜನಿಕ ಕ್ಷೇತ್ರಕ್ಕೆ ಅಲ್ಲ. ಇವತ್ತು ಕೂಡ ಖಾಸಗೀ ಕ್ಷೇತ್ರ ಸಾರ್ವಜನಿಕ ಕ್ಷೇತ್ರಕ್ಕಿಂತ ಮೇಲುಗೈ ಹೊಂದಿದೆ. ಈ ಕಾರಣವೇ ನಮ್ಮ ಕೈಗಾರಿಕಾ ನೀತಿ ಮತ್ತು ಆರ್ಥಿಕ ನೀತಿ ಹೀಗಾಗಿದೆ. ಮತ್ತು ಸಂವಿಧಾನದಲ್ಲಿ ನಾವು ಏನೇನು ಹೇಳಿದ್ದೇವೆ ಅದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡುತ್ತಿದ್ದೇವೆ. ಏನು ಹೇಳಿದ್ದೇವೆ ? ಉತ್ಪಾದನೆಯ ಸಾಧನೆ ಕೆಲವೇ ಕೈಗಳಲ್ಲಿ ಕೇಂದ್ರೀಕೃತವಾಗಬಾರದು. Concentration of the capital should not be allowed. Concentration of the means of production should not be allowed. Distribution of the means of production ಆಗಬೇಕು. ಇದನ್ನೇ ಮಾತನಾಡಿದ್ದೇವೆ Directive Principles of State ನಲ್ಲಿ policy, ಅದರ ಪರಿಣಾಮ ಇವತ್ತು ಏನಾಗಿದೆ ? ಸೊನ್ನೆ ಆದಾಯದ ಕನ್ನಡಿಗ, ಭಾರತೀಯ ಇದ್ದಾನೆ. ದಿವಸಕ್ಕೆ ೨೫ ಲಕ್ಷ ಆದಾಯ ಇರುವಂಥ ಕೈಗಾರಿಕಾ ಕುಟುಂಬಗಳೂ ಇವೆ. some of the industrial houses, Madam Speaker, ನಾನು ಹೇಳುತ್ತಿರುವುದು ಈ ೨೫ ಲಕ್ಷ ಕುಟುಂಬಗಳ ಆಸ್ತಿಗಳ ಮೇಲೆ ಬರೇ ಬ್ಯಾಂಕ್ ಬಡ್ಡಿ ಲೆಕ್ಕಹಾಕಿ ಹೇಳುತ್ತಿದ್ದೇನೆ. ದಿವಸಕ್ಕೆ ೨೫ ಲಕ್ಷ ಆದಾಯ ಇರುವಂಥ ಪ್ರಜೆಗಳೂ ಈ ದೇಶದಲ್ಲಿ ಇದ್ದಾರೆ. ಸೊನ್ನೆ ಆದಾಯ ಇರುವಂಥ ಪ್ರಜೆಗಳೂ ಇದ್ದಾರೆ. ಇದು ನಲ್ವತ್ತು ವರ್ಷಗಳಲ್ಲಿ ಆಗಿರುವಂಥ ತಪ್ಪು ನೀತಿಗಳಿಂದಾಗಿ. ಕರ್ನಾಟಕ ರಾಜ್ಯ ಸರ್ಕಾರ ಮಾಡುತ್ತಿರುವ ಎರಡನೇ ತಪ್ಪಿನಿಂದಾಗಿ ಈ ಅಂತರ ಇನ್ನೂ ಜಾಸ್ತಿಯಾಗುತ್ತದೆ. ಇದರಲ್ಲಿ ಏನೂ ಅನುಮಾನ ಇಲ್ಲ. ನಿನ್ನೆ ಎಲ್ಲಾ ಸದಸ್ಯರೂ ಒಂದು ವಿಚಾರವನ್ನು ಕೇಳುತ್ತಿದ್ದರು ಏನೆಂದರೆ ಯಾವ್ಯಾವ ಕೈಗಾರಿಕೆಗಳನ್ನು ಯಾರ್ಯಾರಿಗೆ ಮಾರಬೇಕು ಎಂದು ಇದ್ದೀರಿ ಎಂದು. ಆ ತೀರ್ಮಾನವನ್ನು ಇವತ್ತೇ ಬದಲಾವಣೆ ಮಾಡಬೇಕು. ಮಾಡಲಿಲ್ಲವೆಂದರೆ ಕರ್ನಾಟಕದ ಜನತೆಯ ದೊಡ್ಡ ಶಾಪಕ್ಕೆ ಗುರಿಯಾಗುತ್ತೀರಿ. ಇದರಲ್ಲಿ ಏನೂ ಅನುಮಾನಪಟ್ಟುಕೊಳ್ಳಬೇಡಿ. ಕೈಗಾರಿಕೆಗಳ ಬಗ್ಗೆ ಇನ್ನು ಒಂದು ಮಾತ

ನಮ್ಮ ರೇಷ್ಮೆ ಮಂತ್ರಿಗಳಿಗೆ ಒಂದೇ ಒಂದು ಸಲಹೆ ಕೊಡುತ್ತೇನೆ. ರೈತ ಕುಟುಂಬದಿಂದ ಅವರು ಬಂದಿದ್ದಾರೆ ಎಲ್ಲರೂ ಇದೇ ಮಾತನ್ನು ಹೇಳುತ್ತಾರೆ. ಕರ್ನಾಟಕದಲ್ಲಿ ರೇಷ್ಮೆ ಬೆಳೆಗಾರರ ಸಂಖ್ಯೆ ಬಹಳ ಜಾಸ್ತಿಯಾಗುತ್ತಲೇ ಇದೆ. ಆದರೆ ಆ ರೇಷ್ಮೆ ಬೆಳೆಗಾರರ ಲೂಟಿ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಅದನ್ನು ತಪ್ಪಿಸಬೇಕೆಂದು ನಿಮಗೆ ಆಸೆ ಇದ್ದರೆ ಒಂದೇ ಒಂದು ಸಣ್ಣ ಕೆಲಸ ಮಾಡಿ. ರೇಷ್ಮೆ ಬೆಳೆಗಾರರು ಮಾರುಕಟ್ಟೆಗೆ ಗೂಡನ್ನು ತರಬಾರದು. ಕನಿಷ್ಟ ನೂಲನ್ನು ತರುವಂಥ ಒಂದು ಬದಲಾವಣೆಯನ್ನು ತಂದರೆ, ಕರ್ನಾಟಕದ ಚರಿತ್ರೆಯಲ್ಲಿ ಶ್ರೀ ಆತ್ಮಾನಂದ ಅವರ ಹೆಸರನ್ನು ಚಿನ್ನದಲ್ಲಿ ಬರೆಯಬಹುದು. ಅಂತಹ ಒಂದು ಸಣ್ಣ ಕೆಲಸ ಮಾಡಿ. ಗೂಡನ್ನು ತಂದು ಅಲ್ಲಿ ಪೇಚಾಡುವಂಥ ಸ್ಥಿತಿಯನ್ನು ತಪ್ಪಿಸಿ ಕನಿಷ್ಟ ಹಳ್ಳಿಯಿಂದ ಆಚೆಗೆ ಸಿದ್ಧ ವಸ್ತು ಬರಬೇಕು. That should be your industrial policy. No raw material should go out of the villiage. Only finished produce should go out of the village. ಕೈಗಾರಿಕಾ ಮಂತ್ರಿಗಳು ಎಲ್ಲೋ ಹೋದರು.

ಬರೀ ರೇಷ್ಮೆಯಲ್ಲಿ ಮಾತ್ರ ನಾನು ಲೆಕ್ಕ ಹಾಕಿದ್ದೇನೆ. ಕರ್ನಾಟಕದ ರೇಷ್ಮೆ ಬೆಳೆಗಾರರಿಗೆ ಈ ಒಂದು ಬದಲಾವಣೆ ಮಾಡುವುದರಿಂದ, ಎರಡು ಸಾವಿರ ಕೋಟಿ ರೂಪಾಯಿ ಲಾಭವಾಗುತ್ತದೆ. ಅಂದರೆ ಈಗ ಎರಡು ಸಾವಿರ ಕೋಟಿ ರೂಪಾಯಿಗಳು ಲೂಟಿಯಾಗುತ್ತಿದೆ. ಎಲ್ಲಾ ವಿವರಗಳನ್ನೂ ನಾನು ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ. ಒಂದೇ ಒಂದು ಈ ಸಂದರ್ಭದಲ್ಲಿ ಲೆಕ್ಕ ತೆಗೆದು ಹೇಳುತ್ತೇನೆ. ಅಕ್ಕಿ ಮತ್ತು ಕಬ್ಬಿನಿಂದ ಲೆವಿ ರೂಪದಲ್ಲಿ ೪೫೦ ಕೋಟಿ ಬರುತ್ತದೆ. ರೇಷ್ಮೆ ಬಾಬಿನಲ್ಲಿ ಎರಡು ಸಾವಿರ ಕೋಟಿ ಬರುತ್ತದೆ. ಈ ಸದನದಲ್ಲಿ ರೈತರ ಸಾಲ ರದ್ದು ಮಾಡುವ ಬಗ್ಗೆ ಚೌಕಾಸಿ ನಡೆಯುತ್ತಿದೆ ಸಾಲ ರದ್ದು ಮಾಡಬೇಕೇ ಬೇಡವೇ ಎಂದು ಚೌಕಾಸಿ ವ್ಯಾಪಾರ ನಡೆಯುತ್ತಿದೆ. ಇನ್ನು ಮುಂದೆ ಬರತಕ್ಕ ಡಿಮ್ಯಾಂಡ್‌ಗಳಲ್ಲಿ ರೈತರಿಗೆ ತಾವು ಎಷ್ಟು ಬಾಕಿ ಕೊಡಬೇಕೆಂಬುದನ್ನು ತಿಳಿಸುತ್ತೇನೆ. ಇವತ್ತು ಮೂರು ಬಾಬಿನಲ್ಲಿ ತಿಳಿಸಿದ್ದೇನೆ. ಅಕ್ಕಿ, ಕಬ್ಬು ಮತ್ತು ರೇಷ್ಮೆ ವಿಚಾರದಲ್ಲಿ ಹೇಳಿದ್ದೇನೆ. ಮತ್ತೆ ಬೇರೆ ವಿಚಾರಗಳಿಗೆ ಬರೋಣ. ಇಷ್ಟು ಬದಲಾವಣೆ ಮಾಡಿ, ನಿಮ್ಮನ್ನು ರೇಷ್ಮೆ ಬೆಳೆಗಾರರು ಯಾವತ್ತು ಮರೆಯುವುದಿಲ್ಲ. ಮತ್ತೆ ಇಂಧನದ ಬಗ್ಗೆ ಒಂದೇ ಒಂದು ವಿಚಾರ. ಈ ಬಗ್ಗೆ ಬೇರೆ ಸದಸ್ಯರು ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ವಿದ್ಯುತ್ ಕಳ್ಳತನ ಮತ್ತು ಈ ಟ್ರಾನ್ಸ್‌ಮಿಷನ್ ಲಾಸ್ ಎನ್ನುವುದು ಚಿದಂಬರ ರಹಸ್ಯವಾಗಿದೆ. ಟ್ರಾನ್ಸ್‌ಮಿಷನ್ ಲಾಸ್ ಅಥವಾ ಕೆ.ಇ.ಬಿ. ನೇ ನುಂಗುವಂಥ ಇಂಧನವೋ. ಇದನ್ನು ನಾವೆಲ್ಲ ಪತ್ತೆ ಮಾಡಬೇಕಾಗಿದೆ. ಅದು ಬೇರೆ ವಿಚಾರ. ಇಷ್ಟೊಂದು ದುರಾಡಳಿತ ಮತ್ತು ಇಷ್ಟೊಂದು ಕಳ್ಳತನ ನಡೆಯುತ್ತಿರುವ ಬಗ್ಗೆ ಒಂದೇ ಒಂದು ಹೇಳುತ್ತೇನೆ, ಈ ಒಂದು ಇಲಾಖೆಯ ನೌಕರರಿಗೆ ಯಾವುದೋ ಒಂದು ಪ್ರಮಾಣದ ಉಚಿತ ವಿದ್ಯುತ್ ಕೊಡುತ್ತಾರೆ. ಇದಕ್ಕೆ ಏನು ಸಮರ್ಥನೆ ಇದೆ? ಇಲ್ಲಿಯೂ ಕೂಡ ಇಲಾಖೆಯ ನೌಕರರು ಇದ್ದಾರೆ, ನಾನು ಅವರನ್ನೇ ಕೇಳುತ್ತೇನೆ. ಉಚಿತ ವಿದ್ಯುತ್ ಬಗ್ಗೆ ಏನು ಸಮರ್ಥನೆ ಇದೆ? ಕಾನೂನು ಮಂತ್ರಿಗಳು ಇದ್ದಿದ್ದರೆ, ಅವರಿಗೆ ಹೇಳುತ್ತಿದ್ದೆ. ಇದರಲ್ಲಿ ತಾರತಮ್ಯದ ವ್ಯವಸ್ಥೆ ಮಾಡಿದ್ದಾರೆ. ಕೆ.ಇ.ಬಿ. ನೌಕರರು ಮತ್ತು ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಾಮಾನ್ಯವಾಗಿ ಕಾನೂನು ಮಾಡಬೇಕಾದರೆ ಎರಡು ವಿಧಾನ ಉಂಟು. ಕೆ.ಇ.ಬಿ. ನೌಕರರಿಗೆ ಕೊಡತಕ್ಕ ಉಚಿತ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ರದ್ದು ಮಾಡಬೇಕು. ಏಕೆಂದರೆ ನಾನು ಸಮಾನತೆಯಲ್ಲಿ ಇಷ್ಟಪಡುವವನು, ಸಮಾನತೆಗಾಗಿ ಹೋರಾಡುವವನು. ಈ ಕಾರಣ ಕಾನೂನು ಮಂತ್ರಿಗಳು ಇದ್ದಿದ್ದರೆ ಹೇಳೋಣ ಎಂದಿದ್ದೆ. ಅವರಿಗೆ ಉಚಿತ ವಿದ್ಯುತ್ ಕೊಡುವುದನ್ನು ತಾವು ಮುಂದುವರಿಸಿದರೆ, ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೂ ಈ ಸೌಲಭ್ಯವನ್ನು ಕೊಡಬೇಕು. ಉದಾಹರಣೆಗೆ ಹಟ್ಟಿಗೋಲ್ಡ್ ಮೈನ್ಸ್‌ನಲ್ಲಿ ಕೆಲಸ ಮಾಡುವವರಿಗೆ ಒಂದು ವರ್ಷಕ್ಕೆ ಒಂದು ಸವರನ್ ಚಿನ್ನ, ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಒಂದು ವರ್ಷಕ್ಕೆ ಎರಡು ರೇಷ್ಮೆ ಸೀರೆ, ಸಿಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರಿಗೆ ಸಿಮೆಂಟ್ ಮೂಟೆ ಹೀಗೆ ಕೊಡಬೇಕಾಗುತ್ತದೆ.

ಒಬ್ಬ ಸದಸ್ಯರು.—ವಿಧಾನಸೌಧದಲ್ಲಿ ಕೆಲಸ ಮಾಡುವವರಿಗೆ, ವಿಧಾನ ಸೌಧದ ಎರಡು ಇಟ್ಟಿಗೆ ಕೊಡಬೇಕಾಗುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಎಲ್ಲಾ ಕೊಟ್ಟ ಮೇಲೆ ಮುಖ್ಯಮಂತ್ರಿಗಳ ಫಂಡಿನಿಂದ ಒಂದು ಮಾರು ಮಲ್ಲಿಗೆ ಹೂವು, ಒಂದು ಕವಳಿಗೆ ಎಲೆ ಅಡಿಕೆ ಎಲ್ಲಾ ಕೊಡಿ. ಇದು ತಮಾಷೆಗೆ ಹೇಳುತ್ತಿಲ್ಲ. ಏತಕ್ಕೆ ಹೇಳುತ್ತಿದ್ದೇನೆಂದರೆ, ಏನು ಸಮರ್ಥನೆ ಇದೆ, ಇಂತಹ ಕಾನೂನು ಮಾಡುವುದಕ್ಕೆ ನಮಗೆ ಕಾನೂನು ಬರೆಯುವುದಕ್ಕೆ ಬರುತ್ತದೆಂದು ಬರೆಯುತ್ತಿದ್ದಾರೋ? ಇಂಥಾದ್ದೇ ಇನ್ನೊಂದು ಕಾನೂನು ನಮ್ಮ ಗಮನಕ್ಕೆ ಬಂದಿದೆ, ಅದನ್ನು ಕೃಷಿ ಮಂತ್ರಿಗಳ ಬೇಡಿಕೆ ಬಂದಾಗ ಹೇಳುತ್ತೇನೆ

ನಮಗೆ ಕಾನೂನು ಬರೆಯುವುದಕ್ಕೆ ಬರುತ್ತದೆಂದು ಇಷ್ಟಬಂದಹಾಗೆ ಬರೆದುಕೊಳ್ಳುತ್ತಿದ್ದಾರೆ. ಇದನ್ನು ಆದಷ್ಟುಬೇಗ ತಪ್ಪಿಸಬೇಕು. ವಿಶೇಷವಾಗಿ. ಕೈಗಾರಿಕಾ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುವುದು, ಖಾಸಗೀಕರಣ ಎಂದು ಏನು ಮಾತನಾಡುತ್ತಾರೆ. That Perestroika cannot be an excuse for you for privatisation. ಈ ಒಂದು ದೊಡ್ಡ ಪಾಪದ ಕೆಲಸ ಮಾಡಬೇಡಿ ಪುಣ್ಯದ ಕೆಲಸ ಮಾಡಿ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರಮಾನಾಥ ರೈ (ಬಂಟ್ವಾಳ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಿನ್ನೆ ಮತ್ತು ಇವತ್ತು ಕೈಗಾರಿಕೆ, ವಿದ್ಯುತ್. ವಕ್ಫ್ ಹಾಗೂ ರೇಷ್ಮೆ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ. ನಾನು ಇದನ್ನು ಸ್ವಾಗತ ಮಾಡುತ್ತಾ ಪ್ರಾರಂಭಿಕವಾಗಿ ಕೇವಲ ವಿದ್ಯುತ್ ಇಲಾಖೆಯ ಬೇಡಿಕೆಯ ಮೇಲೆ ಮಾತ್ರ ಮಾತನಾಡಬೇಕೆಂದು ಇದ್ದೆ. ಆದರೆ ಮಾನ್ಯ ನಂಜುಂಡಸ್ವಾಮಿಯವರು ಮಾತನಾಡಿದ ಮೇಲೆ ಕೈಗಾರಿಕೆಗಳ ಬಗ್ಗೆಯೂ ಒಂದೆರಡು ಮಾತುಗಳನ್ನು ಹೇಳಬೇಕೆಂದು ಅನ್ನಿಸಿತು. ಇವತ್ತು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ರಾಷ್ಟ್ರದಲ್ಲಿ ಕೂಡಾ ರಾಷ್ಟ್ರೀಕರಣ ವ್ಯವಸ್ಥೆ ಸೋಲಬೇಕು, ಖಾಸಗೀಕರಣಕ್ಕೆ ಅವಕಾಶ ಬೇಕು ಎಂದು ಪ್ರತಿಯೊಂದು ರಂಗದಲ್ಲೂ ಬಂಡವಾಳಶಾಹಿ ಶಕ್ತಿಗಳು ಅನೇಕ ರೀತಿಯಿಂದ ಹಿಂದಿನಿಂದಲೂ ಕೆಲಸ ಮಾಡುತ್ತಿವೆ. ಇದರಿಂದ ಸಾಮಾನ್ಯವಾಗಿ ಸರ್ಕಾರೀಕರಣ ಆದಂಥ ಎಲ್ಲಾ ವ್ಯವಸ್ಥೆಗಳೂ ಯಶಸ್ವಿಯಾಗದಿರುವುದಕ್ಕೆ ಇದೇ ಕಾರಣ ಇರಬೇಕು, ರಷ್ಯಾ ದೇಶದಲ್ಲಿ ಹಿಂದೆ ಯಾವರೀತಿ ಇತ್ತು ಎನ್ನುವಂತಹ ಮಾತನ್ನು ಅವರು ಹೇಳಿದರು. ರಷ್ಯಾದಲ್ಲಿ ಕ್ರಾಂತಿ ಆದಂಥ ಸಂದರ್ಭದಲ್ಲಿ ಅಲ್ಲಿ ಫ್ಯೂಡಲಿಸ್ಟಿಕ್ ಅಪ್ರೋಚ್ ಯಾವರೀತಿ ಇತ್ತೋ ಇವತ್ತು ನಮ್ಮ ಭಾರತ ದೇಶದಲ್ಲಿ ಅದು ಇದೆ. ಹಿಂದಿನ ಪರಿಸ್ಥಿತಿಯಲ್ಲಿ ನಾವು ಯಾವ ಸಮಸ್ಯೆಯನ್ನು ಎದುರಿಸುತ್ತಿದ್ದೆವೋ ಅದೇ ಸಮಸ್ಯೆ, ಜಾತಿಯ ಸಮಸ್ಯೆ, ಭಾಷೆಯ ಸಮಸ್ಯೆ, ಜನಾಂಗದ ಸಮಸ್ಯೆ, ಏಷಿಯನ್ ಯೂರೋಪಿಯನ್ ಮತ್ತು ಮಂಗೋಲಿಯನ್ ಒರಿಜಿನ್ ಎಂಬ ಸಮಸ್ಯೆ ಏನಿತ್ತು. ಇದರಿಂದ ಹೊರಬರಬೇಕಾದರೆ ಪ್ರಗತಿಪರ ಸಮಾಜವಾದಿ ಧೋರಣೆಯ ಮೂಲಕ ಒಂದು ಆರ್ಥಿಕ ಸ್ಥಿಮಿತವನ್ನು ತಂದ ನಂತರ ಮಾತ್ರ ಅವರು ಪೆರಿಸ್ಟ್ರೋಯಿಕಾ ಬಗ್ಗೆ ಮಾತನಾಡುತ್ತಾರೆ. ನಮಗೆ ಬೇಕಾಗಿರುವುದು ಇವೊತ್ತು ಪ್ರಗತಿಪರ ಸಮಾಜವಾದಿ ಧೋರಣೆ. ಇದು ಸಂಪೂರ್ಣವಾಗಿ ರಾಷ್ಟ್ರದಲ್ಲಿ ಅನುಷ್ಠಾನವಾದರೆ ಮಾತ್ರ ಈ ರಾಷ್ಟ್ರ ಮುಂದೆ ಬರುವುದಕ್ಕೆ ಸಾಧ್ಯತೆ ಇದೆ ಎಂದು ನನ್ನ ಒಂದು ಸ್ಪಷ್ಟವಾದ ಅಭಿಪ್ರಾಯ. ಆದುದರಿಂದ ನಾವು ಯಾವತ್ತೂ ಬಂಡವಾಳಶಾಹಿ ಶಕ್ತಿಗಳಿಗೆ ಮಣಿಯದೆ. ಖಾಸಗೀಕರಣಕ್ಕೆ ಮಣಿಯದೆ, ಯಾವ ರೀತಿ ಸಂಪೂರ್ಣವಾಗಿ ಸಮಾಜವಾದವನ್ನು ಸಂವಿಧಾನದಲ್ಲಿ ಒಪ್ಪಿದ್ದೇವೆ ಅದನ್ನೇ ರಾಷ್ಟ್ರೀಕರಣದ ಹಿನ್ನೆಲೆಯಲ್ಲಿ ಮುಂದುವರಿಸಿಕೊಂಡು ಹೋಗಬೇಕೆಂಬ ಮಾತನ್ನು ಪ್ರಾರಂಭದಲ್ಲಿ ಹೇಳುತ್ತೇನೆ. ನಂತರ ಇವತ್ತಿನ ನಿಜವಾದ ಸಮಸ್ಯೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇವತ್ತಿನ ಜನಜೀವನದಲ್ಲಿ ಬಳಕೆದಾರರಿಗೆ ಒಂದು ಅಗತ್ಯವಾದ ವಸ್ತು ಎಂದರೆ ವಿದ್ಯುತ್. ಕೆಲವು ವರ್ಷಗಳ ಹಿಂದೆ ಕೇವಲ ಕೆಲವೇ ಸೀಮಿತವಾದ ಜನರು ಮಾತ್ರ ವಿದ್ಯುತ್ ಬಳಸುತ್ತಿದ್ದರು. ಇವತ್ತು ಪ್ರತಿಯೊಬ್ಬ ಮನುಷ್ಯನೂ, ಪ್ರತಿಯೊಂದು ಕುಟುಂಬದವನೂ ವಿದ್ಯುತ್ ಬಳಕೆದಾರನಾಗುವಂತಹ ಹಂತದಲ್ಲಿ ಇದ್ದಾನೆ. ದೈನಂದಿನ ಜೀವನದಲ್ಲಿ ವಿದ್ಯುತ್ ಬಹಳಷ್ಟು ಅಗತ್ಯವಾಗಿದೆ, ಎನ್ನುವುದು ಸ್ಪಷ್ಟವಾದ ಮಾತು. ಆದರೆ ಇವತ್ತು ವಿದ್ಯುತ್ ಕೊರತೆ ಸಾಮಾನ್ಯವಾದ ವಿಚಾರ. ಬಹಳಷ್ಟು ಹಿಂದಿನಿಂದಲೂ ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ.

ಅನೇಕ ರೀತಿಯಲ್ಲಿ ಅನೇಕ ಯೋಜನೆಗಳ ಮೂಲಕ ನಾವು ಈ ಹಿಂದೆ ಜಲ ಮೂಲದಿಂದ ಸಾಮಾನ್ಯವಾಗಿ ಶಿವನಸಮುದ್ರ ಜೋಗ್ ಮೂಲಕ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿದ್ದೇವೆ. ತುಂಗಾ ಭದ್ರಾ ಯೋಜನೆ ಇರಬಹುದು ರಾಯಚೂರಿನ ಥರ್ಮಲ್ ಪ್ಲಾಂಟ್ಸ್ ಅಲ್ಲಿಂದ ವಿದ್ಯುಚ್ಛಕ್ತಿ ಪಡೆದಿದ್ದೇವೆ. ಅದೇ ರೀತಿ ಮದ್ರಾಸಿನ ಕಲ್ಪಾಕಂನಿಂದಲೂ ಸಹ ಕೇಂದ್ರ ಸರ್ಕಾರದ ಪಾಲು ವಿದ್ಯುಚ್ಛಕ್ತಿ ನಮಗೆ ಬಂದರೂ ಕೂಡ ಇವೊತ್ತು ವಿದ್ಯುತ್ ಕೊರತೆ ಒಂದು ಜೀವಂತ ಪ್ರಶ್ನೆಯಾಗಿಯೇ ಉಳಿದಿದೆ. ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಈ ಒಂದು ವಿದ್ಯುತ್ ಕೊರತೆ ನಿಭಾಯಿಸಲು ಪ್ರಯತ್ನ ಮಾಡಿಲ್ಲವೆನ್ನುವ ಮಾತನ್ನು ಹೇಳುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಇವತ್ತು ಅನೇಕ ಹೊಸ ಯೋಜನೆಗಳನ್ನು ವಿದ್ಯುತ್ ಬೇಡಿಕೆ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಕೈಗೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ವರಾಹಿ ಯೋಜನೆ ಇರಬಹುದು ಕಾಳೀ ನದಿ ಯೋಜನೆ ಇರಬಹುದು, ರಾಯಚೂರು ಥರ್ಮಲ್ ಪ್ಲಾಂಟ್ ಇರಬಹುದು, ಅಲಮಟ್ಟಿ ವಿದ್ಯುತ್‌ಗಾರ ಇರಬಹುದು ಘಟಪ್ರಭಾ ಯೋಜನೆ ಇರಬಹುದು, ನಂದಿಕೋರ ಥರ್ಮಲ್ ಪ್ಲಾಂಟ್ ಯೋಜನೆ ಇರಬಹುದು, ಡೀಸಲ್ ವಿದ್ಯುತ್ ಯೋಜನೆಗಳು ಇರಬಹುದು ಇವೆಲ್ಲ ವಿದ್ಯುತ್ ಕೊರತೆ ನೀಗಲು

ಕೆಲಸ ಪ್ರಾರಂಭ ಮಾಡುತ್ತಿವೆ. ನಮ್ಮ ತಾಲ್ಲೂಕಿನಲ್ಲಿ ಶಿರಪಾಡಿ ಯೋಜನೆಯಲ್ಲಿ ವಿದ್ಯುತ್ ಪಡೆಯುವುದಕ್ಕೆ ಸರ್ಕಾರ ಪ್ರಯತ್ನ ಮುಂದುವರಿಸುವಲ್ಲಿ ಇದೆ. ನಮ್ಮ ವಿದ್ಯುತ್ ಕೊರತೆ ನಿಭಾಯಿಸುವುದಕ್ಕೆ ಖಂಡಿತವಾಗಿ ನಮ್ಮ ರಾಜ್ಯದ ಪವರ್ ಕಾರ್ಪೊರೇಷನ್ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡ ಬೆಂಬಲ ಕೊಡುತ್ತಿದೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ವಿದ್ಯುತ್ ಬಳಸುವ ಗ್ರಾಹಕರಿಗೆ ಯಾವ ರೀತಿಯಲ್ಲಿ ನಾವು ವಿದ್ಯುತ್ ಒದಗಿಸಬೇಕೋ ಇದರಲ್ಲಿ ಸುಧಾರಣೆ ಮಾಡುವ ಅವಶ್ಯಕತೆ ಇದೆ. ಯಾವ ರೀತಿ ಸುಧಾರಣೆ ಮಾಡಬಹುದು. ಬಳಕೆದಾರರ ವಿದ್ಯುತ್ ಕೊರತೆ ನೀಗಿಸುವಲ್ಲಿ ನಿಜವಾಗಿಯೂ ಯಾವುದೇ ಕೆಲಸಗಳನ್ನು ನಾವು ಮಾಡಿಲ್ಲ ಅದರಲ್ಲಿ ನಾವು ವಿಫಲವಾಗಿದ್ದೇವೆ. ಎನ್ನುವುದನ್ನು ನಾವು ಕಾಣಬಹುದು. ನಾವು ಅನೇಕ ವಿಷಯಗಳಲ್ಲಿ ನೋಡಬಹುದು. ವಿದ್ಯುತ್ ಕೊರತೆ ನೀಗಿಸಲು ಸುಧಾರಣೆ ಮಾಡುವುದಕ್ಕೆ ಅನೇಕ ರೀತಿಯ ವ್ಯವಸ್ಥೆಗಳು ಇದ್ದರೂ ಕೂಡ ಇದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ವೋಲ್ಟೇಜ್ ಕೊರತೆ ಇದೆ, ಇವುಗಳನ್ನು ನಿವಾರಣೆ ಮಾಡಲು ಪ್ರಾಮಾಣಿಕ ಪ್ರಯತ್ನ ಆಗಿಲ್ಲ, ಈ ಟ್ರಾನ್ಸ್‌ಮಿಷನ್ ಲೈನ್‌ಗಳನ್ನು ಬದಲಾವಣೆ ಮಾಡಲು ನಾವು ಪ್ರಯತ್ನ ಮಾಡಬೇಕು. ಅದೇ ರೀತಿಯಲ್ಲಿ ಇನ್ನೊಂದು ವ್ಯವಸ್ಥೆಯ ಸುಧಾರಣೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕು. ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಸುಧಾರಣೆ ಮಾಡಬೇಕು. ವಿದ್ಯುಚ್ಛಕ್ತಿ ಸುಧಾರಣೆ ತರುವುದಕ್ಕೆ ಸಾಧ್ಯ ಇದೆ. ಇದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ. ಇನ್ನು ವಿದ್ಯುಚ್ಛಕ್ತಿಯನ್ನು ನೀರಾವರಿ ಪಂಪ್‌ಸೆಟ್‌ಗಳಿಗೆ ಕೊಡಲಿಕ್ಕೆ ವಿಫಲವಾಗಿರುವ ಬಗ್ಗೆ ನನಗಿಂತ ಮೊದಲು ಮಾತನಾಡಿದ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾನು ಹೇಳುವುದಾದರೆ, ೫ ವರ್ಷಗಳಿಂದ ಪಂಪ್‌ಸೆಟ್‌ಗಳನ್ನು ಖರೀದಿ ಮಾಡಿ ಇಟ್ಟುಕೊಂಡಿದ್ದರೂ ಸಹ ಅವರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಅವರು ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡು ಪಂಪ್‌ಸೆಟ್‌ಗಳನ್ನು ಖರೀದಿ ಮಾಡಿ ಇಟ್ಟುಕೊಂಡಿದ್ದಾರೆ. ನಿಮಗೆ ಸಲಕರಣೆಗಳು ಇಲ್ಲ. ವೋಲ್ಟೇಜ್ ಇಲ್ಲ ಅದು ಕೊರತೆ ಇದೆ, ಇದು ಕೊರತೆ ಇದೆ. ಟ್ರಾನ್ಸ್‌ಫಾರ್ಮರ್ಸ್ ಇಲ್ಲ ಇಂತಹ ಮಾತುಗಳನ್ನು ಹೇಳುವುದಾದರೆ ಇದು ಅಧಿಕಾರಿಗಳ ಅಪ್ರಾಮಾಣಿಕ ಧೋರಣೆ ಹೊರತು ಕೊರತೆ ಇಲ್ಲ ಎಂದು ಸ್ಪಷ್ಟವಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಯಲ್ಲಿ ಇನ್ನೊಂದು ಬಹಳ ಪ್ರಮುಖವಾದ ವಿಷಯ ಏನೆಂದರೆ, ಗುಡಿ ಕೈಗಾರಿಕೆ ಯೋಜನೆಗಳಲ್ಲಿ ದುರ್ಬಲವರ್ಗದವರಿಗೆ ಪಂಪ್‌ಸೆಟ್‌ಗಳನ್ನು ಏನು ಕೊಡುತ್ತೇವೆ ಅವುಗಳನ್ನು ಆದ್ಯತೆ ಮೇಲೆ ಮಾಡಿ ಕೊಡಬೇಕಾಗುತ್ತದೆ. ಅವರೂ ಸಹ ಇವತ್ತು ವಿದ್ಯುತ್ ಇಲ್ಲದೆ ಬವಣೆ ಪಡುತ್ತಿದ್ದಾರೆ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವತ್ತು ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದ ಒಂದು ಯೋಜನೆ ಇದೆ. ಹರಿಜನ ಬಸದಿಗಳಲ್ಲಿ ಒಂದು ಹರಿಜನ ಕಾಲೋನಿ ಇದ್ದರೆ ಅಲ್ಲಿ ವಿದ್ಯುತ್‌ನ್ನು ಕೊಡಬೇಕೆನ್ನುವ ಕಾರ್ಯಕ್ರಮ ಇದ್ದರೂ ಕೂಡಾ ಇವತ್ತು ವಿದ್ಯುಚ್ಛಕ್ತಿ ಇಲಾಖೆ ಅದರ ಬಗ್ಗೆ ಪ್ರಾಮಾಣಿಕ ಪ್ರಯತ್ನಗಳು ಆಗುತ್ತಿಲ್ಲ. ಈ ಯೋಜನೆಗಳನ್ನು ಚುರುಕುಗೊಳಿಸುವುದಕ್ಕೆ ಸ್ವಲ್ಪಮಟ್ಟಿಗೆ ಹಿಂದುಮುಂದು ನೋಡುತ್ತಿದ್ದಾರೆ. ಇವತ್ತು ಎನ್ ಆರ್.ಡಬ್ಲ್ಯೂ.ಎಸ್., ಎ.ಆರ್.ಡಬ್ಲ್ಯೂ.ಎಸ್. ಮತ್ತು ಎಂ.ಆರ್.ಡಬ್ಲ್ಯೂ.ಎಸ್. ಇಂಥ ಸ್ಕೀಮುಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಕೊಟ್ಟು ಮುಗಿಸಬೇಕೆಂದು ಇದ್ದರೂ ಕೂಡ ಆ ಗುರಿಯನ್ನು ನಾವು ತಲುಪದೇ ಇರುವ ಪರಿಸ್ಥಿತಿಯಲ್ಲಿ ಇದ್ದೇವೆ. ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಮಾಡುವ ಯೋಜನೆಗಳಿಗೂ ಸಹ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಿಲ್ಲವೆಂದರೆ ಈ ಇಲಾಖೆಯಿಂದ ಎಷ್ಟರಮಟ್ಟಿಗೆ ಲೋಪವಾಗಿದೆ ಎಂದು ಖಂಡಿತವಾಗಿ ಯೋಚನೆ ಮಾಡಬೇಕಾಗಿದೆ. ಇನ್ನು ಕಡೆಯದಾಗಿ ಮಾನ್ಯ ಉಪಾಧ್ಯಕ್ಷಣಿಯವರೇ, ಎಲ್ಲಾ ಸಂದರ್ಭಗಳಲ್ಲೂ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನಲ್ಲಿ ಸಲಕರಣೆಗಳ ಕೊರತೆ ಇದೆಯೆಂದು ಯಾವಾಗಲೂ ಹೇಳುತ್ತಿದ್ದಾರೆ. ಇದು ಸರಿಯಾದುದಲ್ಲ. ಆಮೇಲೆ ನಮ್ಮ ಜಿಲ್ಲೆಗೆ ಒಂದು ಸೂಪರಿಂಟೆಂಡ್ ಕಛೇರಿ ಬೇಕೆಂದು ಬಹಳಷ್ಟು ಸಾರಿ ಬೇಡಿಕೆ ಸಲ್ಲಿಸಿದರೂ ಇದುವರೆಗೆ ಮಾಡಲಿಲ್ಲ. ನಾವು ಏನಾದರೂ ಕೆಲಸ ಮಾಡಿಸಿಕೊಳ್ಳಬೇಕಾದರೆ ಶಿವಮೊಗ್ಗಕ್ಕೆ ಹೋಗಬೇಕಾಗುತ್ತದೆ ಶಿವಮೊಗ್ಗಕ್ಕೆ ಈ ಒಂದು ಕೆಲಸಕ್ಕೆ ಮಾತ್ರ ನಾವು ನೋಡಬೇಕಾಗುತ್ತಿದೆ. ಆದುದರಿಂದ ನಮ್ಮ ಜಿಲ್ಲೆಗೆ ಒಂದು ವೃತ್ತ ಕಛೇರಿಯನ್ನು ಮಾಡಿಕೊಡಬೇಕು. ಮಂಗಳೂರಿನಲ್ಲಿ ಈ ವೃತ್ತ ಕಛೇರಿಯನ್ನು ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೂ ಒಂದು ವಿಚಾರ. ಇವತ್ತು ವಿದ್ಯುತ್ ಬಳಕೆದಾರರ ಸಹಕಾರಿ ಸಂಘ ಎಂದು ನಮ್ಮ ಬಂಟ್ವಾಳ ತಾಲ್ಲೂಕಿನಲ್ಲಿ ಮಾಡಬೇಕೆಂದು ಯೋಚಿಸಿ ಅದನ್ನು ಸ್ಥಾಪನೆ ಮಾಡಲಾಯಿತು. ಇದಕ್ಕೆ ಕರ್ನಾಟಕ ಸರ್ಕಾರವು

ಕೆಲವು ನಿರ್ದೇಶಕರುಗಳನ್ನು ಮಾಡಿ ಮಂಗಳೂರಿನ ಜಿಲ್ಲಾಧಿಕಾರಿಗಳನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಈ ಸಂಘಕ್ಕೆ ಪಾಲು ಬಂಡವಾಳ ಹೂಡಿದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನ ಸಿಗುತ್ತದೆಂದು ಹೇಳಿದರು. ಆದರೆ ಹುಕ್ಕೇರಿ ಮಾದರಿಯ ವಿದ್ಯುತ್ ಬಳಕೆದಾರರ ಸಹಕಾರಿ ಸಂಘ ಇವೊತ್ತಿಗೂ ಪ್ರಾರಂಭವಾಗಲಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕೆನ್ನುವ ವಿಚಾರವನ್ನು ಹೇಳುತ್ತೇನೆ. ಆ ಮೇಲೆ ವೋಲ್ಟೇಜ್ ಕೊರತೆ ನಿಭಾಯಿಸುವುದಕ್ಕೆ ಪ್ರತಿ ಗ್ರಾಮಾಂತರ ಮಟ್ಟದಲ್ಲಿ ಸಬ್ ಸ್ಟೇಷನ್‌ಗಳನ್ನು ತೆರೆಯಬೇಕು. ಈ ರೀತಿ ಸಬ್ ಸ್ಟೇಷನ್‌ಗಳನ್ನು ತೆರೆಯುವುದರಿಂದ ಖರ್ಚು ಹೆಚ್ಚು ಬೀಳುವುದಿಲ್ಲ. ಆದ್ದರಿಂದ ಎಲ್ಲಾ ಹೋಬಳಿ ಮಟ್ಟದಲ್ಲಿ ಸಬ್ ಸ್ಟೇಷನ್‌ಗಳನ್ನು ಮಾಡಿದರೆ ವೋಲ್ಟೇಜ್ ಕೊರತೆ ನಿಭಾಯಿಸುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷೆಯವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್)—ಸನ್ಮಾನ್ಯ ಉಪಾಧ್ಯಕ್ಷೆಯವರೇ, ಇವತ್ತಿನ ದಿವಸ ಈ ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆಯನ್ನು ಪಡೆಯುತ್ತೇನೆ. ಈಗಾಗಲೇ ಹಿಂದೆ ಮಾತನಾಡಿದಂಥ ನನ್ನ ಮಿತ್ರರು ಈ ಖಾಸಗೀಕರಣದ ಬಗ್ಗೆ ಮತ್ತು ಸಾರ್ವಜನಿಕ ರಂಗದ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದಾರೆ. ಆ ವಿಚಾರದಲ್ಲಿ ನಾನು ನಮ್ಮ ಸ್ನೇಹಿತರಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರೊಫೆಸರ್ ನಂಜುಂಡಸ್ವಾಮಿಯವರು ನಮ್ಮ ಕರ್ನಾಟಕ ರಾಜ್ಯದಲ್ಲಿ ಸೊನ್ನೆ ಆದಾಯ ಇರತಕ್ಕಂಥವರು ಇದ್ದಾರೆ, ದಿನಕ್ಕೆ ೨೫ ಲಕ್ಷ ಆದಾಯ ಪಡೆಯತಕ್ಕಂಥವರೂ ಇದ್ದಾರೆ ಅನ್ನತಕ್ಕ ಮಾತನ್ನ ಹೇಳಿದ್ದಾರೆ.

ಆ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಏನಿದ್ದಾವೆ, ಈ ಕೈಗಾರಿಕೆಗಳಲ್ಲಾಗಿರತಕ್ಕಂಥ ನಷ್ಟದ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ೧೯೮೮ ೮೯ನೇ ಸಾಲಿನಲ್ಲಿ ಯಾವರೀತಿಯಾಗಿ ನಮ್ಮ ಸಾರ್ವಜನಿಕ ರಂಗದಲ್ಲಿರತಕ್ಕಂಥ ಕೈಗಾರಿಕೆಗಳು ಅಭಿವೃದ್ಧಿಯನ್ನು ಸಾಧಿಸಿವೆ ಎಂಬ ಬಗ್ಗೆ ಅವರ ಗಮನಕ್ಕೆ ತರಬಯಸುತ್ತೇನೆ. ನಮ್ಮಲ್ಲಿನ ಒಟ್ಟು ಸರಕಾರಿ ಸ್ವಾಮ್ಯದ ಉದ್ದಿಮೆಗಳು ೫೮ ಇವೆ. ಇವುಗಳಲ್ಲಿ ಸುಮಾರು ೪,೧೨೭ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ನಾವು ಹೂಡಿದ್ದೇವೆ. ಇಷ್ಟೊಂದು ಬಂಡವಾಳವನ್ನು ಹೂಡಿದ ಮೇಲೆ ಕೇವಲ ೩೬.೮೯ ಕೋಟಿ ರೂಪಾಯಿಗಳಷ್ಟು ಮಾತ್ರ ಆದಾಯ ಬಂದಿದೆ. ೩೨ ಸಂಸ್ಥೆಗಳು ಒಟ್ಟು ೧೫೧.೨೬ ಕೋಟಿ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸಿವೆ ಈ ಅಕ್ಯುಮಿಲೇಟೆಡ್ ಲಾಸನ್ನು ನಾವು ಗಮನಕ್ಕೆ ತೆಗೆದುಕೊಂಡರೆ, ೫೮೯.೪೪ ಕೋಟಿ ರೂ.ಗಳ ನಷ್ಟ ಉಂಟಾಗಿದೆ. ಈ ನಷ್ಟದಲ್ಲಿ ನಮ್ಮ ಸಮಾಜದ ಎಲ್ಲರ ಪಾಲೂ ಇದೆ. ಅದರಲ್ಲಿಯೂ ಈ ನಮ್ಮ ಸೊನ್ನೆ ಆದಾಯ ಇರತಕ್ಕಂಥವರ ಪಾಲೂ ಇದೆ. ಯಾರು ೨೫ ಲಕ್ಷ ರೂಪಾಯಿ ಆದಾಯ ಪಡೆಯುತ್ತಿದ್ದಾರೋ ಅವರ ಬಗ್ಗೆ ನಾವ್ಯಾರು ಚಿಂತೆ ಮಾಡಬೇಕಾಗಿಲ್ಲ. ಆದರೆ ನಮಗೆ ಹೆಚ್ಚಿನ ಚಿಂತೆ ಇರತಕ್ಕಂಥಾದ್ದು, ಈ ಸೊನ್ನೆ ಆದಾಯದವರ ಬಗ್ಗೆ ಅವರ ಪಾಲಿನ ಹಣದ ಬಗ್ಗೆ. ಈ ೫೮೯.೪೪ ಕೋಟಿಯಷ್ಟು ಅಕ್ಯುಮಿಲೇಟೆಡ್ ನಷ್ಟ ಏನಿದೆ, ಅದರಲ್ಲಿ ಬಡವರ ಪಾಲು ಹೆಚ್ಚು. ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ೫೦ ಪರ್ಸೆಂಟ್‌ನಷ್ಟು ಜನರು ಬಡತನದ ರೇಖೆಗಿಂತ ಕಡಿಮೆ ಮಟ್ಟದಲ್ಲಿ ಏನು ಜೀವನ ನಡೆಸುತ್ತಿದ್ದಾರೆ, ಅಂಥವರ ಪಾಲೂ ಕೂಡ ಇದೆ. ಇದರ ಬಗ್ಗೆ ನಾವು ಚಿಂತೆ ಮಾಡಬೇಕಾಗಿದೆ ಇವೊತ್ತು ನಮ್ಮ ಕೈಗಾರಿಕೆಗಳು ಯಾವರೀತಿ ಇರಬೇಕು, ಅಂದರೆ ಹಿಂದೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿದ್ದಾರೆ, ''It should have been an engine of development.'' ಅಭಿವೃದ್ಧಿಯನ್ನು ಎಳೆದುಕೊಂಡು ಹೋಗತಕ್ಕಂಥ ಯಂತ್ರ ಇದು ಆಗಬೇಕಾಗಿತ್ತು. ಆದರೆ ಆ ಪರಿಸ್ಥಿತಿಯು ಇವೊತ್ತಿನದಿವಸ ಇಲ್ಲ. ಆ ಪರಿಸ್ಥಿತಿ ಇರಲಾಗದ ಕಾರಣದಿಂದ ಪ್ರತಿವರ್ಷವೂ ಕೂಡ ಬಡತನದ ರೇಖೆಗಿಂತ ಕಡಿಮೆ ಇರುವವರ ಸಂಖ್ಯೆ ಹೆಚ್ಚುತ್ತಾ ಇದೆ. ಅಂತೆಯೇ ಈ ಆದಾಯದ ಹಂಚಿಕೆಯಲ್ಲಿಯೂ ಕೂಡ ಲೋಪದೋಷಗಳನ್ನು ಹೆಚ್ಚಾಗಿ ಕಾಣುತ್ತಾ ಇದ್ದೇವೆ. ಆ ದೃಷ್ಟಿಯಿಂದ ಈ ಕೈಗಾರಿಕೆಗಳನ್ನು ನಾವು ಇಂದು ಇಟ್ಟುಕೊಳ್ಳಬೇಕಾಗಿದೆಯೆ ? ಅಥವಾ ಖಾಸಗೀಕರಣ ಮಾಡಬೇಕೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ ನಮ್ಮ ರಾಜ್ಯ ಸರಕಾರದ ವತಿಯಲ್ಲಿರತಕ್ಕಂಥ ಕೈಗಾರಿಕೆಗಳು ಮತ್ತು ಅವುಗಳ ಸೂಕ್ಷ್ಮಚಿತ್ರಗಳನ್ನು ತಮ್ಮ ಮುಂದಿಟ್ಟಿದ್ದೇನೆ. ನಮ್ಮಲ್ಲಿ ಪ್ರಮುಖವಾಗಿರತಕ್ಕಂಥ ಕೈಗಾರಿಕೆಗಳಲ್ಲಿ ಎನ್‌ಜಿಇಎಫ್ ಮುಖ್ಯವಾದುದು. ಇದು ಬಹಳ ದೊಡ್ಡಪ್ರಮಾಣದ ಕಾರ್ಖಾನೆ. ಇದರಲ್ಲಿ ನಾವು ಸಾಕಷ್ಟು ಬಂಡವಾಳವನ್ನೂ ಕೂಡಾ

ಹಾಕಿದ್ದೇವೆ. ಇಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ಹೇಳುವುದಾದರೆ ಈ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಹಾಕಿದಾಗ ಅವರು ಅದಕ್ಕೆ ಉತ್ತರವನ್ನ ಕೂಡಾ ಕೊಟ್ಟಿದ್ದಾರೆ. ಅದರಲ್ಲಿ ಟಾರ್ಪೆಡೋ ಡೀಲ್ ಬಗ್ಗೆ ಹೇಳಿದ್ದಾರೆ. ಅದರಲ್ಲಿ ನನ್ನ ಪ್ರಶ್ನೆಗೆ.

> "AEG have not accepted NGEF's claim for commission on the ground that the supplies have been made by them to the defence sector and is out of the purvieW of the agency agreement. This stand of the AEG has been contested by NGEF and the matter is being persuaded with AEG."

ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ.

೪-೩೫ ಪಿ. ಎಂ.

ಈ ಸಂದರ್ಭದಲ್ಲಿ ಕೈಗಾರಿಕಾ ಸಚಿವರನ್ನು ಕೇಳುವುದೇನೆಂದರೆ ನಿಮ್ಮ ಎನ್‌ಜಿಇಎಫ್‌ನಲ್ಲಿರುವ ಕಡತಗಳನ್ನೆಲ್ಲ ಈ ಸಭೆಯ ಮುಂದಿಡಬೇಕು ಏಕೆಂದರೆ ಈ ಪ್ರಶ್ನೆ ಬಂದಾಗ ಅಲ್ಲಿದ್ದಂಥ ಆರ್ಥಿಕ ನಿರ್ದೇಶಕರೊಬ್ಬರು ಬರೆದಿದ್ದಾರೆ. ಏನೆಂದರೆ, ನಮಗೆ ಎಇಜಿಯಿಂದ ಹಣ ಬರಬೇಕಾಗಿಲ್ಲ ಎಂದು. ಎಇಜಿಯವರು ಹೇಳುವುದಕ್ಕೆ ಮುಂಚೆಯೆ ಜವಾಬ್ದಾರಿಸ್ಥಾನದಲ್ಲಿರುವ ನಿಮ್ಮ ಅಧಿಕಾರಿಗಳು ಹಾಗೆ ಹೇಳಿದ್ದಾರೆ. ಶ್ರೀಮಾನ್ ಶರ್ಮಾ ಅವರು ವಾಲಂಟರಿ ನಿವೃತ್ತಿ ತೆಗೆದುಕೊಂಡರು ನಂತರ ಎಇಜಿ ಮತ್ತು ಎನ್. ಜಿ. ಇ. ಎಫ್. ಪರವಾಗಿ ಇವೊತ್ತು ಎನ್. ಜಿ. ಇ. ಎಫ್. ನಲ್ಲಿ ಡೈರಕ್ಟರ್ ಆಗಿ ಮುಂದುವರಿದಿದ್ದಾರೆ. ಅವರು ಫೆರ ವಯಲೇಷನ್ ಮಾಡಿದ್ದಾರೆಂದು ಪೇಪರ್‌ಗಳಲ್ಲಿ ಬಂತು ನಾನು ವಿಶೇಷವಾಗಿ ಹೇಳಬೇಕಾಗಿಲ್ಲ ಸಿಬಿಐನವರು ಎನ್‌ಕ್ವಯರಿ ಪ್ರಾರಂಭಿಸಿ ಅವರ ಪೂರ್ವಾಪರಗಳನ್ನೆಲ್ಲಾ ಇಡೀಪ್ರಪಂಚದಾದ್ಯಂತ ಹುಡುಕುವ ಕೆಲಸ ನಡೆಯುತ್ತಿದೆ. ಇವರ ಅಕೌಂಟ್ ಲುಕ್ಸ್‌ನ್‌ಬರ್ಗ್‌ನಲ್ಲಿದೆ ಎಂದು ಹೇಳುತ್ತಿದ್ದಾರೆ. ಆ ಬ್ಯಾಂಕ್ ಅಕೌಂಟ್ ಇರುವ ದೇಶವನ್ನು ನಾನು ಭೂಪಟದಲ್ಲಿ ಹುಡುಕಬೇಕಾಗಿದೆ ಜನ ಹಾಗೆ ಮಾತನಾಡುತ್ತಿದ್ದಾರೆ. ಇಂತಹ ಸತ್-ಚಾರಿತ್ರ್ಯವುಳ್ಳವರನ್ನು ನೀವು ಎನ್.ಜಿ.ಇ. ಎಫ್‌ನವ ಬೋರ್ಡ್ ಆಫ್ ಡೈರೆಕ್ಟರಾಗಿ ಮುಂದುವರಿಸಿದ್ದೀರಿ. ಸುಮಾರು ಐದಾರು ಕೋಟಿ ರೂಪಾಯಿಗಳ ವ್ಯವಹಾರ ಇದು. ಇಷ್ಟು ಹಣ ಬರಬೇಕೆಂದು ನೀವೇ ನಿಮ್ಮ ಪುಸ್ತಕದಲ್ಲಿ ಬರೆದುಕೊಂಡಿದ್ದೀರಿ. ಆದರೆ ಈ ಹಣ ಸಂಸ್ಥೆಗೆ ಬರದಂತೆ ಮಾಡಿರುವವರನ್ನು ನೀವು ಡೈರೆಕ್ಟರಾಗಿ ಇರುವುದನ್ನು ನೋಡಿದರೆ, ಹಿಂದೆಯೆಲ್ಲಾ ಏನು ನಡೆಯಿತೋ, ಅವನ್ನೇ ಈಗಲೂ ನೀವು ಮುಂದುವರೆಸುತ್ತಿದ್ದೀರಿ ಎಂದು ನಾನು ಆರೋಪವನ್ನು ನಿಮ್ಮ ಮೇಲೆ ಹೊರಿಸಬೇಕಾಗುತ್ತದೆ. ಮತ್ತು ಈ ಹಣ ಪಡೆಯುವುದರ ಬಗ್ಗೆ the matter is being persuaded with AEG ಎಂದು ಹೇಳಿದ್ದೀರಿ. ಆದ್ದರಿಂದ ನೀವು ಕೇಂದ್ರಸರ್ಕಾರಕ್ಕೆ ಬರೆಯಬಹುದು ಹಾಗೆ ಬರೆದು ಆ ಹಣವನ್ನು ಮುರಿದುಕೊಳ್ಳುವುದಕ್ಕೆ ಹೇಳಲು ನಿಮಗೆ ಅಧಿಕಾರ ಇದೆ. ಅದನ್ನು ಕಾನ್‌ಫಿಸ್ಕೇಟ್ ಮಾಡಲು ನಿಮಗೆ ಅಧಿಕಾರ ಇದೆ. ಈಗ ನೀವು ಅಧಿಕಾರಕ್ಕೆ ಬಂದು ೬ ತಿಂಗಳಾಯಿತು. ಇನ್ನು ೬ ತಿಂಗಳಿನಲ್ಲಿ ಏನೇನು ಮಾಡುತ್ತೀರೋ ನೋಡೋಣ ಈ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೊ, ದಯವಿಟ್ಟು ಅದನ್ನು ತೆಗೆದುಕೊಳ್ಳಲು ಮಾನ್ಯ ಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

ಇವತ್ತು ಎನ್‌ಜಿಇಎಫ್‌ನಲ್ಲಿ ಸರಿಯಾಗಿ ಲೆಕ್ಕ ಹಾಕಿದರೆ ಸುಮಾರು ೩೩ ಕೋಟಿಯಷ್ಟು ನಷ್ಟವಾಗಿದೆ. ಒಂದು ಕಾಲದಲ್ಲಿ ೪ ಕೋಟಿ ಲಾಭ ಮಾಡುತ್ತಿತ್ತು. ನಿಮ್ಮ ಬ್ಯಾಲೆನ್ಸ್‌ಶೀಟ್ ಪ್ರಕಾರವೇ ೧೨ ಅಥವಾ ೧೩ ಕೋಟಿ ಸೇರಿಸಿಕೊಂಡಿದ್ದೀರಿ ಆದರೆ ಅದೂಕೂಡ ಕುಕ್ಡ್-ಅಪ್ ಲೆಕ್ಕ. ಕೋಟಿ ರೂ. ಎಇಜಿಯಿಂದ ಕಮೀಷನ್ ಏನು ಬರಬೇಕಾಗಿದೆಯೋ, ಅದನ್ನೂ ಸೇರಿಸಿಕೊಂಡಿದ್ದೀರಿ, ಆಮೇಲೆ ನೌಕರರಿಗೆ ಕೊಡಬೇಕಾದ ಗ್ರ್ಯಾಚ್ಯುಯಿಟಿಯನ್ನು ಸಹ ಸೇರಿಸಿಕೊಂಡಿದ್ದೀರಿ. ಇದೆಲ್ಲ ಕುಕ್ಡ್-ಅಪ್ ಲೆಕ್ಕವಲ್ಲದೆ ಇನ್ನೇನು ? ಇದರ ಬಗ್ಗೆ ತಾವು ವಿಚಾರಣೆ ನಡೆಸಲು ಒತ್ತಾಯಿಸುತ್ತೇನೆ. ಮತ್ತೆ, ಅಲ್ಲಿ ಅಮರನಾಥ್ ಎನ್ನುವವರು ಡಿವಿಜನಲ್ ಮ್ಯಾನೇಜರ್ ಆಗಿದ್ದಾರೆ. ಇತ್ತೀಚಿಗೆ ಅಂದರೆ ನಿಮ್ಮ ಕಾಲದಲ್ಲಿ ಅವರು ದುರ್ವ್ಯವಹಾರ ನಡೆಸಿದರೆಂಬ ಕಾರಣದ ಮೇಲೆ ಅವರನ್ನು ಸಸ್ಪೆಂಡ್ ಮಾಡಲಾಗಿತ್ತು. ಆದರೆ ಕೆಲವೇ ದಿನಗಳಲ್ಲಿ ವಿಧಾನಸೌಧದಿಂದ ಅಲ್ಲಿಗೆ ನಿರ್ದೇಶನ ಹೋಗಿ ಅದರ ಆಧಾರದ ಮೇಲೆ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತಹ ಕೆಲಸ ನಡೆದಿದೆ.

ಇದಕ್ಕೆ ಕಾರಣವೇನು ? ಹಿಂದೆ ಎನ್.ಜಿ.ಇ.ಎಫ್.ನಲ್ಲಿ ಯಾವ ರೀತಿಯಾಗಿ ಕೆಲಸ ನಡೆಯುತ್ತಿತ್ತೋ ಅದೇ ಜಾಡಿನಲ್ಲಿ ನೀವು ಹೋಗಬೇಕು. ಆರು ಕೋಟಿ ರೂಪಾಯಿ ಎ.ಇ.ಜಿ. ಕಮೀಷನ್ ಬರಬೇಕಾದಂಥ ಹಣ ಇವತ್ತಿಗೂ ಕೂಡಾ ಅದು ಬರುವುದಕ್ಕೆ ಸಾಧ್ಯವಿಲ್ಲ. ನಾಲ್ಕು ಕೋಟಿ

ರೂಪಾಯಿ ನಷ್ಟ ಆದಾಯವನ್ನು ಮಾಡತಕ್ಕಂಥ ಕಾರ್ಖಾನೆ ಇವತ್ತು ೩೨ ಕೋಟಿ ರೂಪಾಯಿಯ ನಷ್ಟವನ್ನು ಅನುಭವಿಸಲು ಏನು ಕಾರಣವಿದೆಯೋ ಅದೇ ಕಾರಣಗಳಲ್ಲಿ, ಅದೇ ಜಾಡಿನಲ್ಲಿ ಈ ಸರ್ಕಾರ ಸಹ ಮುಂದುವರಿಯುತ್ತಿದೆ. ಇದನ್ನು ನೀವು ನಿಲ್ಲಿಸತಕ್ಕಂಥ ಪ್ರಯತ್ನವನ್ನು ಮಾಡದಿದ್ದರೆ ಇದಕ್ಕೆ ಶಾಮೀಲಾಗಿ ಹಿಂದೆ ನಡೆದಂಥ ಘಟನೆಗಳಿಗೆ ಪುನರಾವರ್ತನೆ ಆಗತಕ್ಕಂಥದ್ದಕ್ಕೆ ಅವಕಾಶವನ್ನು ನೀವು ಕೊಡುತ್ತಿದ್ದೀರಿ ಎನತಕ್ಕಂಥ ಮಾತನ್ನು ನಾನು ಹೇಳಬೇಕಾಗುತ್ತದೆ ಹಿಂದೆ ಅಲ್ಲಿ ಕೆಲವು ವಿಚಾರಣೆಗಳು ಕೂಡಾ ನಡೆದಿದೆ. ಕೆಲವರು ಮಾಡಿರತಕ್ಕಂಥ ವಿಚಾರಣೆಗಳು ಕೂಡಾ ನಡೆದಿದೆ. ಸುರೇಂದ್ರನಾಥ್ ಎನ್ನುವ ಒಬ್ಬ ಐ.ಎ.ಎಸ್. ಅಧಿಕಾರಿ ಅವರ ಮುಖಂಡತ್ವದಲ್ಲಿ ಈ ವಿಚಾರಣೆ ನಡೆದಿದೆ. ಜಯರಾಮನ್ ನೇತೃತ್ವದಲ್ಲಿ ಕೂಡ ವಿಚಾರಣೆ ನಡೆದಿದೆ. ಅದರಲ್ಲಿಯೂ ಯಾರ್ಯಾರು ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದರೆ ಹಿಂದೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಶ್ರೀಮಾನ್ ಪ್ರಭಾಕರ ರಾವ್, ಶ್ರೀ ವಾತ್ಸವ, ಇವರನ್ನು ಸಸ್ಪೆಂಡ್ ಮಾಡಿದ್ದೀರಿ. ಅಮರನಾಥ ಎನ್ನುವವರ ವಿಚಾರವನ್ನು ನಾನೇ ಹೇಳಿದ್ದೇನೆ. ಪುನಃ ಜಯರಾಮನ್ ಎನ್ನತಕ್ಕಂಥವರ ರಿಪೋರ್ಟ್‌ನಲ್ಲಿ ಪುನಃ ಚೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಂಥ ಪ್ರಭಾಕರ ರಾವ್ ವಿಶ್ವನಾಥ್ ಎನ್ನತಕ್ಕಂಥ ವರು, ಷಣ್ಮುಖಪ್ಪ ಮುಂತಾದ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಡತಕ್ಕಂಥ ಒಂದು ಪ್ರಯತ್ನ ನಡೆಯುತ್ತಿದೆ. ಇವರ ಮೇಲೆ ತತ್‌ಕ್ಷಣ ಕಾನೂನಿನಲ್ಲಿರತಕ್ಕಂಥ ಏನೇನು ಅವಕಾಶಗಳು ಇದೆ, ಅದು ಸಿವಿಲ್ ನೇಚರ್ ಇರಬಹುದು ಅಥವಾ ಕ್ರಿಮಿನಲ್ ನೇಚರ್ ಇರಬಹುದು, ಇವೆರಡನ್ನೂ ಕೂಡ ಸಿವಿಲ್ ಮತ್ತು ಕ್ರಿಮಿನಲ್‌ನ್ನು ಎರಡು ರೀತಿಯಾದ ಕ್ರಮವನ್ನು ತೆಗೆದುಕೊಂಡು ಯಾರು ತಪ್ಪಿತಸ್ಥರು ಇದ್ದಾರೆ, ಆ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ ಇನ್ನೊಂದು ಮಹತ್ತರವಾದ ಒಂದು ಇಂಡಸ್ಟ್ರಿ ನಮ್ಮಲ್ಲಿರತಕ್ಕಂಥದ್ದು ಎಂದರೆ ಮೈಸೂರು ಪೇಪರ್ ಮಿಲ್ಸ್. ಇದರಲ್ಲಿ ಕೂಡಾ ನೂರಾರು ಕೋಟಿ ರೂಪಾಯಿ ಬಂಡವಾಳವನ್ನು ನಾವು ಹೂಡಿದ್ದೇವೆ. ಈಗಾಗಲೇ ಸರ್ಕಾರದ ಗಮನಕ್ಕೂ ಕೂಡಾ ಬಂದಿರಬಹುದು. ಅಲ್ಲಿ ಇರತಕ್ಕಂಥ ನೌಕರರನ್ನು ನೀವು ಏತಕ್ಕೆ ಲಾಕೌಟ್ ಮಾಡಿದ್ದೀರಿ ? ಏತಕ್ಕೆ ಮಾಡಿದಿರಿ ಎಂದು ಕೇಳುವುದಕ್ಕೆ ಹೋಗುವುದಿಲ್ಲ. ಕಾರಣವೇನು ಎಂದರೆ ಎಲ್ಲವನ್ನೂ ಕೂಡ ಹೇಳಲು ಸಮಯ ಇಲ್ಲ, ಅಲ್ಲಿ ನಡೆಯುತ್ತಿರತಕ್ಕಂಥ ದುರ್ವ್ಯವಹಾರಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಈ ಕಚೇರಿಯನ್ನು ಈ ಇಂಡಸ್ಟ್ರಿಯನ್ನು ಕಮರ್ಷಿಯಲ್ ಆಗಿ ನಡೆಸಬೇಕು, ಲಾಭ ನಷ್ಟದ ಆಧಾರದ ಮೇಲೆ ಅದನ್ನು ನಡೆಸಬೇಕಾಗಿರತಕ್ಕಂಥದ್ದು. ಇದು ಧರ್ಮಛತ್ರ ಅಲ್ಲ. ಇಂಡಸ್ಟ್ರಿ ಎಂದರೆ ಧರ್ಮಛತ್ರ ಅಲ್ಲ. ಧರ್ಮಛತ್ರವನ್ನು ನಡೆಸುವುದಕ್ಕೆ ಬೇರೆ ಇಲಾಖೆ ಇದೆ. ಧರ್ಮದತ್ತಿಗಳ ಇಲಾಖೆಯೇ ಬೇರೆ ಇದೆ ಆದರೆ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನವರು ಪ್ರತಿಯೊಂದು ಪೈಸೆ ಕೂಡಾ ಲೆಕ್ಕ ಹಾಕಬೇಕಾಗುತ್ತದೆ. ಲಾಭನಷ್ಟದ ಲೆಕ್ಕವನ್ನು ಲೆಕ್ಕ ಹಾಕಬೇಕಾಗುತ್ತದೆ ಇವರ ಕಚೇರಿ ಇರತಕ್ಕಂಥದ್ದು ಬೆಂಗಳೂರಿನಲ್ಲಿ. ಮಿಲ್ ಇರತಕ್ಕಂಥ ಭದ್ರಾವತಿಯಲ್ಲಿ ಏತಕ್ಕೆ ? ಇದೇನು ? ಯಾವ ಕಾರಣಕ್ಕೋಸ್ಕರ ಇವರು ಕಚೇರಿಯನ್ನು ಬೆಂಗಳೂರಿನಲ್ಲಿ ಏತಕ್ಕೆ ಇಟ್ಟುಕೊಂಡಿದ್ದಾರೆ ? ಕಚೇರಿ ಕೂಡಾ ಅಲ್ಲಿಯೇ ಇರಬೇಕಾಗಿತ್ತು. ಸಂಬಂಧಪಟ್ಟ ಕಚೇರಿಗಳು ಕೂಡಾ ಅಲ್ಲಿಯೇ ಇದ್ದರೆ ಆಡಳಿತಾತ್ಮಕವಾಗಿ ನಿಮಗೆ ಹಣ ಉಳಿತಾಯವಾಗುವುದಿಲ್ಲವೆ ? ಹೋಗಿ ಬರತಕ್ಕಂಥ ಅಧಿಕಾರಿಗಳಿಗೆ ಟಿ.ಎ. ಮತ್ತು ಡಿ.ಎ. ಕೊಡುತ್ತಿದ್ದೀರಲ್ಲಾ ಅದು ಉಳಿತಾಯವಾಗುವುದಿಲ್ಲವೇ ? ಯಾವ ಕಾರಣದಿಂದ ಆ ಕಚೇರಿಯನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದೀರಿ ? ಇದಕ್ಕೆ ಮಹತ್ತರವಾದ ಕಾರಣ ಇದೆ. ಈ ಅಧಿಕಾರಿಗಳು ಯಾವ ರೀತಿ ಕುಣಿಸುತ್ತಾರೋ ಆ ರೀತಿ ಕುಣಿಯತಕ್ಕಂಥ ಅಭ್ಯಾಸ ತಮಗೂ ಕೂಡಾ ಇದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಪಾಯಿಂಟ್ ಆಫ್ ಆರ್ಡರ್...

ಶ್ರೀ ಸಿ. ಬೈರೇಗೌಡ.—ಯಾವ ಪಾಯಿಂಟ್ ಆಫ್ ಆರ್ಡರ್ ? ಪಾಯಿಂಟ್ ಆಫ್ ಆರ್ಡರ್ ಯಾವ ರೂಲ್ ಎಂದು ತಾವು ಕೇಳಿ...

ಶ್ರೀ ಎಲ್. ಆರ್. ಶಿವರಾಮೇಗೌಡ.—ಪಾಯಿಂಟ್ ಆಫ್ ಆರ್ಡರ್ ಹೇಳಲಿಕ್ಕೇ ನಾನು ನಿಂತಿರುವುದು...

ಶ್ರೀ ಸಿ. ಬೈರೇಗೌಡ.—ಪಾಯಿಂಟ್ ಆಫ್ ಆರ್ಡರ್ ಯಾವ ರೂಲ್‌ನಲ್ಲಿ ಬರುತ್ತದೆ ಹೇಳಲಿ, ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮೈಸೂರ್ ಪೇಪರ್ ಮಿಲ್‌ನ ಕೇಂದ್ರ ಕಚೇರಿ ಬೆಂಗಳೂರಿನಲ್ಲಿದೆ ಎಂದು ಹೇಳುತ್ತಿದ್ದಾರೆ. ಇದು ಕೇಂದ್ರ ಕಚೇರಿ ನಿನ್ನೆ ಮೊನ್ನೆ ಬಂದಿದ್ದು ಇಲ್ಲ. ಇದು ಮುಂಚೆಯಿಂದ ಇದ್ದರೂ ಸಹ, ಇವರು ಅಧಿಕಾರದಲ್ಲಿದ್ದದಲ್ಲ. ಆಗ ಏತಕ್ಕೆ ಕೇಳಲಿಲ್ಲ, ಸೀಟು ಬದಲಾವಣೆ ಆದರೂ ಇನ್ನೂ ಅವರ ಬುದ್ಧಿ ಹೋಗಲಿಲ್ಲ.

ಉಪಾಧ್ಯಕ್ಷರು.—ಇದು ಯಾವ ಪಾಯಿಂಟ್ ಆಫ್ ಆರ್ಡರ್...

ಶ್ರೀ ಎಂ. ಪಿ. ವೆಂಕಟೇಶ್.—ಇವರ ಸೀಟು ಬದಲಾವಣೆ ಆದರೂ ಸಹ ಬುದ್ಧಿ ಹೋಗಿಲ್ಲ.

ಉಪಾಧ್ಯಕ್ಷರು.—ಬೇಗ ಮುಗಿಸಿ, ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ.—ಇದು ಅನೇಕ ದುರುಪಯೋಗದ ಆಗರ. ಮೈಸೂರ್ ಪೇಪರ್ ಮಿಲ್ಸ್ ಅನೇಕ ದುರುಪಯೋಗದ ಆಗರ ಆಗಿದೆ. ನಮ್ಮ ದೇಶದಲ್ಲಿ ಪಲ್ಪ್ ಕಡಿಮೆ ಬೆಲೆಗೆ ಸಿಗುತ್ತಿದ್ದರೂ ಸಹ ವಿದೇಶದಿಂದ ತರಿಸತಕ್ಕ ಅವಶ್ಯಕತೆ ಏನು ಇತ್ತು ? ನಾನು ಪಲ್ಪ್‌ನ ಅವಶ್ಯಕತೆ ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಇಲ್ಲಿ ನೀವು ಕೊಟ್ಟಿರತಕ್ಕ ಬೆಲೆ ಏನು ಇದೆ ? ಅಂದರೆ ನೀವು ಮೈಸೂರು ಪೇಪರ್ ಮಿಲ್ಸ್‌ಗೆ ಯಾವ ಬೆಲೆಗೆ ಪಲ್ಪನ್ನು ಕೊಂಡಿದ್ದೀರೋ ಅದೇ ರೀತಿ ಬೇರೆ ರಾಜ್ಯದಲ್ಲಿರತಕ್ಕ ಪೇಪರ್ ಮಿಲ್ಸ್‌ನವರು ಕೂಡ ಪಲ್ಪನ್ನು ಕೊಂಡುಕೊಂಡಿದ್ದಾರೆ. ಆದರೆ ಅವರು ಕೊಟ್ಟಿರತಕ್ಕ ಬೆಲೆಗೂ ಮೈಸೂರ್ ಪೇಪರ್ ಮಿಲ್ಸ್‌ನವರು ಕೊಟ್ಟಿರತಕ್ಕ ಬೆಲೆಗೂ ಅಜಗಜಾಂತರ ವ್ಯತ್ಯಾಸ ಇದೆ. ಇದರಲ್ಲಿ ಒಳ ವ್ಯವಹಾರ ಇದೆ. ಈ ಪಲ್ಪನ್ನು ಕೊಂಡುಕೊಂಡಿರತಕ್ಕದ್ದರ ಬಗ್ಗೆ ಇದರ ವ್ಯವಹಾರದ ಪೂರ್ತಿ ವಿವರಣೆಯನ್ನು ಈಗ ತಾವು ತಮ್ಮ ಉತ್ತರ ಕೊಡುವಂತಹ ಕಾಲದಲ್ಲಿ ಕೊಡುವುದಕ್ಕೆ ಸಾಧ್ಯ ಇಲ್ಲದೇ ಇದ್ದರೂ ಸಹ ಈ ಸದನಕ್ಕೆ ಮುಂದೆ ಇಡಬೇಕಾದ ಅವಶ್ಯಕತೆ ಇದೆ. ಏಕೆಂದರೆ ಇದು ಧರ್ಮಛತ್ರ ಆಗುವುದಕ್ಕೆ ಸಾಧ್ಯ ಇಲ್ಲ. ಪೈಸೆ ಪೈಸೆಗೂ ಕೂಡ ಲೆಕ್ಕ ಹಾಕಬೇಕಾಗುತ್ತದೆ. ಯಾರೋ ಒಬ್ಬ ಅಧಿಕಾರಿ ಭದ್ರಾವತಿಯಲ್ಲಿ ಇರಬೇಕಾದವನು, ಅಥವಾ ಅಧಿಕಾರಿಗಳ ಗುಂಪು ಬೆಂಗಳೂರಿನಲ್ಲಿ ಸೇರಿ ಕೊಂಡು ಇಲ್ಲಿ ಲೂಟಿ ಹೊಡೆಯುವುದಕ್ಕೆ ಅಲ್ಲ ಈ ಕಾರ್ಖಾನೆಗಳು ಇರತಕ್ಕದ್ದು. ಈ ಲೂಟಿಯನ್ನು ನಿಲ್ಲಿಸಬೇಕಾದದ್ದು ನಿಮ್ಮ ಕರ್ತವ್ಯ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿರತಕ್ಕ ಕೆಲವು ಅಧಿಕಾರಿಗಳು ಹೊರದೇಶಗಳಿಗೆ ಹೋಗಿದ್ದಾರೆ. ಇವರು ಹೊರದೇಶಕ್ಕೆ ಉದ್ಧಾರ ಮಾಡಲು ಹೋಗಿಲ್ಲ, ಮಜಾ ಮಾಡುವುದಕ್ಕೆ ಹೋಗಿದ್ದಾರೆ. ಯಾರ್ಯಾರು ಹೋಗಿದ್ದಾರೆ, ಅದರಲ್ಲಿ ಏನು ಆಶ್ಚರ್ಯ ಅಂದರೆ, ಅಲ್ಲಿಗತಕ್ಕಂಥ ಅಧಿಕಾರಿಗಳು ಕಾರ್ಖಾನೆಯ ಪರ್ಮನೆಂಟ್ ಅಧಿಕಾರಿಗಳು ಏನು ಇದ್ದಾರೆ ಅವರು ಹೊರದೇಶಕ್ಕೆ ಹೋಗಿ ಬರತಕ್ಕದ್ದರಲ್ಲಿ ಅರ್ಥ ಇದೆ. ಆದರೆ ಒಬ್ಬ ಅಧಿಕಾರಿ ಅವರು ಕಾರ್ಖಾನೆಯ ಅಧಿಕಾರಿ ಅಲ್ಲ. ಅವರು ರಾಜ್ಯ ಸರ್ಕಾರದ ಅಧಿಕಾರಿ, ಅವರನ್ನು ಸಹ ಹೊರ ದೇಶಕ್ಕೆ ಕಳಿಸಿರತಕ್ಕ ಅವಶ್ಯಕತೆ ಏನು ಇತ್ತು ? ಏಕೆಂದರೆ ನಾಳೆ ಅವರ ಸೇವೆಯನ್ನು ಸರ್ಕಾರ ವಾಪಸ್ ಪಡೆಯಬಹುದು. ಏನು ಐಎಎಸ್ ಅಧಿಕಾರಿಗಳು ಇದ್ದಾರೆ ಅವರ ಸೇವೆಯನ್ನು ವಾಪಸ್ ಪಡೆಯ ಬಹುದು. ಅಂತಹವರನ್ನು ಹೊರ ದೇಶಕ್ಕೆ ಕಳುಹಿಸಿ ಅವರು ತಂದಂತಹ ತಂತ್ರಜ್ಞಾನ ಯಾವುದಕ್ಕೆ ಉಪಯೋಗ ಆಗುತ್ತದೆ ಎಂದು ತಮ್ಮನ್ನು ಕೇಳುತ್ತೇನೆ. ಮೈಸೂರು ಪೇಪರ್ ಮಿಲ್ಸ್‌ಗೆ ಸೇರಿದಂತೆ ಬೆಂಗಳೂರಿನಲ್ಲಿ ಒಂದು ಗೆಸ್ಟ್ ಹೌಸ್ ಇದೆ ಅಲ್ಲಿ ಯಾವ ಯಾವುದಕ್ಕೆ ಎಷ್ಟು ಖರ್ಚು ಆಗಿವೆ, ಮತ್ತು ಊಟ ತಿಂಡಿಗೆ ಎಷ್ಟು ಖರ್ಚು ಆಗಿದೆ. ಸ್ಕಾಚ್ ವಿಸ್ಕಿಗೆ, ಬಾಟಲ್‌ಗಳಿಗೆ ಎಷ್ಟು ಖರ್ಚು ಆಗಿದೆ, ಎಷ್ಟು ಖರ್ಚಾಗಿದೆ ಎಂಬುದನ್ನು ಈ ಸಭೆಗೆ ವಿವರ ಕೊಡಬೇಕು. ಏಕೆಂದರೆ ಇದನ್ನು ಲೂಟಿ ಮಾಡತಕ್ಕಂಥ ಒಂದು ವ್ಯವಸ್ಥೆ ಇವೊತ್ತಿನ ದಿವಸ ಅಲ್ಲಿ ನಡೆದಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಇದೆಲ್ಲಾ ಯಾಹ್ಯಾರವರಿಗೆ ಏನು ಗೊತ್ತಾಗುತ್ತದೆ...

ಶ್ರೀ ಸಿ. ಬೈರೇಗೌಡ.—ಇಲ್ಲಿ ಕೆಲವು ಹುದ್ದೆಗಳನ್ನು ಯಾವ ರೀತಿ ನಿರ್ಮಾಣ ಮಾಡುತ್ತಾರೆಂದರೆ ಅಂಗಡಿಗೆ ಹೋಗಿ ಚಾಕಲೇಟ್ ಕೊಂಡುಕೊಂಡಷ್ಟೇ ಸುಲಭ. ಇವರಿಗೆ ಬೇಕಾಗಿರತಕ್ಕ ಅಂದರೆ ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೆ ಬೇಕಾಗಿರತಕ್ಕ ವ್ಯಕ್ತಿಗೋಸ್ಕರ ಒಂದು ಹುದ್ದೆ ನಿರ್ಮಾಣ ಆಗುತ್ತದೆ. ಅವರಿಗೆ ಬೇಡ ಅಂದಾಗ ಆ ಹುದ್ದೆ ಇಲ್ಲ. ಮಾರನೇ ದಿವಸವೇ ನಾಪತ್ತೆ ಆಗುತ್ತದೆ, ಇದು ಮನಸೋ ಇಚ್ಛೆ ನಡೆಯುತ್ತಿದೆ. ಒಂದು ಸಂಸ್ಥೆಯನ್ನು ನಡೆಸತಕ್ಕದ್ದಕ್ಕೆ ಮನಸೋ ಇಚ್ಛೆ ಪ್ರವೃತ್ತಿ ಈ ರೀತಿ ಮನಸೋ ಇಚ್ಛೆ ನಡೆಸುವುದಕ್ಕೆ ಸಾಧ್ಯ ಇಲ್ಲ. ಇದರ ಬಗ್ಗೆ ಕೂಡ ತಾವು ವಿವರಣೆ ಕೊಡಬೇಕಾಗುತ್ತದೆ.

ಮತ್ತೆ ಅದು ಆ ತರಹ ಈ ತರಹ ಅಲ್ಲ, ಬರೀ ಸ್ಕಾಚ್ ವಿಸ್ಕಿನೇ ; ಬರೀ ದೊಡ್ಡ ದೊಡ್ಡ ಬಾಟಲುಗಳು. ೧೦೦೦. ೨೦೦೦, ೩೦೦೦ ರೂಪಾಯಿನ ಬಾಟಲುಗಳೇ ಖರ್ಚಾಗಿರತಕ್ಕಂಥಾದ್ದು. ಅದರಲ್ಲಿ ಏನೂ ಅನುಮಾನ ಇಟ್ಟುಕೊಳ್ಳಬೇಡಿ. ಆಮೇಲೆ ಕಂಪ್ಯೂಟರ್ಸ್ ಕೊಂಡುಕೊಳ್ಳತಕ್ಕಂಥ

ಕೆಲಸ ಕೂಡ ನಡೆದಿದೆ. ಸ್ವಾಮಿ, ಇವತ್ತು ಕೊಂಡಿರುವುದರಲ್ಲಿ ಕಂಪ್ಯೂಟರ್ ಎಷ್ಟು ಕೆಲಸ ಮಾಡುತ್ತಿದೆ, ಕೊಂಡುಕೊಳ್ಳುವುದಕ್ಕೆ ಆಗಿರತಕ್ಕ ಖರ್ಚು ಎಷ್ಟು, ಮತ್ತು ಆ ಕಂಪ್ಯೂಟರ್ಸ್‌ನ್ನು ತರಿಸಿದ್ದು ಯಾವಾಗ, ಯಾವತ್ತಿನಿಂದ ಅವು ಕೆಲಸಮಾಡುತ್ತಿವೆ ; ಅನಾವಶ್ಯಕವಾಗಿ ಅಲ್ಲಿ ಕಂಪ್ಯೂಟರ್ಸ್‌ನ್ನು ತರಿಸಿ, ಇಲ್ಲಿಯವರೆಗೆ ಆ ಕಂಪ್ಯೂಟರ್ಸ್‌ಗೆ ಕೆಲಸ ಕೊಡತಕ್ಕಂಥಾದ್ದು ನಡೆದಿಲ್ಲ. ಯಾವಾಗ ಉಪಯೋಗಕ್ಕೆ ಬಂದಿಲ್ಲವೋ ಆ ಕಾರಣದಿಂದ ಅದಕ್ಕೆ ತೊಡಗಿಸಿರತಕ್ಕಂಥ ಹಣ ಇವತ್ತಿನದಿವಸ ವೇಸ್ಟ್ ಆಗತಕ್ಕಂಥ ಪರಿಸ್ಥಿತಿ ಬಂದಿದೆ. ಮತ್ತೆ ಕಂಪ್ಯೂಟರ್ಸ್‌ನ ಟ್ರೈನಿಂಗ್ ಕೊಡಲಿಕ್ಕೆ ಒಬ್ಬರನ್ನು ಹೊರದೇಶಕ್ಕೆ ಕಳಿಸಿದಿರಿ. ಈ ಎಂ.ಪಿ. ಎಂ.ನಲ್ಲಿಗತಕ್ಕಂಥ ಅಧಿಕಾರಿಗಳಿಗೆ ಹೊರದೇಶಗಳಿಗೆ ಹೋಗಿ ಬರುವುದು ಅಂದರೆ ನಾವು ಇಲ್ಲಿ ಸುಭಾಶ್‌ನಗರ ಬಸ್‌ಸ್ಟ್ಯಾಂಡಿಗೆ ಹೋಗಿ ಬಂದ ಹಾಗೆ ; ಆರೀತಿ ಆಗಿದೆ. ಸುಭಾಶ್‌ನಗರ ಬಸ್‌ಸ್ಟ್ಯಾಂಡಿಗೆ ನಾವು ಹೇಗೆ ಹೋಗಿ ಬರುತ್ತೇವೋ ಹಾಗೆ ಇವರು ಹೊರದೇಶಗಳಿಗೆ ಹೋಗತಕ್ಕಂಥ ಅಭ್ಯಾಸವನ್ನು ಇಟ್ಟುಕೊಂಡಿದ್ದಾರೆ. ಅದರ ವಿವರಗಳನ್ನು ಸಹ ತಾವು ದಯವಿಟ್ಟು ಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಇನ್ನೂ ಅನೇಕ ವಿಚಾರಗಳಿವೆ, ತಾವು ಬೆಲ್ ಹೊಡೆಯುತ್ತಾ ಇದ್ದೀರಿ. ಈ ಮೈಸೂರುಪೇಪರ್ ಮಿಲ್ ಬಗ್ಗೆ ಸಮಗ್ರವಾದಂಥ ಒಂದು ತನಿಖೆ ಆಗಬೇಕಾಗಿದೆ. ನಷ್ಟವಾಗುತ್ತಿರತಕ್ಕಂಥ ಉದ್ಯಮಗಳಲ್ಲಿ ಇದು ಒಂದು ಪ್ರಮುಖವಾದಂಥ ಉದ್ಯಮ. ಇದನ್ನು ಈರೀತಿಯಾಗಿ ಬಿಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಏನು ಹೇಳುತ್ತೀರಿ ಎನ್ನುವುದನ್ನು ತಮ್ಮಿಂದ ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದೆ, ಸಾರ್ವಜನಿಕ ರಂಗದ ಕೈಗಾರಿಕೆಗಳು ಏನಿವೆ, ಇಟ್ ಶುಡ್ ಹ್ಯಾವ್‌ಬೀನ್ ಎ ಇಂಜಿನ್ ಆಫ್ ಡೆವಲಪ್‌ಮೆಂಟ್. ಅದನ್ನು ಮಾಡಿರತಕ್ಕಂಥ ಉದ್ಯಮಗಳು ಸರ್ಕಾರಿ ರಂಗದಲ್ಲಿವೆ. ಅಂತಹ ಉದ್ಯಮಗಳ ಬಗ್ಗೆ ಹೇಳಬೇಕಾದರೆ ನನಗೆ ಸಂತೋಷವಾಗುತ್ತದೆ. ಇವತ್ತು ಮೈಸೂರು ಲ್ಯಾಂಪ್ಸ್ ಇದೆ ಅದು ೩-೪ ವರ್ಷಗಳ ಮೊದಲು ನಷ್ಟದಲ್ಲಿದ್ದಂಥ ಈ ಉದ್ದಿಮೆ. ಇವತ್ತು ಲಾಭದಲ್ಲಿದೆ. ಸುಮಾರು ೪ ಕೋಟಿವರೆಗೆ ಲಾಭಮಾಡತಕ್ಕಂಥ ಮಟ್ಟಕ್ಕೆ ಇವತ್ತಿನದಿವಸ ಬಂದಿದೆ. ಅಲ್ಲಿ ನಡೆಯುತಕ್ಕಂಥ ಕೆಲಸದ ಬಗ್ಗೆ ಮೆಚ್ಚಬೇಕಾಗಿರತಕ್ಕಂಥಾದ್ದು ನನ್ನ ಕರ್ತವ್ಯವೂ ಹೌದು. ಇವತ್ತು ಕೆಲವು ಸರ್ಕಾರಿ ಕಾರ್ಖಾನೆಗಳು ಎಲ್ಲಿಯವರೆಗೆ ಹೋಗಿವೆ ಅಂದರೆ, ಟಿಷ್ಯೂ ಪೇಪರ್ ತಯಾರು ಮಾಡುವಂಥ ಕೆಲಸಕ್ಕೂ ಕೂಡ ಹಚ್ಚಿದ್ದಾರೆ, ಪೌಡರ್ ತಯಾರು ಮಾಡತಕ್ಕಂಥ ಕೆಲಸ ಕೂಡ ಅಲ್ಲಿ ನಡೆಯುತ್ತಾ ಇವೆ. ಟಾಯಲೆಟ್ ಪೇಪರ್ ತಯಾರು ಮಾಡತಕ್ಕಂಥ ಕೆಲಸ ನಮ್ಮ ಸರ್ಕಾರಿ ರಂಗದ ಉದ್ದಿಮೆಗಳಲ್ಲಿ ನಡೆಯುತ್ತಿದೆ. ಅಂದರೆ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಏನು ಕೆಲಸ ಆಗಬೇಕಾಗಿತ್ತೋ ಅದನ್ನು ಮಾಡತಕ್ಕಂಥಾದ್ದಕ್ಕೆ ಈ ಕೈಗಾರಿಕೆಗಳವರು ಕೈಹಾಕಿದ್ದಾರೆ ಇದು ಕೂಡದು ಎಂದು ನನ್ನ ಭಾವನೆ. ಇದೆಲ್ಲವನ್ನೂ ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿರಬೇಕಾಗಿರತಕ್ಕಂಥಾದ್ದು. ಇವತ್ತಿನದಿವಸ ಆ ಕೆಲಸ ಮೈಸೂರು ಲ್ಯಾಂಪ್ಸ್‌ನಲ್ಲಿ ನಡೆದಿದೆ. ಅದರ ವಿವರವನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇವತ್ತು ಅಲ್ಲಿ ಅದ್ಭುತವಾದಂಥ ಸಾಧನೆ, ಕೆಲಸ ಆಗಿದೆ. ಅದರ ರೇಟ್ ಆಫ್ ಗ್ರೋತ್ ಹಿಂದೆ ೧೫ ಪರ್ಸೆಂಟ್ ಇದ್ದದ್ದು ಇವತ್ತು ೨೮ ಪರ್ಸೆಂಟಿಗೆ ಹೋಗಿವೆ. ಅಷ್ಟೇ ಅಲ್ಲ, ಲಾಭ ಕೂಡ ಆಗಿದೆ. ಅಷ್ಟೇ ಅಲ್ಲ, ಬಲ್ಬ್ ತಯಾರು ಮಾಡತಕ್ಕಂಥ ಸಣ್ಣ ಪುಟ್ಟ ಕೈಗಾರಿಕೆಗಳು ಏನಿವೆ, ಆ ಸಣ್ಣ ಕೈಗಾರಿಕೆಗಳಿಗೆ ಇದು ಅಂಬ್ರೆಲ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಇದರಿಂದ ಎಂಪ್ಲಾಯಮೆಂಟ್ ಪೊಟೆನ್‌ಷಿಯಲ್ ಕೂಡ ಜಾಸ್ತಿಯಾಯಿತು. ಸಣ್ಣ ಕೈಗಾರಿಕೆಗಳ ಯುಟಿಲೈಸೇಷನಗೆಕೂಡ ಅವಕಾಶವಾಯಿತು. ಇದು ಒಂದು ಮಾದರಿಯಾದಂಥ ರೀತಿಯಲ್ಲಿ ಇವತ್ತಿನದಿವಸ ಕೆಲಸಮಾಡುತ್ತಿದೆ. ಅದುದರಿಂದ ಇದು ಯಾವ ರೀತಿ ಮಾದರಿಯಾದಂಥ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಬೇರೆ ನಮ್ಮ ಕಾರ್ಖಾನೆಗಳಿಗೂ ಕೂಡ ತಿಳಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೀಡಿಯಂ ಮತ್ತು ಲಾರ್ಜ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಉತ್ತರವಾಗಿ ೧-೪-೮೯ರವರೆಗೆ ೫೬ ಕಂಪನಿಗಳು ಇವೆ ಎಂದು ಹೇಳಿದ್ದೀರಿ, ಇವುಗಳಲ್ಲಿ ಹೂಡಿರತಕ್ಕ ಬಂಡವಾಳ ೨೦ ಸಾವಿರದ ೭೪೧ ಲಕ್ಷ ರೂಪಾಯಿಗಳು ; ಟೋಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು ಎಂದರೆ ೨೨ ಸಾವಿರದ ೫೪ ಲಕ್ಷ ರೂಪಾಯಿಗಳು. ಉದ್ದಿಮೆಗಳನ್ನು ಕೆಲವರು ಏತಕ್ಕೆ ಸ್ಥಾಪನೆ ಮಾಡುತ್ತಾರೆಂದರೆ ಸರ್ಕಾರದಿಂದ ಬರತಕ್ಕ ಡೆವಲಪ್‌ಮೆಂಟ್ ಸಬ್ಸಿಡಿ ಏನಿದೆ ಮತ್ತೊಂದು ಏನೇನು ಸೌಲಭ್ಯಗಳು ಇವೆ ಅವುಗಳೆಲ್ಲವನ್ನು ಪಡೆದುಕೊಂಡು ಮನೆಯಲ್ಲಿ ಕುಳಿತುಕೊಳ್ಳುವುದಕ್ಕೋಸ್ಕರ. ಇವರಲ್ಲಿ ಅವರ ಸ್ವಂತ ಬಂಡವಾಳ ಏನೂ ಇರುವುದಿಲ್ಲ. ಎಲ್ಲಾ ಕೆ.ಎಸ್.ಎಫ್.ಸಿ. ಬ್ಯಾಂಕುಗಳು. ಹಾಗೂ ಐ.ಡಿ.ಬಿ.ಐನಿಂದ ತೆಗೆದುಕೊಳ್ಳತಕ್ಕ ಸಾಲಗಳು. ಈ ರೀತಿ ಯಾರು ಮಾಡಲು ಹೊರಟ್ಟಿದ್ದಾರೆ ಅಂತಹವರಿಗೆ ಕಡಿವಾಣ ಹಾಕುವುದು ಅವಶ್ಯಕವಾಗಿದೆ. ಇದನ್ನು ತಾವು ತ್ವರಿತವಾಗಿ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ರೇಷ್ಮೆ ವಿಚಾರದಲ್ಲಿ ನಾನು ಮಾತನಾಡದಿದ್ದರೆ ನಾನು ಹುಟ್ಟಿದ್ದು ಕೂಡ ಸಾರ್ಥಕವಾಗುವುದಿಲ್ಲ. ಆದ್ದರಿಂದ ರೇಷ್ಮೆ ಬಗ್ಗೆ ನಾನು ವಿಸ್ತಾರವಾಗಿ ಮಾತನಾಡಬಲ್ಲೆ, ಆದರೆ ಮಾತನಾಡಲು ಹೋಗುವುದಿಲ್ಲ. ನಾನು ಇಲ್ಲಿ ಇಷ್ಟು ಮಾತ್ರ ಸೂಚನೆ ಕೊಡಬಲ್ಲೆ. ಇವತ್ತು ಮೊಟ್ಟೆ ಎಂಬುದು ರೇಷ್ಮೆ ಕೈಗಾರಿಕೆಯಲ್ಲಿ ಅತಿ ಮುಖ್ಯವಾದುದು ಈ ಉದ್ಯಮದಲ್ಲಿ ಕೇವಲ ಮೂರು ಅಂಶಗಳು ಬಹಳ ಮುಖ್ಯವಾದುದು ಮೊಟ್ಟೆಗೆ ರೋಗ ಇಲ್ಲದೆ ಇರತಕ್ಕದ್ದು ; ಅದರೆ ರೋಗ ಇಲ್ಲದಂತಹ ಮೊಟ್ಟೆಯನ್ನು ಕೊಡತಕ್ಕದ್ದು ಮತ್ತೊಂದು ಸೊಪ್ಪು ಕಡ್ಡಿ; ಈ ಸೊಪ್ಪಿನ ಉತ್ತಮ ತಳಿಯನ್ನು ರೈತರಿಗೆ ಕೊಡಬೇಕು. ಇವತ್ತು ಹೊಸಹೊಸ ತಳಿ ಬರುತ್ತಿದೆ. ನಮ್ಮ ಜಿಲ್ಲೆಯಲ್ಲೂ ಕೂಡ ಶೇಕಡ ೬೦ ರಿಂದ ೭೦ ರಷ್ಟು ಭಾಗ ನಾವು ಕೊಡುವ ಸೊಪ್ಪು ಟಿಪ್ಪುಸುಲ್ತಾನ್ ಕಾಲದ್ದು ಈ ಹಳೆಯ ಕಾಲದ ಸೊಪ್ಪನ್ನೇ ನಾವು ಉಪಯೋಗಿಸುತ್ತಿದ್ದೇವೆ. ಈ ತಳಿಯನ್ನು ಬದಲಾವಣೆ ಮಾಡತಕ್ಕ ಪ್ರಯತ್ನ ಎಷ್ಟು ತೀವ್ರವಾಗಿ ನಡೆಯಬೇಕೋ ಅಷ್ಟು ತೀವ್ರವಾಗಿ ನಡೆಯುತ್ತಿಲ್ಲ. ಈ ಸೊಪ್ಪು ಬೆಳೆಸುವುದರಲ್ಲಿ ಈಗ ಹೊಸ ಹೊಸ ವಿಧಾನ ಬಂದಿದೆ. ಸಾಲಿನಲ್ಲಿ ಕಡ್ಡಿಗಳನ್ನು ನೆಡುವುದು, ಕಡಿಯನ್ನು ನಾಟ ಮಾಡತಕ್ಕದ್ದು. ಮತ್ತು ಉತ್ತಮ ತಳಿಯನ್ನು ಕೊಡತಕ್ಕಂಥಹ ಕೆಲಸ ನಡೆಯುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮೊನ್ನೆ ಒಂದು ಗಮನಸೆಳೆಯುವ ಸೂಚನೆಯ ಉತ್ತರ ಕೊಡುತ್ತಾ ಹೇಳಿದರು. ಈ ಸಿಡ್ ಏರಿಯಾದಲ್ಲಿ ಇನತಕ್ಕ ಇನ್‌ಫ್ರಾಸ್ಟ್ರಕ್ಚರ್ ಏನಿದೆ, ಅಂದರೆ ಮೊಟ್ಟೆಗೆ ಅತಿಮುಖ್ಯವಾದುದು ಅಲ್ಲಿ ಸಾಕಷ್ಟು ಇಲ್ಲ. ಮಳೆ ಬಂದರೆ ಸೊಪ್ಪು ಬೆಳೆಯುತ್ತಾರೆ. ಇಲ್ಲದಿದ್ದರೆ ಇಲ್ಲ. ಇದರಿಂದ ಏನಾಗುತ್ತದೆ ಅಂದರೆ ಇವತ್ತು ೩೦೦ ರೂಪಾಯಿವರೆಗೂ ೧೦೦ ರೇಷ್ಮೆ ಮೊಟ್ಟೆ ಮಾರಾಟವಾಗುತ್ತದೆ. ಇಲ್ಲಿ ತಯಾರಾದಂತಹ ಮೊಟ್ಟೆಗಳು ನಮ್ಮ ಸರ್ಕಾರದ ಗ್ರ್ಯಾನೇಜ್‌ಗಳಿಂದ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ಯಾರದ್ದೋ ಹೆಸರನ್ನು ಅಂದರೆ ಯಾವರ ರೈತರ ಹೆಸರನ್ನೂ ಬರೆದುಕೊಂಡು ಇವುಗಳನ್ನು ಬೇರೆ ರಾಜ್ಯಗಳಿಗೆ ಕಳುಹಿಸುತ್ತಿದ್ದಾರೆ. ಇದರ ಬಗ್ಗೆ ತಾವು ತನಿಖೆ ಮಾಡಿಸಬೇಕು. ಉತ್ತಮ ಮೊಟ್ಟೆಗಳು ನಮ್ಮ ರೈತರಿಗೆ ಸಿಗುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದರೆ ಅವರು ಹಾಕಿವಂತಹ ಬಂಡವಾಳಕ್ಕೆ ಧಕ್ಕೆಯಾಗುತ್ತದೆ. ಈ ಮೊಟ್ಟೆಗಳ ಕಳ್ಳ ಸಾಗಾಣಿಕೆ ಹೆಚ್ಚಾಗಿದೆ ; ಇದನ್ನು ನಿಲ್ಲಿಸಬೇಕು.

ಇನ್ನು ರೇಷ್ಮೆ ಮಾರುಕಟ್ಟೆ ಒಂದು ನರಕವಾಗಿದೆ. ರೈತರ ಪಾಲಿಗೆ ಅದು ಒಂದು ನರಕವೇ ಎಂದು ಹೇಳಬಹುದು. ರೈತರು ಹಗಲುರಾತ್ರಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಗೂಡಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ. ಅಲ್ಲಿ ಅವರ ವಸ್ತುಗಳಿಗೆ ಬೆಲೆಯೇ ಇಲ್ಲ. ಅಲ್ಲಿ ಯಾವರೀತಿ ಬೆಲೆಕಟ್ಟುತ್ತಾರೆಂದರೆ ಹೊಟ್ಟೆ ಹುರಿದುಹೋಗುತ್ತದೆ. ಮೊದಲು ಘಾಂಚ್ ಪೈಸಾ ಎಂದು ಹೇಳುತ್ತಿದ್ದರು. ಈಗ ದಸ್ ಪೈಸಾ ಆಗಿದೆ. ಏನು ಸ್ವಾಮಿ, ಒಬ್ಬ ರೈತರ ಮರ್ಯಾದೆ ದಸ್ ಪೈಸೆಗೆ ಮಾರ್ಕೆಟ್ಟಿನಲ್ಲಿ ಹರಾಜು ಹಾಕುತ್ತಿದ್ದಾರೆ.

ಆ ಮಾರ್ಕೆಟ್ ವಿಚಾರ ನೆನಸಿಕೊಂಡರೆ, ಮೈನಲ್ಲಿ ಬೆವರು ಬರುತ್ತದೆ. ರೈತರನ್ನು ಈ ಮಾರ್ಕೆಟ್ ನರಕದಿಂದ ತಪ್ಪಿಸಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷಣಿಯವರು.—ನೀವು ಒಂದು ಗಂಟೆಗಿಂತ ಜಾಸ್ತಿ ಮಾತನಾಡಿದ್ದೀರಿ,

ಶ್ರೀ ಸಿ. ಬೈರೇಗೌಡ.—ನಾನು ಬೆಳೆಗಾರನಾಗಿರುವುದರಿಂದ, ರೇಷ್ಮೆ ಬೆಳೆಯ ಬಗ್ಗೆ ಮೊಟ್ಟೆಯಿಂದ ಹಿಡಿದು ಗೂಡಿನವರೆಗೂ ಮಾತನಾಡಬಲ್ಲೆ. ಇವತ್ತು ಅವರು ಏನು ಹೇಳುತ್ತಾರೆ, ಒಂದು ಕೆ.ಜಿ. ರೇಷ್ಮೆಗೆ ೬೦-೭೦ ರೂಪಾಯಿ ಟ್ಯಾಕ್ಸ್ ಬೀಳುತ್ತದೆ. ಇದರಿಂದ ನಮಗೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತಾರೆ. ರೈತರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕಾಗಿದ್ದರೆ, ತಾವು ರೀಲರ್ಸ್ ಮತ್ತು ವ್ಯಾಪಾರಸ್ಥರು ಸಭೆಯನ್ನು ಕರೆಯಿರಿ. ತಮಗೆ ನೇರವಾಗಿ ಬರದೇ ಇದ್ದರೂ ಅರ್ಥಿಕ ಮಂತ್ರಿಗಳ ಸಹಕಾರ ಪಡೆದು ಈ ಒಂದು ಕೆಲಸವನ್ನು ಮಾಡಬೇಕು ಮತ್ತು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ ಇನ್ನು ಕೆ.ಇ.ಬಿ. ಬಗ್ಗೆ ಹೇಳುವುದಾದರೆ, ಸ್ವಾಮಿ, ನಮ್ಮ ಜಿಲ್ಲೆ ಮತ್ತು ಬೆಂಗಳೂರು ಸುತ್ತಮುತ್ತ ಯಾವ ನದಿಗಳೂ ಇಲ್ಲ. ನಮಗೆ ನೀರು ಬೇಕಾಗಿದ್ದರೆ, ೫೦೦ ಅಡಿ ಆಳಕ್ಕೆ ಹೋಗಬೇಕು. ಇದರ ಕಷ್ಟ ಅಷ್ಟಿಷ್ಟಲ್ಲ. ಇಷ್ಟೆಲ್ಲಾ ಕಷ್ಟಪಟ್ಟು ಬದುಕುವುದಕ್ಕಾಗಿ ಬೆಳೆ ಬೆಳೆಯುತ್ತೇವೆ ಒಂದೊಂದು ತಾಲ್ಲೂಕಿನಲ್ಲಿ ಕಳೆದ ೨-೩ ವರ್ಷಗಳಿಂದ ಸರಾಸರಿ ೫೦೦ ಪಂಪುಸೆಟ್ಟುಗಳಿಗೆ ಪವರ್ ಕೊಟ್ಟಿಲ್ಲ. ಇವರು ಏನಾಗಬೇಕು, ಬೋರ್‌ವೆಲ್ ಮೂರು ತಿಂಗಳಾದ ಮೇಲೆ ಶಿಲ್ಟಪ್ ಆಗುತ್ತದೆ. ನಮಗೆ ಕೆ.ಆರ್.ಎಸ್. ಇಲ್ಲ. ಅಪ್ಪರ್‌ಕೃಷ್ಣ ಇಲ್ಲ. ಭದ್ರಾ ಇಲ್ಲ. ನಮಗೆ ನೀರು ಬೇಕಾದರೆ ಭೂಮಿ ಒಳಗಡೆ ಹೋಗಬೇಕು. ನೀರಿನ ಸೌಕರ್ಯದಿಂದ ವಂಚಿತರಾಗಿರತಕ್ಕ ಜಿಲ್ಲೆಗಳಿಗೆ ತಾವೇನೂ ಪ್ರಿಯಾರಿಟೀಸ್ ಲಿಸ್ಟ್ ಇಟ್ಟುಕೊಂಡಿದ್ದೀರಿ, ಅದನ್ನು

ಬಿಸಾಕಿ. ಈ ಜಿಲ್ಲೆಗಳಿಗೆ ಅರ್ಧ ರಾತ್ರಿಯಲ್ಲಿ ಪವರ್ ಕೇಳಿದರೂ ತಾವು ಕೊಡಬೇಕೆಂದು ಹೇಳುತ್ತೇನೆ. ಇನ್ನು ವಿದ್ಯುತ್ ಬಹಳ ಪೋಲಾಗುತ್ತಿದೆ. ಕದಿಯುವವರು ಜಾಸ್ತಿಯಾಗುತ್ತಿದ್ದಾರೆ. ತಾವು ಮೀಟರ್‌ಗಳನ್ನು ಮನೆಗೊಳಗೆ, ಅಥವಾ ಕಾರ್ಖಾನೆಗಳ ಪ್ರೆಮಿಸೆಸ್‌ಗಳಲ್ಲಿ ಹಾಕುತ್ತೀರಿ. ಅಲ್ಲಿ ನಿಮ್ಮ ಅಧಿಕಾರಿಗಳು, ಲೈನ್‌ಮ್ಯಾನ್‌ಗಳೇ ಟ್ಯಾಂಪರ್ ಮಾಡತಕ್ಕ ಸಾಕಷ್ಟು ಪ್ರಸಂಗಗಳು ಇವೆ. ಇದನ್ನು ತಪ್ಪಿಸಬೇಕಾದರೆ, ಮೀಟರುಗಳನ್ನು ಪೋಲ್ ಮೇಲೆ ಮಾತ್ರ ಹಾಕಬೇಕು. ಇಲ್ಲೂ ಕೂಡ ಹಾಕಿ, ಎರಡೂ ಕಡೆ ಮೀಟರ್ ವ್ಯವಸ್ಥೆ ಮಾಡಿದರೆ, ತುಂಬಾ ಅನುಕೂಲವಾಗುತ್ತದೆ. ಪೋಲು ಮೇಲೆ ಮೀಟರ್ ಹಾಕಿದರೆ, ಟ್ಯಾಂಪರ್ ಮಾಡುವುದು ಸುಲಭವಲ್ಲ. ಕಷ್ಟ ಇದೆ. ಪ್ರೆಮಿಸೆಸ್ ಒಳಗೆ ಇರತಕ್ಕ ಮೀಟರುಗಳನ್ನು ಟ್ಯಾಂಪರ್ ಮಾಡುವುದು ಸುಲಭ. ಆದ್ದರಿಂದ ನಾನು ಹೇಳಿದ ಈ ಒಂದು ಕೆಲಸವನ್ನು ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ತಾವು ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ......

ಉಪಾಧ್ಯಕ್ಷಣಿಯವರು.—ಕೊನೆಯ ಎಂದು ಹೇಳುತ್ತಾ ಅರ್ಧಗಂಟೆ ಹೆಚ್ಚು ಸಮಯ ತೆಗೆದುಕೊಂಡಿದ್ದೀರಿ.

ಶ್ರೀ ಸಿ. ಬೈರೇಗೌಡ.—ಆಯಿತು, ಪೂರ್ತಿ ಓದುವುದಕ್ಕೆ ಆಗುವುದಿಲ್ಲ, ೧೮ ಜನರಿಂದ ಸುಮಾರು ೨೬೪,೧೧.೪೩,೫೫೭ ರೂಪಾಯಿ ಬಾಕಿ ಇದೆ ಎಂದು ಹೇಳಿದ್ದೀರಿ. ಯಾವ ಮುಲಾಜಿಗೋಸ್ಕರ ಇಷ್ಟು ಹಣ ಬಿಟ್ಟಿದ್ದೀರಿ. ಏತಕ್ಕೋಸ್ಕರ ವಸೂಲು ಮಾಡಿಲ್ಲ ಎನ್ನುವ ಬಗ್ಗೆ ವಿವರವನ್ನು ಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

೫-೧೫ ಪಿ. ಎಂ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಈಗ ಇಲ್ಲಿ ಏನಾಗಿದೆ ಅಂದರೆ, ಇಲ್ಲಿ ವಿರೋಧಪಕ್ಷದ ನಾಯಕರು ಮಾತನಾಡುವುದು. ಆಮೇಲೆ ಉಪನಾಯಕರು ಮಾತನಾಡುವುದು ಆಗುತ್ತಿದೆ. ನಮ್ಮಲ್ಲಿ ಬಂದಂಥ ಹೊಸ ಸದಸ್ಯರಿಗೆ ನಾವು ಅವಕಾಶ ಮಾಡಿಕೊಡದೇ ಹೋದರೆ ನಾವು ಇಲ್ಲಿ ಕುಳಿತು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ, ತಾವು ದಯಮಾಡಿ ನಮ್ಮ ಕಡೆಯ ಸದಸ್ಯರಿಗೂ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೆ, ಅವರು ಪಟ್ಟಿ ಕೊಟ್ಟಿರುತ್ತಾರೆ. ಆದರೆ ಅವರು ಇಲ್ಲಿ ಇರುವುದಿಲ್ಲ.

(ಗೊಂದಲ)

ಶ್ರೀ ಸಿ. ಎಂ. ಲಿಂಗಪ್ಪ.—ಅಧ್ಯಕ್ಷರೆ, ನಾವು ಬಹಳ ಹೊತ್ತಿನಿಂದಲೂ ಮಾತನಾಡಬೇಕೆಂದು ಕಾದಿದ್ದೇವೆ, ನಮಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕಲಿಲ್ಲ ಅಂದರೆ ಇದರ ಬಗ್ಗೆ ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷಿಣಿಯವರೆ, ನಿನ್ನೆಯಿಂದ ಮಾನ್ಯ ಸದಸ್ಯರು......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈಗ ಹೊಸದಾಗಿ ಬಂದಿರತಕ್ಕ ಮಾನ್ಯ ಸದಸ್ಯರು ಮಾತನಾಡಬೇಕೆಂದಿದ್ದಾರೆ. ಆದ್ದರಿಂದ, ಅವರುಗಳಿಗೆ ಐದೈದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟು ಬಿಡಿ......

(ಗೊಂದಲ)

ಉಪಾಧ್ಯಕ್ಷರು.—ಈಗ ನಿನ್ನೆಯಿಂದ ೬ ಗಂಟೆಯ ಹೊತ್ತು ಚರ್ಚೆ ನಡೆದಿದೆ. ಇದರಲ್ಲಿ ಸಾಧಾರಣವಾಗಿ ಹೆಸರು ಕೊಟ್ಟಂಥ ಎಲ್ಲರಿಗೂ ನಾವು ಇಲ್ಲಿ ಅವಕಾಶವನ್ನು ಕೊಟ್ಟಿದ್ದೇವೆ. ಅಂದರೆ ಜನತಾದಳದವರಿಗೆ ೧೦೫ ನಿಮಿಷ ಕೊಟ್ಟಿದೆ. ಕಾಂಗ್ರೆಸ್(ಐ) ನವರಿಗೆ ೧೩೫ ನಿಮಿಷ ಕೊಟ್ಟಿದೆ. ಮತ್ತು ಇಂಡಿಪೆಂಡೆಂಟ್ಸ್ ೫೫ ನಿಮಿಷ ಕೊಟ್ಟಿದೆ. ಇನ್ನು ಕೆಲವಾರು ಸದಸ್ಯರಿಗೆ ೨೦ ನಿಮಿಷ ೩೦ ನಿಮಿಷ ಕೊಟ್ಟುಕೊಂಡು ಬಂದಿದ್ದೇವೆ. ಅಸೋಸಿಯೇಟ್ಸ್ ಮೆಂಬರ್ಸ್‌ಗೆಲ್ಲಾ ಸಮಯ ಕೊಟ್ಟಿದ್ದೇವೆ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ಒಂದು ನಿರ್ಧಾರದ ಪ್ರಕಾರ ಈ ದಿವಸ ನಾಲ್ಕು ಗಂಟೆಗೆ ಈ ಚರ್ಚೆ ಮುಗಿಯಬೇಕಾಗಿತ್ತು. ಆದರೆ ಈಗ ನನಗೆ ಇಲ್ಲಿ ಇರುವ ತೊಂದರೆ ಏನು ಅಂದರೆ, ಅವರು ನಾವು ಇಷ್ಟು ಹೊತ್ತಿನಲ್ಲಿ ಮುಗಿಸುತ್ತೇವೆಂದು ಹೇಳುತ್ತಾರೆ. ತಾವು ಐದು ನಿಮಿಷ ಎಂದು ತೆಗೆದುಕೊಂಡು, ಅರ್ಧ ಗಂಟೆ ಆದರೂ ಮುಗಿಸುವುದಿಲ್ಲ, ಅಂದರೆ ನಾನು ಏನೂ ಮಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಶಂಕರ ರೆಡ್ಡಿ.—ಅಧ್ಯಕ್ಷರೆ, ಇದೇ ರೀತಿ ನಡೆದುಕೊಂಡು ಹೋದರೆ ಹೇಗೆ. ಇಲ್ಲಿ ನಾವು ಬಂದಿರುವುದಾದರೂ ಏತಕ್ಕೆ ?

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಶಿವರಾಮೇಗೌಡರೇ, ತಾವು ೫೫ ನಿಮಿಷ ಮಾತನಾಡಿದ್ದೀರಿ ; ತಾವು ಕುಳಿತುಕೊಳ್ಳಬೇಕು. ತಾವು ಕಡಿಮೆ ಸಮಯ ತೆಗೆದುಕೊಂಡು ಮಾತನಾಡಿದ್ದಾರೆ ಇವರೆಲ್ಲರಿಗೂ ಅವಕಾಶ ಸಿಕ್ಕುತ್ತಿತ್ತು.

(ಗೊಂದಲ)

ಶ್ರೀ ಸಿ. ಎಂ. ಲಿಂಗಪ್ಪ.—ಅಧ್ಯಕ್ಷರೆ, ನಾನು ಮಾತನಾಡಬೇಕಾಗಿದೆ.

(ಗೊಂದಲ)

ಉಪಾಧ್ಯಕ್ಷರು.—ಈಗ ಎಲ್ಲರೂ ಒಪ್ಪುವುದಾದರೆ ಇನ್ನೂ ಅರ್ಧ ಗಂಟೆ ಕಾಲ ಚರ್ಚೆ ಮುಂದುವರೆಸುತ್ತೇನೆ.

ಮಾನ್ಯ ಸದಸ್ಯರುಗಳು.—ಆಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಹೊಸಬರು ಮಾತನಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷರು.—ಎಲ್ಲಾ ಸದಸ್ಯರು ಐದೈದು ನಿಮಿಷ ಮಾತನಾಡಿ ಮುಗಿಸಿದರೆ ಎಲ್ಲರಿಗೂ ಅವಕಾಶ ಸಿಕ್ಕುತ್ತದೆ. ಈಗ ಸಿ.ಎಂ. ಲಿಂಗಪ್ಪನವರು ಮಾತನಾಡಬಹುದು.

† ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ).—ಮಾನ್ಯ ಉಪಾಧ್ಯಕ್ಷಣಿಯವರೇ. ರೇಷ್ಮೆ ವಹಿವಾಟು ಹೆಚ್ಚು ಇರತಕ್ಕಂತಹ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂತಹ ನಾನು ರೇಷ್ಮೆ ಇಲಾಖೆಯಲ್ಲಿ ಆಗಬೇಕಾಗಿರುವ ಸುಧಾರಣೆಗಳ ಬಗ್ಗೆ ನೂತನವಾಗಿ ಬಂದಿರತಕ್ಕಂತಹ ರೇಷ್ಮೆ ರಾಜ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಉದ್ದವಾದಂತಹ ಭಾಷಣ ಮಾಡುವುದಕ್ಕೆ ಬದಲಾಗಿ ಪಾಯಿಂಟ್ ರೂಪದಲ್ಲಿ ವಿಷಯಗಳನ್ನು ಹೇಳುತ್ತೇನೆ. ಈಗ ಏನು ಳ ಬೈವೋಲ್ಟೀನ್ ವೆರೈಟಿ ತಳಿಯನ್ನು ಜಾರಿಯಲ್ಲಿಟ್ಟಿದ್ದೀರಿ, ಇದು ಎಲ್ಲಾ ಋತುಮಾನಗಳಿಗೂ ಹೊಂದಿಕೊಳ್ಳತಕ್ಕಂತಹ ತಳಿ ಅಲ್ಲ. ನೀವು ಜಪಾನ್ ದೇಶದಿಂದ ಇನ್ನೂ ಕೆಲವಾರು ತಳಿಗಳನ್ನು ಆಮದು ಮಾಡಿಕೊಂಡು ಕರ್ನಾಟಕದಲ್ಲಿ ಎಲ್ಲಾ ಋತುಮಾನಗಳಿಗೆ ಹೊಂದಿಕೆಯಾಗತಕ್ಕಂತಹ ಹೊಸ ಹೊಸ ತಳಿಗಳನ್ನು ಹಂಚಿಕೆ ಮಾಡಬೇಕು. ಸಾಮಾನ್ಯವಾಗಿ ವರ್ಷದ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಮೊಟ್ಟೆಗೆ ತುಂಬಾ ಅಭಾವ ಇದೆ. ಎಷ್ಟೋ ಸಾರಿ ಇದು ಒಂದು ಕಳ್ಳಸಂತೆ ವ್ಯಾಪಾರವಾಗಿ ಹೊರ ರಾಜ್ಯಗಳಿಗೆ ಇಲ್ಲಿಂದ ಮೊಟ್ಟೆ ಹೋಗುತ್ತದೆ. ಇಲ್ಲಿರತಕ್ಕಂತಹ ರೇಷ್ಮೆ ವ್ಯವಸಾಯಗಾರನಿಗೆ ಮೊಟ್ಟೆ ಸಿಗುವುದಿಲ್ಲ. ಇದನ್ನು ತಡೆಗಟ್ಟಬೇಕಾಗುತ್ತದೆ. ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ರೇಷ್ಮೆ ಮೊಟ್ಟೆಗೆ ಅಭಾವ ಬಾರದೇ ಇರುವ ರೀತಿಯಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹುಳ ಸಾಕಾಣಿಕೆದಾರರಿಗೆ ಆಗುತ್ತಿರತಕ್ಕಂತಹ ದೊಡ್ಡ ತೊಂದರೆ ಏನೆಂದರೆ ಅವರಿಗೆ ತಕ್ಕ ಮನೆ ಬೇಕಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕ್‌ಗಳು, ಪಿಎಲ್‌ಡಿ ಬ್ಯಾಂಕ್‌ನ ಮೂಲಕ ಆರ್ಥಿಕವಾಗಿ ಸಾಲದ ರೂಪದಲ್ಲಿ ಸಹಾಯ ಕೊಡುತ್ತಿದ್ದಾರೆ. ಆದರೆ ಇದು ಸಾಲುತ್ತಿಲ್ಲ. ಇದರ

ಬದಲಾಗಿ ಇನ್ನೂ ಕಡಿಮೆ ಬಡ್ಡಿ ವಿಧಿಸುವುದರ ಮೂಲಕ ಸಂಧಾರಿತವಾದಂತ ರೇಷ್ಮೆ ಹುಳ ಸಾಕಾಣಿಕೆಗೆ ಸೂಕ್ತವಾದಂತಹ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ರೈತರಿಗೆ ಅವಕಾಶ ಮಾಡಿಕೊಟ್ಟರೆ ಕೊಟ್ಟಂತಹ ಸಾಲವನ್ನು ಮನ್ನಾ ಮಾಡುವ ಆವಶ್ಯಕತೆ ಇಲ್ಲ. ಆತ ಗೂಡನ್ನು ಬೆಳೆದು ಅದನ್ನು ಮಾರುಕಟ್ಟೆಗೆ ತಂದಾಗ ಆ ಹಣವನ್ನು ಮುರಿದುಕೊಳ್ಳತಕ್ಕಂತಹ ವ್ಯವಸ್ಥೆ ಮಾಡಬೇಕು.

(ಶ್ರೀ ಟಿ. ಬಿ. ಜಯಚಂದ್ರರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರೇಷ್ಮೆ ಬೆಳೆಗಾರರಿಗೆ ಆ ಮೂಲಕ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ಬೈವೋಲ್ಟೀನ್ ತಳಿಯ ಬೆಳೆಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗುತ್ತದೆ. ಇದಕ್ಕೊಂದು ಆಗೊಮ್ಮೆ ಈಗೊಮ್ಮೆ ರೇಷ್ಮೆ ವ್ಯವಸಾಯಗಾರರನ್ನು ವಿದೇಶಕ್ಕೆ ಕಳಿಸುತ್ತಿದ್ದೀರಿ ಆಗ ನಾವು ೧೫ ಸಾವಿರ ಹಾಕುತ್ತೇವೆ. ನೀವು ೧೫ ಸಾವಿರ ಹಾಕಿ ಎಂದು ಹೇಳುತ್ತೀರಿ. ಅದರ ಬದಲು ೧೦ ಜನರನ್ನು ಕಳಿಸುವುದಕ್ಕೆ ಬದಲು ೫ ಜನರನ್ನು ಕಳಿಸಿ, ಪೂರ್ತಿ ವೆಚ್ಚವನ್ನು ಇಲಾಖೆಯಿಂದಲೇ ಭರಿಸಿ. ಜಪಾನ್ ದೇಶಕ್ಕೆ ಕಳಿಸಿ ಇನ್ನೂ ಉತ್ತಮವಾದ ರೇಷ್ಮೆಯನ್ನು ಬೆಳೆಸಲಿಕ್ಕೆ ಬೇಕಾಗುವಂತಹ ಜ್ಞಾನವನ್ನು ಕೊಡಬೇಕು. ಇನ್ನು ಮಾರುಕಟ್ಟೆಗಳನ್ನು ಹೆಚ್ಚು ಮಾಡಬೇಕು. ಈ ಬೆಳೆ ವ್ಯಾಪಿಸುತ್ತಾ ಇರುವುದರಿಂದ ಸಾಧ್ಯವಾದಷ್ಟು ಆಯಾಯ ಜಿಲ್ಲಾ ಕೇಂದ್ರಗಳಲ್ಲಿ ಮಾರುಕಟ್ಟೆ ಸೌಲಭ್ಯ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡಬೇಕು, ರಾಮನಗರದ ಮಾರುಕಟ್ಟೆಯ ಅಂಕಿ ಅಂಶದ ಬಗ್ಗೆ ಹೇಳುವುದಾದರೆ ಇಡೀ ರಾಜ್ಯದಲ್ಲಿ ವಹಿವಾಟು ಆಗತಕ್ಕಂಥಾ ರೇಷ್ಮೆ ೧ ದಿವಸಕ್ಕೆ ೧ ಸಾವಿರ ಕೆ. ಜಿ.ಗಳಾದರೆ, ನಮ್ಮ ರಾಮನಗರದ ಮಾರುಕಟ್ಟೆಯಲ್ಲಿ ೨೫ ಸಾವಿರ ಕೆ.ಜಿ.ಯಿಂದ ಹಿಡಿದು ೫೬ ಸಾವಿರದವರೆಗೆ ವಹಿವಾಟು ನಡೆದಿರತಕ್ಕಂತಹ ದಾಖಲೆಗಳು ಇದೆ. ಅಲ್ಲಿ ಇರತಕ್ಕಂತಹ ಮೂರು ಷೆಡ್‌ಗಳು ಸಾಲುವುದಿಲ್ಲ; ಇನ್ನು ಹೆಚ್ಚುವರಿ ಷೆಡ್ ಆಗಬೇಕು. ನಾನು ಇಲಾಖೆ ಮುಖ್ಯಸ್ಥರನ್ನು ಈ ಬಗ್ಗೆ ಭೇಟಿ ಮಾಡಿದಾಗ, ವಿಶ್ವಬ್ಯಾಂಕ್‌ನವರು ಹೇಳಿದ್ದಾರೆ ಹೆಚ್ಚುವರಿ ಮಾಡುವುದಕ್ಕೆ ಆಗುವುದಿಲ್ಲ, ಬೇರೆ ಕಡೆ ಮಾಡಬೇಕು ಎಂದು ಹೇಳಿ ಪಾಸಿಟೀವ್ ಡಿಸ್–ಇನ್‌ಸೆಂಟೀವ್ ಮೆಷರ್ಸ್ ಎಂದು ಹೇಳಿದರು; ಅದು ನಮಗೆ ಅರ್ಥವಾಗಲಿಲ್ಲ. ರಾಮನಗರದಿಂದ ಒಂದು ಬಸ್ ಮಾಡಿ ಅಲ್ಲಿಂದ ಗೂಡನ್ನು ತೆಗೆದುಕೊಂಡು ಚನ್ನಪಟ್ಟಣಕ್ಕೆ ಹೋಗುವವರನ್ನು ಮತ್ತು ಅಲ್ಲಿಂದ ರಾಮನಗರಕ್ಕೆ ಬರುವವರನ್ನು ಉಚಿತವಾಗಿ ಅದರಲ್ಲಿ ಕರೆದುಕೊಂಡು ಬರುವುದು. ಈ ರೀತಿಯ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು ವಿಶ್ವ ಬ್ಯಾಂಕ್‌ನ ಹಣ ನಮಗೆ ಬೇಕಾಗಿಲ್ಲ. ರಾಮನಗರದ ಮಾರುಕಟ್ಟೆಯಲ್ಲಿ ಒಂದು ವರ್ಷಕ್ಕೆ ಸುಮಾರು ಒಂದೂವರೆ ಕೋಟಿ ಮಾರುಕಟ್ಟೆ ಶುಲ್ಕ ವಸೂಲಾತಿಯಾಗುತ್ತದೆ. ಅದರಲ್ಲಿ ಶೇಕಡಾ ೧೦ ಭಾಗವನ್ನು ತೆಗೆದಿಟ್ಟರೆ ಇನ್ನೊಂದು ಷೆಡ್ ಅನ್ನು ಸೊಗಸಾದ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥನೆ ಸಲ್ಲಿಸುತ್ತಿದ್ದೇನೆ.

ಇನ್ನು ಚಾಕಿ ಹಂತದಲ್ಲಿ ಮೇಲ್ವಿಚಾರಣೆಯನ್ನು ಮಾಡತಕ್ಕ ಸಿಬ್ಬಂದಿ ಯಾರಿದ್ದಾರೆ, ಅವರ ಕೆಲಸ ಖಂಡಿತವಾಗಿಯೂ ಸಾಲದು. ಅವರಿಗೆ ಇರತಕ್ಕ ಚಟುವಟಿಕೆ ಎಂದರೆ, ನನಗೆ ತಿಳಿದಿರುವಂತೆ ಈ ೬–೭ ತಿಂಗಳ ಅನುಭವದಲ್ಲಿ ಮಾರ್ಕೆಟ್, ಎನ್‌ಫೋರ್ಸ್‌ಮೆಂಟ್ ಇಂಥ ಕಡೆ ಒಂದೊಂದು ಜಾಗ ಬೇಕೇ ಹೊರತು ನಿಜವಾಗಿ ಹಳ್ಳಿಗಳಿಗೆ ಹೋಗಿ ಯಾವ ರೈತ ಏನು ಮಾಡುತ್ತಿದ್ದಾನೆ, ಯಾವ ಹಂತದಲ್ಲಿದ್ದಾರೆ, ಹುಳುಗಳು ೧ನೇ ಜ್ವರದಲ್ಲಿವೆಯೋ, ೨ನೇ ಜ್ವರದಲ್ಲಿವೆಯೋ, ಎಂಬುದನ್ನು ನೋಡತಕ್ಕ ವ್ಯವಧಾನ ಅವರಲ್ಲಿಲ್ಲ. ಆದ್ದರಿಂದ ಅವರನ್ನು ತಾವು ಸ್ವಲ್ಪ ಚುರುಕು ಮಾಡಿ ಅವರು ತಮ್ಮ ಕೆಲಸದಲ್ಲಿ ನಿರತರಾಗುವಂತೆ ತಾವು ವ್ಯವಸ್ಥೆ ಮಾಡಬೇಕು.

ಮಾನ್ಯ ಅಧ್ಯಕ್ಷರೆ, ಇನ್ನೂ ತಾಂತ್ರಿಕ ವಿಚಾರಗಳಿಗೆ ಸಂಬಂಧಪಟ್ಟಂತೆ ಬಹಳಷ್ಟು ಮಾತನಾಡಬೇಕಾದ್ದು ಇತ್ತು. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ನಾನು ಸಂದರ್ಭ ಬಂದಾಗ ನೇರವಾಗಿ ನಿಮ್ಮ ಜೊತೆ ಸಂಪರ್ಕ ಮಾಡಿ ಉಳಿದ ವಿಚಾರಗಳನ್ನು ತಿಳಿಸುತ್ತೇನೆ.

ಇನ್ನು ರೇಷ್ಮೆ ಫಿಲೇಚರ್ ಮತ್ತು ಟ್ವಿಸ್ಟಿಂಗ್ ಮಾಡತಕ್ಕವರ ಬಗ್ಗೆ ನಾವು ವಾಸ್ತವ ದೃಷ್ಟಿಯಿಂದ ನೋಡಬೇಕಾಗಿದೆ. ರೇಷ್ಮೆಯನ್ನು ನೋಡಿದ ಕೂಡಲೇ ಈ ರೇಷ್ಮೆ ಉದ್ದಿಮೆಯಲ್ಲಿ ತೊಡಗಿರುವವರೆಲ್ಲರೂ ದೊಡ್ಡ ಶ್ರೀಮಂತರೆನ್ನತಕ್ಕ ಭಾವನೆ ಬರುತ್ತದೆ. ಆದರೆ ಅದು ಸರಿಯಲ್ಲ. ರೇಷ್ಮೆ ಉದ್ಯಮದಲ್ಲಿ ಶ್ರೀಮಂತರಾಗಿರುವವರು ಎಂದರೆ ೨ ವರ್ಗದ ಜನರು. ಅಂದರೆ ರೇಷ್ಮೆಯನ್ನು ಆಮ್ಮೆರಾಗಿ ವ್ಯಾಪಾರ ಮಾಡತಕ್ಕ ದೊಡ್ಡ ದೊಡ್ಡ ವ್ಯಾಪಾರಸ್ಥರು; ಮತ್ತು ರೇಷ್ಮೆ ಬಟ್ಟೆಗಳನ್ನು ವ್ಯಾಪಾರ ಮಾಡತಕ್ಕ ವ್ಯಾಪಾರಿಗಳು. ಇವರಿಬ್ಬರು ಮಾತ್ರ. ಆದರೆ ರೇಷ್ಮೆಯನ್ನು ಬೆಳೆಯುವವರಿಂದ ಹಿಡಿದು ಟ್ವಿಸ್ಟಿಂಗ್ ಮಾಡುವವರು ಫಿಲೇಚರ್ ಮಾಡುವವರು ಯಾರಿದ್ದಾರೆ ಅವರು ಯಾರೂ ಕೂಡ ಶ್ರೀಮಂತರಲ್ಲ; ಅವರಿಗೆ ಆಗುವುದಕ್ಕೆ ಸಾಧ್ಯವೂ ಇಲ್ಲ. ತಮಗೆ ಒಂದು ಉದಾಹರಣೆ

ಯನ್ನು ಕೊಡುತ್ತೇನೆ. ಇತ್ತೀಚೆಗೆ ಸರ್ಕಾರದವರು ತರಂಥ ತೆರಿಗೆಯ ದಿಸೆಯಿಂದ ನಮ್ಮ ರಾಮನಗರ ತಾಲ್ಲೂಕಿನಲ್ಲಿ ರೇಷ್ಮೆ ಟ್ವಿಸ್ಟಿಂಗ ಮಾಡತಕ್ಕವರೊಬ್ಬರ ಮನೆಯ ಬಾಗಿಲಿನಲ್ಲಿ ನಿಮ್ಮ ಇಲಾಖೆಯವರು ೭ ಜೀಪುಗಳನ್ನು ತಂದು ನಿಲ್ಲಿಸಿ ಕೊಂಡರು. ಸ್ವಾಮಿ, ಬ್ರೌನ್ ಶುಗರನ್ನೋ ಹೆರಾಯಿನ್‌ನ್ನೋ ಅಥವಾ ಇನ್ನೊಂದನ್ನೋ ಕಳ್ಳತನದಿಂದ ಮಾರಾಟ ಮಾಡುವವರ ಮನೆಯ ಮುಂದೆ ನಿಲ್ಲಿಸುವಂತೆ ಇವರ ಮನೆಯ ಮುಂದೆಯೂ ನಿಲ್ಲಿಸಿದರು. ನಾನಾದರೂ ಹೇಳುತ್ತೇನೆ. ಅವನಿಗೂ ಮಾನ ಮರ್ಯಾದೆ ಇದೆ. ಅವನು ಕಳ್ಳನೇನೂ ಅಲ್ಲ. ರೇಷ್ಮೆ ವ್ಯಾಪಾರಿ ಖಂಡಿತವಾಗಿ ಕಳ್ಳನೇನು ಅಲ್ಲ. ಅವರು ಮಾಡತಕ್ಕ ವ್ಯಾಪಾರದಲ್ಲಿ ಸ್ವಲ್ಪ ಹೊಟ್ಟೆಗೆ ಲಾಭವನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾನೆ ಅಷ್ಟೆ. ಅವರು ಈಗ ಬಹಳಷ್ಟು ತೊಂದರೆಯಲ್ಲಿದ್ದಾರೆ. ನಾನು ಒಂದು ಅಂಕಿ ಅಂಶವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತಿನ ಗೂಡಿನ ಬೆಲೆ ಸುಮಾರು ೧೨೦ರಿಂದ ೧೪೦ ರೂಪಾಯಿ ಒಂದು ಕೆ.ಜಿ.ಗೆ. ೧೦ ೧/೨ ಕೆ.ಜಿ. ಗೂಡು ಇದ್ದರೆ ೧ ಕೆ.ಜಿ ರೇಷ್ಮೆ ಬರುತ್ತದೆ. ಇಷ್ಟು ರೇಷ್ಮೆಯನ್ನು ಉತ್ಪಾದನೆ ಮಾಡಬೇಕಾದರೆ ಸುಮಾರು ೧೨೦ ರೂಪಾಯಿ ಖರ್ಚು ಬರುತ್ತದೆ. ಅಂದರೆ ೧ಕೆ.ಜಿ. ರೇಷ್ಮೆಯನ್ನು ಉತ್ಪಾದನೆ ಮಾಡಬೇಕಾದರೆ ಸುಮಾರು ೧೪೦೦ ರೂ. ಖರ್ಚು ಬರುತ್ತದೆ. ತಮ್ಮ ಕೆ.ಎಸ್.ಎಂ.ನಲ್ಲಿ ಏನು ಬೆಲೆ ಇದೆ? ಲೈಸೆನ್ಸ್ ಇದ್ದರೆ ನಾವೂ ಕೂಡ ಹೋಗಿ ರೇಷ್ಮೆಯನ್ನು ಕೊಂಡುಕೊಳ್ಳಬಹುದು. ಇವತ್ತು ೧ ಕೆ. ಜಿ. ರೇಷ್ಮೆಯನ್ನು ೯೫೦ ರೂ ಗಳಿಗೆ ಕೊಂಡುಕೊಳ್ಳಬಹುದು. ತಾವೇ ೯೫೦ ರೂ. ಗೆ ೧ ಕೆ. ಜಿ ರೇಷ್ಮೆಯನ್ನು ಮಾರಾಟ ಮಾಡುವುದಾದರೆ ಅದೇ ರೈತ ೧೪೦೦ ರೂಪಾಯಿ ಖರ್ಚು ಮಾಡಿ ೧ ಕೆ. ಜಿ. ರೇಷ್ಮೆಯನ್ನು ಉತ್ಪಾದನೆ ಮಾಡಿ ೪೦೦-೫೦೦ ರೂಪಾಯಿ ನಷ್ಟ ಅನುಭವಿಸಲು ಇಷ್ಟಪಡುವುದಿಲ್ಲ. ಆದ್ದರಿಂದ ನನ್ನ ಒಂದು ಸಲಹೆ ಏನೆಂದರೆ, ತಾವು ತೆರಿಗೆಯನ್ನು ಹಾಕುವುದಾದರೆ ಪ್ರಾರಂಭದ ಹಂತದಲ್ಲೇ ಹಾಕಿ. ರೈತ ಅದನ್ನು ಕೊಡುತ್ತಾನೆ. ಇಲ್ಲದಿದ್ದರೆ ಕೊನೆಯ ಹಂತದಲ್ಲಿ ಅಂದರೆ ರೇಷ್ಮೆ ಬಟ್ಟೆಯನ್ನು ಮಾರಾಟ ಮಾಡತಕ್ಕ ವ್ಯಾಪಾರಿಗಳ ಮೇಲೆ ಹಾಕಿ. ಆದರೆ ಈ ಇಬ್ಬರ ಮಧ್ಯೆ ಇರತಕ್ಕವರ ಮೇಲೆ ತೆರಿಗೆಯನ್ನು ಖಂಡಿತ ಹಾಕುವುದಕ್ಕೆ ಹೋಗಬೇಡಿ. ತಮ್ಮ ಕಾಲದಲ್ಲಿ ಈ ರೇಷ್ಮೆ ಉದ್ದಿಮೆ, ರೇಷ್ಮೆ ಬೆಳೆ, ರೇಷ್ಮೆ ಕಸುಬು ಹೆಚ್ಚು ಫಲಪ್ರದ ಆಗುವಂತೆ ಕೆಲಸ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥಿಸಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI NAZIR AHMED (Binnypet).—Sir, I would like to wel-come the Demand presented by the Hon. Minister for Industries, Wakf and Power. The Hon. Minister is aware that the Wakf Act was enacted in the year 1954 by no less than a person Abul Kalam Azad with a great dream to develop the wakf properties, with an idea to bring about rennaisance in the community, particularly, in the field of Education, Political, Economical and Cultural. However, to-day I can say that his dreams have been shattered.

Even after 36 years of existence of Wakf Board Act, there is no proper development. I have gone through the Annual Report pertaining to Wakf Board. There is not even a single word about the upliftment of the poor muslim students, poor widows, old people in the report. From the report it is seen that there are arrears to the tune of 68 lakhs to the Wakf Board. I request the Hon'ble Minister to kindly talk to the officers concerned, make them responsible, fix the target every month. If they do not rise upto the expectations, if they do not produce the results, hold them responsible. If you make these officers account able and responsible, I hope these arrears can be recovered. The two successful projects namely Hameed Shah Complex in Bangalore and Madar Shah Complex at Tumkur have been completed. There is good income

from these two Complexes. Eventhough there is good income from these Complexes no poor person or a deserving person is given any substantial financial assistance.

I would like to draw the attention of the Hon'ble Minister to the words in the Annual Report, "efforts are being made to develop the Urban Wakf properties" Is it not a pathetic condition that even after 36 years still efforts are being made to develop the Wakf properties in urban cities.

Coming to three-man commission appointed by the previous Government, as we all know, it was a politically motivated decision and they did not go through the problems of the people and they did nothing. Now, you have appointed one man commission. I request that the said one man commission should act judiciously and impartially. Those who are holding excess land, have started registering those lands in the name of Wakf, only to avoid Urban Land Ceiling Act. The Commission should enquire into those cases and the culprits should be brought to book.

Coming to the Wakf Boards Amendment Act, in 1985 itself, Parliament has brought amendment to the Wakf Board Act. Thereafter, some eminent personalities have objected to the amendment. The same has been discussed now and the State Government should impress upon the Central Government to issue the notification and to bring that amended Wakf Board Act so that it will be of great use to the community.

I would like to draw your attention to some instances in the present Wakf Board. There is a Complex constructed in Gowribidanur. Before constructing any such complex, it should be properly announced in the newspapers and tenders should be invited, and then contract should be given. Likewise in the case of Hameed Shah Complex also, same thing happened. You may be surprised to hear that the present Wakf Board have sold Cement at the rate of Rs. 1 bag. I would like to cite one more instance. The Wakf Board has allotted a piece of land to the Karnataka Urdu Teachers Association in the year 1987. Lateron, the same land is allotted to an individual with some vested interest. Likewise, the brother-in-law of the Chairman of the Wakf Board in the Administrator for Hazrath Tippu Sultan Wakf Estate. There also lot of misappropriation has come to light. I would request the Hon'ble Minister to kindly request the Accountant General to audit the accounts of Wakf Board not only at the State level, but also at the district level. I wish to stress that while constituting Wakf Board, we should rise above the Party line and it should not be made a political issue. People who are honest, people with commitment and integrity and those who are experts in the field alone should be made as Chairman of the Wakf Board. Today, the Wakf Board

Chairman and the Members we are having are purely appointed on political consideration. I would request that the present Chairman, keeping in view all the matters of misappropriations which have come to light, should resign voluntarily or in the alternative, the Government should find out the ways and means and if necessary to amend the present Wakf Boards Act, supercede the same and a new Wakf Board should be constituted.

I am thankful to the Hon'ble Minister for Industries and Wakf and in fact I complement him, because he visited my Constituency on my request and also visited the Mysore Chrome Tanning Factory. It is a factory which manufactures shoes and leather instruments. People from Calcutta, Kanpur have come to Bangalore and they have started the industries here. Today they are making huge profits in these industries, whereas the State Undertakings which have exported huge quantities of such goods earlier earned a bad name and reputation in the international market. Today Mysore Chrome Tanning Factory is in a very bad shape. We are talking so much about the welfare of the Scheduled Caste and Scheduled Tribe people. Further. this year we are observing Dr. Baba Saheb Amberkar Centenary. The people who are working in this factory are hundred percent belong to harijan community. The authorities of the factory have today decided to close the factory. They are putting forth the argument that they have 20 acres of land which is prestigeous property within the city limits on the way to Mysore road. They want to sell away the property as they say, they have liabilities. I would like to bring to the notice of the Hon'ble Minister that the same factory was making huge profits but today it is under huge loss. What is the reason ? Who is responsibly for this position ? In a period of only 7 years, the factory is making huge loss. Huge machineries have been imported from foreign countries for this factory and they are kept only as a show-piece. In fact, the Minister has seen these machineries. I would request the Hon'ble Minister to see that some rehabilitation is made particularly for the reason that the employees of this factory belong to Scheduled Caste Scheduled Tribes. There is one more factory KAVIKA which is called Government Electrical Factory. I am told the first slum in Bangalore city was the Bapujinagar slum which was called Government Electric Factory slum. Today misunderstanding between the B.D.A., and KAVIKA has cropped up and in the process, people who are there since 70 to 80 years are not able to live peacefully KAVIKA people say that the property belongs to them and the B.D A., says the property was handed over to them long back. I request the Hon'ble Minister to make a note of this issue and take suitable action.

Speaking about the K.E B., I would like to complement the Minister, for I have learnt that he has issued directions to the

Mysore Lamp Corporation should buy their requirements from S.S.I. Units which manufacture the instruments that they want in and around Bangalore and in other parts of the State. It is a good measure. I want the Hon'ble Minister to fix up the same parameter even in respect of K.E.B., also, that they should buy their requirements from S.S.I. units which are manufacturing KVA pins. So, these S.S.I. units had passed the requisite test, orders were placed by the K.E.B., to a Calcutta firm. I am sure, if the parameter which I suggested is also applied to K.E.B., local entrepreneurs and local people will be benefitted. With these few words, I thank the Chair for having given me this opportunity to speak.

† ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಉದ್ದಿಮೆ ಹಾಗೂ ಎನರ್ಜಿ ಮಂತ್ರಿಗಳು ಮಂಡಿಸಿದಂಥ ಈ ಬಜೆಟನ್ನು ವಿರೋಧಿಸುತ್ತಾ ನನ್ನ ಎರಡು ಸಲಹೆಗಳನ್ನು ಮಾತ್ರ ತಮ್ಮ ಮುಂದೆ ಕೊಡಬಯಸುತ್ತೇನೆ. ಇಲ್ಲಿಯವರೆಗೆ ನನ್ನ ಎಲ್ಲ ಹಿರಿಯ ಸದಸ್ಯರು ಬೇರೆ ಬೇರೆ ವಿಷಯಗಳನ್ನು ಹೇಳಿದ್ದಾರೆ. ನಾನು ಕೇವಲ ಹ್ಯಾಂಡ್‌ಲೂಮ್ ಡೆವಲಪ್ಮೆಂಟ್ ಕಾರ್ಪೋರೇಷನ್ ಹಾಗೂ ಖಾದಿ ಗ್ರಾಮೋದ್ಯೋಗದ ಬಗ್ಗೆ ಮಾತ್ರ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಿಜವಾಗಿಯೂ ಇವತ್ತಿನ ದಿವಸ ನೇಕಾರರಿಗೆ ಹಾಗೂ ಬಡಬಗ್ಗರಿಗೆ ಒಂದು ಉದ್ಯೋಗ ಕೊಡುವಂಥ ಉದ್ಯಮ ಎಂದರೆ ಹ್ಯಾಂಡ್‌ಲೂಮ್ ಡೆವಲಪ್ಮೆಂಟ್ ಕಾರ್ಪೋರೇಷನ್ ಎಂದು ತಮ್ಮ ಮುಂದೆ ಹೇಳುತ್ತಿದ್ದೇನೆ. ಹ್ಯಾಂಡ್‌ಲೂಮ್ ಡೆವಲಪ್ಮೆಂಟ್ ಕಾರ್ಪೋರೇಷನ್ ಬಹಳ ಹಣಕಾಸಿನ ತೊಂದರೆಯಿಂದ ಬಹಳ ತ್ರಾಸದಾಯಕವಾಗಿದ್ದು ಈ ಕಾರ್ಪೋರೇಷನ್ನಿಗೆ ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸಿ ಅವನ್ನು ಬಲಪಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಜನತಾ ಸೀರೆ, ದೋತ್ರಗಳನ್ನು ಹ್ಯಾಂಡ್‌ಲೂಮ್ ಡೆವಲಪ್ಮೆಂಟ್ ಕಾರ್ಪೋರೇಷನ್ ಮೂಲಕ ನೇಕಾರರಿಗೆ ಕೆಲಸ ಕೊಟ್ಟು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಮುಳುಗಡೆ ಪ್ರದೇಶವಾದ ಬೈಲಹೊಂಗಲ, ಸವದತ್ತಿ, ಬೆಳಗಾಂ ಜಿಲ್ಲೆಯಲ್ಲಿ ಈ ಕಾರ್ಪೋರೇಷನ್ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ನಾನು ಸಂತೋಷದಿಂದ ಹೇಳುತ್ತಿದ್ದೇನೆ. ಆದರೆ ಅವರಿಗೆ ಹೆಚ್ಚಿನ ಮಗ್ಗಗಳನ್ನು ಕೇಳಿದರೆ ಹಣಕಾಸಿನ ತೊಂದರೆಯಿಂದ ಆಗುತ್ತಿಲ್ಲವೆಂಬ ಕೂಗು ಕೇಳಿ ಬರುತ್ತಿದೆ. ಆದಕಾರಣ ಈ ಸಂಸ್ಥೆಗೆ ಹೆಚ್ಚಿನ ಹಣಕಾಸಿನ ನೆರವು ನೀಡಬೇಕು. ಡಚ್ ಸ್ಕೀಂನಿಂದ ಇಂಡಸ್ಟ್ರಿಯಲ್ ಷೆಡ್ಸ್ ಮತ್ತು ಮನೆಗಳನ್ನು ಕಟ್ಟಿಕೊಡುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಜನರು ಮಲಪ್ರಭ ಯೋಜನೆಯಲ್ಲಿ ಮುಳುಗಡೆಯಾಗಿ ಹೊಲ ಮನೆಗಳನ್ನು ಕಳೆದುಕೊಂಡು ಯಾವುದೇ ಆಶ್ರಯ ಇಲ್ಲದ ಜನರಿದ್ದಾರೆ. ಅಂಥವರಿಗೆ ಮನೆಗಳನ್ನು ಕಟ್ಟಿಕೊಟ್ಟು ಉದ್ಯೋಗ ಒದಗಿಸುವುದರಿಂದ ಬಹಳ ಅನುಕೂಲವಾಗುತ್ತದೆ. ಇವತ್ತಿನ ದಿವಸ ಬೈಲಹೊಂಗಲ ತಾಲ್ಲೂಕು ಪೈಕಿ ಒಕ್ಕುಂದ ಗ್ರಾಮದಲ್ಲಿ ಜಾಗ ಇದೆ. ಬಹಳ ದಿವಸಗಳಿಂದ ಜನರ ಬೇಡಿಕೆ ಇದೆ. ನೇಕಾರರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಮತ್ತು ಇಂಡಸ್ಟ್ರಿಯಲ್ ಷೆಡ್‌ಗಳನ್ನು ಕಟ್ಟಿಸಿಕೊಡುವುದಕ್ಕೆ ಅಲ್ಲಿ ಅವಕಾಶ ಇದೆ. ಆದ್ದರಿಂದ ಇದನ್ನು ಅಲ್ಲಿ ಮಾಡಬೇಕೆಂದು ಕೇಳುತ್ತಿದ್ದೇನೆ. ಎರಡನೆಯದಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಇದು ನಿಜವಾಗಿಯೂ ಬಡಬಗ್ಗರಿಗೆ ಉದ್ಯೋಗ ಕೊಡುವ ಕಾರ್ಯಕ್ರಮ ಎಂದು ಹೇಳಬಹುದು. ಕಳೆದ ಒಂದು ವರ್ಷದಿಂದ ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಗೆ ಛೇರ್ಮನ್ ಕೂಡ ಇರುವುದಿಲ್ಲ. ಛೇರ್ಮನ್ ಮತ್ತು ಡೈರೆಕ್ಟರುಗಳು ನಾನ್-ಅಫಿಷಿಯಲ್ಸ್ ಇದ್ದಾರೆ. ಹೀಗಾಗಿ ಯಾವುದೇ ಒಂದು ಕೆಲಸ ಅಲ್ಲಿ ಚೆನ್ನಾಗಿ ಆಗುತ್ತಿಲ್ಲ. ಹೊಸೂರು ಖಾದಿ ಗ್ರಾಮೋದ್ಯೋಗ, ಉದಲಿ ಗ್ರಾಮೋದ್ಯೋಗ ಹಾಗೂ ತೆಂಗೇರಿ ಖಾದಿ ಗ್ರಾಮೋದ್ಯೋಗದವರು ಒಳ್ಳೆಯ ಬಟ್ಟೆ ತಯಾರು ಮಾಡಿ ಇವತ್ತಿನ ದಿವಸ ಕೊಡುತ್ತಿದ್ದಾರೆ. ಆದರೆ ಅವರು ಕೊಟ್ಟ ನಂತರ ಸರ್ಕಾರದಿಂದ ಬರತಕ್ಕ ಸಬ್ಸಿಡಿ ಹಣ ಯೋಗ್ಯ ವೇಳೆಗೆ ಬರದೇ ಇರುವುದರಿಂದ ಈ ಸಂಸ್ಥೆಗಳು ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ಇವತ್ತಿನ ದಿವಸ ಖಾದಿ ಗ್ರಾಮೋದ್ಯೋಗ ಮಂಡಲಿಗೆ, ಅದು ಹೆಚ್ಚಿನ ಕೆಲಸಗಳನ್ನು ಕೊಡುವ ಸಂಸ್ಥೆಯಾಗಿರುವುದರಿಂದ ಹೆಚ್ಚಿನ ಹಣವನ್ನು ಸರ್ಕಾರದಿಂದ ಕೊಡಬೇಕು. ಅವರಿಗೆ ಯೋಗ್ಯ ವೇಳೆಯಲ್ಲಿ ಸಬ್ಸಿಡಿ ಕೊಡುವುದು ಆಗಬೇಕು. ಇದುವರೆಗೂ ಈ ಸಂಸ್ಥೆಗೆ ಛೇರ್ಮನ್ ಮತ್ತು ಬೋರ್ಡ್ ಆಫ್ ಡೈರೆಕ್ಟರ್ಸ್ ನೇಮಕ ಮಾಡಿರುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಅದೇ ಉದ್ಯೋಗದಲ್ಲಿ ನುರಿತಂಥ ಜನರನ್ನು ಡೈರೆಕ್ಟರ್ ಮಂಡಲಿಗೆ ನೇಮಿಸಬೇಕೆಂದು ತಮ್ಮ ಮೂಲಕ ಹೇಳುತ್ತಾ ಈ ಎರಡೂ ಸಂಸ್ಥೆಗಳನ್ನು

ಹೆಚ್ಚಿಗೆ ಬೆಳೆಸುವುದಕ್ಕೆ ಸರ್ಕಾರ ಎಲ್ಲ ರೀತಿಯ ಸಹಾಯ ಮಾಡಬೇಕೆಂದು ಹೇಳಿ ತಾವು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಭಾಧ್ಯಕ್ಷರೆ, ಈ ದಿವಸ ರೇಷ್ಮೆ ಇಲಾಖೆ, ವಿದ್ಯುಚ್ಛಕ್ತಿ ಇಲಾಖೆ ಮತ್ತು ಕೈಗಾರಿಕೆ ಖಾತೆಗಳ ಬೇಡಿಕೆಗಳಿಗೆ ಬೆಂಬಲ ಕೊಟ್ಟು ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ರೇಷ್ಮೆ ಉದ್ಯಮ ಕರ್ನಾಟಕದಲ್ಲಿ ಬಹಳ ಪ್ರಸಿದ್ಧವಾದ ಒಂದು ಉದ್ಯಮ. ಇದು ರೈತಾಪಿ ಜನರು ಮತ್ತು ಹಳ್ಳಿಗಳಲ್ಲಿ ನಿರುದ್ಯೋಗಿಗಳು ಮಾಡುವ ಉದ್ಯಮ. ಈ ಉದ್ಯಮ ಇಡೀ ಭಾರತ ದೇಶದಲ್ಲೇ ಅಲ್ಲ ಪ್ರಪಂಚದಲ್ಲೇ ಒಳ್ಳೆಯ ಹೆಸರುವಾಸಿಯಾಗಿದೆ. ಕರ್ನಾಟಕ ರೇಷ್ಮೆ ಎಂದರೆ ಬಹಳ ಹೆಸರುವಾಸಿ. ನಮ್ಮಲ್ಲಿ ಗಂಧದ ಮರಗಳು ಪತ್ತೆ ಇಲ್ಲ. ವೀರಪ್ಪನ್ ಲಾರಿ ಲೋಡ್‌ನಲ್ಲಿ ತೆಗೆದುಕೊಂಡು ಹೋಗಿಬಿಟ್ಟಿದ್ದಾನೆ. ಆದರೆ ಈ ರೇಷ್ಮೆ ಉದ್ಯಮ ಏನಾಗಿದೆ ಎಂದರೆ, ಸರ್ಕಾರದ ಅಂಕಿಅಂಶದ ಪ್ರಕಾರ ೧೯೮೦ ರಲ್ಲಿ ೮೫,೨೫೦ ಕೈಮಗ್ಗಗಳು ಇದ್ದರೆ ಅವು ೧೯೮೫ಕ್ಕೆ ೭೭,೨೫೦ಕ್ಕೆ ಇಳಿದಿವೆ. ಹೆಚ್ಚು ಕಡಿಮೆ ೦೧,೫೦೦ ಕೈಮಗ್ಗಗಳು ಮುಚ್ಚಿಕೊಂಡು ಬಾಗಿಲು ಹಾಕಿಕೊಂಡು ಹೋಗುತ್ತಿದ್ದಾರೆ. ಇವತ್ತು ನಮ್ಮ ದೇಶದಲ್ಲಿ ರೇಷ್ಮೆ ಕೃಷಿಗೆ ಏನು ಬಂದಿದೆ ಎಂಬುದನ್ನು ಚಿಂತನೆ ಮಾಡಬೇಕಾಗಿದೆ. ರೇಷ್ಮೆ ಕೃಷಿಗೆ ವಿಶ್ವಬ್ಯಾಂಕಿನವರು ಡಚ್ ಪ್ರಾಜೆಕ್ಟಿನವರು ಸಾಲ ಕೊಟ್ಟಿದ್ದಾರೆ, ಸುಮಾರು ೫೦೦ ರಿಂದ ೮೦೦ ಕೋಟಿ ರೂ. ಸಾಲ ಸಿಕ್ಕಿದೆ. ನಮ್ಮ ಸರ್ಕಾರ ರೇಷ್ಮೆ ಉದ್ಯಮಕ್ಕೆ ಕೈಹಾಕಿದಂದಿನಿಂದ ತಾಪತ್ರಯ ಜಾಸ್ತಿಯಾಗಿದೆ. ನೇಕಾರರಾಗಲೀ ರೈತರಾಗಲೀ, ರೀಲರ್ಸ್ ಆಗಲೀ, ವ್ಯಾಪಾರಸ್ಥರಾಗಲಿ ಯಾರೂ ಕೂಡಾ ಇದರಿಂದ ಸಂತೋಷಪಟ್ಟಿಲ್ಲ. ಸರ್ಕಾರ ಪ್ರತಿಯೊಂದಕ್ಕೂ ಕೈ ಹಾಕುತ್ತಿದೆ. ಇವತ್ತು ಸುಮಾರು ೬೧ ಸಾರ್ವಜನಿಕ ಉದ್ದಿಮೆಗಳಿಗೆ ಸರ್ಕಾರ ಕೈ ಹಾಕಿ ಅದರಲ್ಲಿ ಸುಮಾರು ೪೦ ಉದ್ಯಮಗಳಿಂದ ವರ್ಷಕ್ಕೆ ೨೦೦ ಕೋಟಿ ರೂಪಾಯಿ ಕಳೆದುಕೊಳ್ಳುತ್ತಿದ್ದೇವೆ. ಈ ರೇಷ್ಮೆ ಉದ್ಯಮ ರೈತರಿಗೆ ಸೇರಿದ್ದು. ಇವತ್ತು ಈ ಉದ್ಯಮದಿಂದ ರೈತರು ಸಾಹುಕಾರರಾಗಿಲ್ಲ. ಸಿ.ಎಂ. ರಂಗಪ್ಪನವರು ಹೇಳಿದಹಾಗೆ, ಬೆಂಗಳೂರು ಪೇಟೆಯಲ್ಲಿ ಯಾರು ಯಾರು ದೊಡ್ಡ ದೊಡ್ಡ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ, ಹಾಗೇ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಯಾರು ಅಂಗಡಿ ಇಟ್ಟುಕೊಂಡಿದ್ದಾರೆ, ಶೋರೂಮ್‌ಗಳನ್ನು ಇಟ್ಟುಕೊಂಡಿದ್ದಾರೆ, ಅವರು ಮಾತ್ರ ಶ್ರೀಮಂತರಾಗಿದ್ದಾರೆ. ಇಲ್ಲವೇ ಕೇವಲ ಕೆಲವು ಸಿಲ್ಕ್ ಕೋಟಿ ಇಟ್ಟುಕೊಂಡು [illegible] ವ್ಯಾಪಾರ ಮಾಡುತ್ತಿರುವವರು ಸಾಹುಕಾರರಿರಬಹುದು. ಈ ಉದ್ಯಮದಲ್ಲಿ ೬ ಲಕ್ಷ ಕುಟುಂಬಗಳು ತೊಡಗಿದ್ದು ಒಂದು ಕುಟುಂಬದಲ್ಲಿ ೫ ಜನರಿದ್ದರೆ ಅವರೆಲ್ಲರೂ ಈ ಉದ್ಯಮದಲ್ಲಿ ತೊಡಗಿರುತ್ತಾರೆ. ಒಂದು ಮನೆಯಲ್ಲಿ ಒಂದು ಸಣ್ಣ ಕೈಮಗ್ಗ ಇದ್ದರೆ, ಆ ಕೈಮಗ್ಗ ಇರುವ ಹಾಲೇ ಅಡಿಗೆ ಮನೆ, ಊಟದ ಮನೆ ಎಲ್ಲಾ ಆಗಿರುತ್ತದೆ. ಆತ ಹಗಲೂ ರಾತ್ರಿ ಲಟಾಪಟಾ ಲಟಾಪಟಾ ಹೊಡೆದು ಅವನ ಕಿವಿ ಕೆಟ್ಟಿರುತ್ತದೆ. ಅಲ್ಲಿನ ಧೂಳು ಕುಡಿದು ಅವನ ಲಂಗ್ಸ್‌ನಲ್ಲಿ [illegible] ಕಾಯಿಲೆ ಬಂದಿರುತ್ತದೆ. ಈ ಪರಿಸ್ಥಿತಿಯಲ್ಲಿ ಆತ ಮತ್ತು ಆತನ ಸಂಸಾರ ದಿನಕ್ಕೆ ೫೦ ರೂಪಾಯಿ ಸಂಪಾದನೆ ಮಾಡುವುದು ಕಷ್ಟವಾಗಿದೆ. ನೇಕಾರನ ಸ್ಥಿತಿ ಹೀಗಿರುವಾಗ ಮೇಲೆ ನಮ್ಮ ಸರ್ಕಾರ ಟ್ಯಾಕ್ಸ್ ಬೇರೆ ಹಾಕಿದೆ. ಇವತ್ತು ಸಿಲ್ಕ್ ಫಿಲೇಚರ್ ಬಗ್ಗೆ ಹೇಳಬೇಕಾಗುತ್ತದೆ. ಕನಕಪುರ [illegible] ಸಿಲ್ಕ್ ಫಿಲೇಚರ್‌ನಲ್ಲಿ ೧೯೮೮-೮೯ರ ಸಾಲಿನಲ್ಲಿ ೩.೮ ಕೋಟಿ ನಷ್ಟ ಆಗಿದೆ. ಅಕ್ಯುಮಿಲೇಟೆಡ್ ಲಾಸ್ ೨೦.೫ ಕೋಟಿ ರೂ. ಆಗಿದೆ. ಮತ್ತೆ ಇತರೇ ಐದು ಸರ್ಕಾರಿ ಸಿಲ್ಕ್ ಫಿಲೇಚರ್‌ಗಳಲ್ಲಿ ೨೧ ಕೋಟಿ ರೂಪಾಯಿ ಲಾಸ್ ಆಗಿದೆ. ಆದರೆ ಇದರ ಬಗ್ಗೆ ಸರ್ಕಾರಕ್ಕೆ ಏನೋ ಮನಸ್ಸು ಬಂದು ಸೇಲ್ಸ್ ಟ್ಯಾಕ್ಸ್ ಮತ್ತು ಟರ್ನ್ ಓವರ್ ಟ್ಯಾಕ್ಸ್ ಹಾಕಿದೆ. ಈ ಟ್ಯಾಕ್ಸ್‌ಗಳು ನಮ್ಮ ನೆರೆ ಹೊರೆಯ ರಾಜ್ಯಗಳಲ್ಲಿ ಇಲ್ಲ. ತಮಿಳುನಾಡಿನಲ್ಲಿ ಸೇಲ್ಸ್ ಟ್ಯಾಕ್ಸ್ ಇಲ್ಲ. ಆಂಧ್ರಪ್ರದೇಶದಲ್ಲಿ ಮಾತ್ರ ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ಒಂದು ಪರ್ಸೆಂಟ್ ಮಾತ್ರ ತೆಗೆದುಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲಿ ಸಿಲ್ಕ್ ಫ್ಯಾಬ್ರಿಕ್ಸ್ ಮೇಲೆ ೪ ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ನಂತರ ಟರ್ನ್ ಓವರ್ ಟ್ಯಾಕ್ಸ್ ಒಂದು ಒಂದು ಕಾಲು ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಮತ್ತೆ ಇದರ ತೆಗೆದ ಮೇಲೆ ಮತ್ತೆ ಡಬಲ್ ಟ್ಯಾಕ್ಸೇಷನ್. ೨ ಪರ್ಸೆಂಟ್ ಟಿ.ಓ.ಟಿ. ಆದ ಮೇಲೆ ಅದರ ಮೇಲೆ ಒಂದೂ ಕಾಲು ಪರ್ಸೆಂಟ್. ಇವತ್ತು ೧ ಕೆ.ಜಿ. ಸಿಲ್ಕ್ ೮೦೦ ರೂಪಾಯಿಯಾದರೆ ಅದರ ಮೇಲೆ ಟ್ಯಾಕ್ಸ್ ಎಷ್ಟು ಬೀಳುತ್ತದೆಂದು ವಿವರವಾಗಿ ಹೇಳುತ್ತೇನೆ. ಇವತ್ತು ೧ ಕೆ.ಜಿ. ಸಿಲ್ಕ್ ತೆಗೆದುಕೊಂಡರೆ ಕಕೂನ್ ತೆಗೆಯುವವರು ೮ ರೂ. ಸರ್ಕಾರಕ್ಕೆ ಕೊಡುತ್ತಾನೆ, ರೀಲರ್ ಬಂದು ೮ ರೂ. ಕೊಡುತ್ತಾನೆ. ನಂತರ ರಾ ಸಿಲ್ಕ್ ಬೈಯರ್ ೮ ರೂಪಾಯಿ. ಫ್ಯಾಬ್ರಿಕ್‌ನವರು ೩೨ ರೂಪಾಯಿ ಕೊಡುತ್ತಾನೆ. ನಂತರ ಟರ್ನ್ ಓವರ್ ಟ್ಯಾಕ್ಸ್ ೧೪ ರೂಪಾಯಿ. ಕೊಟ್ಟರೆ ಈಗ ಕೊನೆಯಲ್ಲಿ ಹಾಕಿರತಕ್ಕ ಸೇಲ್ಸ್ ಟ್ಯಾಕ್ಸ್ ೧೬ ರೂಪಾಯಿ ಆಗುತ್ತದೆ ಟರ್ನ್ ಓವರ್ ಟ್ಯಾಕ್ಸ್ ೧೪ ರೂಪಾಯಿ ಆಗೇ ಆಗುತ್ತದೆ. ಹೀಗೆ ೮೦೦ ರೂಪಾಯಿಯ ಒಂದು ಕೆ. ಜಿ. ಸಿಲ್ಕ್ ಕೊಂಡರೆ

ಅದರಲ್ಲಿ ೧೦೦ ರೂಪಾಯಿ ಸರ್ಕಾರಕ್ಕೆ ಈ ತೆರನಾಗಿ ಬಂದಿರುತ್ತದೆ. ಎಂದರೆ ಇವತ್ತು ೧೨ ಪರ್ಸೆಂಟ್ ನಷ್ಟು ತೆರಿಗೆ ಸರ್ಕಾರಕ್ಕೆ ಕೊಡುತ್ತಿದ್ದಾನೆ. ಇದರ ಜೊತೆಗೆ ಈ ರೇಷ್ಮೆ ಉದ್ಯಮದಲ್ಲಿ ತೊಡಗಿರುವವರಿಗೆ ಕಮರ್ಶಿಯಲ್ ಟ್ಯಾಕ್ಸ್‌ನವರ ಮತ್ತು ಸ್ಕ್ವಾಡ್‌ನವರ ಹಾವಳಿ ಬೇರೆ. ರೈತರ ಈ ಉದ್ಯಮದ ಮೇಲೆ ಅವರ ಕಣ್ಣು. ಆದ್ದರಿಂದ ಇವತ್ತು ನನ್ನ ಕಳಕಳಿಯ ಮನವಿ ಇಷ್ಟೇ. ಈ ೬ ಲಕ್ಷ ಕುಟುಂಬಗಳಲ್ಲಿನ ೨೪ ಲಕ್ಷ ಜನ ಏನಿದ್ದಾರೆ, ಅವರ ಪರವಾಗಿ ಕೇಳುವುದು ಇಷ್ಟೇ. ದಯವಿಟ್ಟು ೨ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಮತ್ತು ಟ್ವಿಸ್ಟರ್ ಯಾರ ಮೇಲೆ ಪ್ರೋಸೆಸಿಂಗ್ ಸ್ಟೇಜ್‌ನಲ್ಲಿ ಏನು ಟಿ.ಓ.ಟಿ. ಹಾಕುತ್ತಿದ್ದೀರಿ ಅದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ತಾವು ಇದನ್ನು ದಯವಿಟ್ಟು ತೆಗೆದುಹಾಕಬೇಕು. ಇಷ್ಟು ಹೇಳಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಬಗ್ಗೆ ಎರಡು ಮಾತು ಹೇಳುತ್ತೇನೆ. ಇವತ್ತು ೬೧ ಸಾರ್ವಜನಿಕ ಉದ್ದಿಮೆಗಳ ಮೇಲೆ ೪ ಸಾವಿರ ಕೋಟಿ ರೂಪಾಯಿ ಬಂಡವಾಳ ಹಾಕಿದ್ದು ೧೯೮೮-೮೯ರಲ್ಲಿ ಇವುಗಳಲ್ಲಿ ೧೫೨ ಕೋಟಿ ರೂ. ನಷ್ಟವಾಗಿದೆ. ಹಿಂದೆ ನಮ್ಮ ದೇಶದಲ್ಲಿ ಜವಹರಲಾಲ್ ನೆಹರೂರವರು ೩೦-೪೦ ವರ್ಷಗಳ ಹಿಂದೆ ಬೇಸಿಕ್ ಹೆವಿ ಇಂಡಸ್ಟ್ರಿಗಳ ಮೇಲೆ, ಸ್ಟೀಲ್ ಇಂಡಸ್ಟ್ರಿ ಮೇಲೆ ಪವರ್ ಜನರೇಷನ ಸಲುವಾಗಿ ಸರ್ಕಾರದ ಹಣವನ್ನು ತೊಡಗಿಸುತ್ತಿದ್ದರು. ಈಗ ಕರ್ನಾಟಕದಲ್ಲಿ ೩೦೦ ಜನ ಐಎಎಸ್ ಅಧಿಕಾರಿಗಳಿಗೆ ಕೆಲಸ ಇಲ್ಲ ಎಂದು ಹೇಳಿ ಎಲ್ಲರಿಗೂ ಒಂದೊಂದು ಬೋರ್ಡ್ ಮಾಡುವುದು. ಚಪ್ಪಲಿಗೂ ಒಂದು ಬೋರ್ಡ್ ಮಾಡಿ ಅಲ್ಲಿಗೆ ಐಎಎಸ್ ಹಾಕುವುದು. ಸೋಪ್ ತಯಾರಿಕೆಗೆ, ಕನ್‌ಸೂಮರ್ ಪ್ರಾಡಕ್ಟ್ ತಯಾರಿಸುವುದಕ್ಕೆಲ್ಲಾ ಒಂದೊಂದು ಬೋರ್ಡ್ ಕಾರ್ಪೊರೇಷನ್ ಮಾಡಿ ಐಎಎಸ್ ಹಾಕುವುದು. ಇವತ್ತು ಯಾವುದೇ ಸಾರ್ವಜನಿಕ ಉದ್ದಿಮೆಗಳ ವರದಿ ನೋಡಿದರೆ. ಅಲ್ಲಿ ಐದಾರು ಜನ ಐಎಎಸ್ ಅಧಿಕಾರಿಗಳ ಹೆಸರು ಇರುತ್ತದೆ. ಇವತ್ತು ಈ ಉದ್ದಿಮೆಗಳಲ್ಲಿ ನಷ್ಟವಾಗುತ್ತಿದೆ ಎನ್ನುವ ಬಗ್ಗೆ ರೆಸ್ಪಾನ್ಸಿಬಲಿಟಿಯನ್ನು ಫಿಕ್ಸ್ ಮಾಡಬೇಕಾಗುತ್ತದೆ. ನಾಲ್ಕು ಸಾವಿರ ಕೋಟಿ ಬಂಡವಾಳ ಹಾಕಿ ಇಷ್ಟು ಹಣ ಕಳೆದುಕೊಳ್ಳುತ್ತಿರುವಾಗ ಈ ಬಗ್ಗೆ ಸರ್ಕಾರ ಬಹಳ ಚಿಂತನೆ ಮಾಡಬೇಕಾಗುತ್ತದೆ. ಮತ್ತೆ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಫ್ಯಾಕ್ಟರಿಗೆ ಸೇರಿದ ಐವತ್ತೂವರೆ ಎಕರೆ ಜಾಗ ಬೆಂಗಳೂರು ರೈಲ್ವೇ ಸ್ಟೇಷನ್ ಸಮೀಪ ಇದೆ. ಇವತ್ತು ಅದನ್ನು ಬಾಂಬೆಯವರಿಗೆ ಮಾರುವುದಕ್ಕೆ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಹೊರಟಿದ್ದಾರೆ. ಖಾಸಗೀಯವರಿಗೆ ಅದನ್ನು ಮಾರಲು ಹೊರಟಿದ್ದಾರೆ. ಅದು ವ್ಯಾಲ್ಯುಬಲ್ ಲ್ಯಾಂಡ್ ಇದ್ದು ಅದನ್ನು ತಾವು ಮಾರುವುದು ಬೇಡ. ಆ ಜಾಗ ರೈಲ್ವೇಸ್ಟೇಷನ್ ಸಮೀಪದ ಅಂಡರ್‌ಬ್ರಿಜ್ ಪಕ್ಕದಲ್ಲೇ ಇದೆ. ಇವತ್ತು ಈ ಎಂ.ಇ.ಐ ಫ್ಯಾಕ್ಟರಿ ಲಾಸಿನಲ್ಲಿ ಇದೆ ಈ ಫ್ಯಾಕ್ಟರಿಯನ್ನು ಬಿಹೆಚ್ಇಎಲ್‌ಗೆ ಮರ್ಜ್ ಮಾಡುವುದಕ್ಕೆ ನೆಗೋಷಿಯೇಟ್ ಮಾಡಿ. ಇವತ್ತು ಅಲ್ಲಿ ೨ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಈ ಫ್ಯಾಕ್ಟರಿಯನ್ನು ಯಾವುದೇ ಪ್ರೈವೇಟ್ ಪಾರ್ಟಿಯವರಿಗೆ ಕೊಡುವುದು ಬೇಡ. ನಮ್ಮ ಮಂಗಳೂರು ಕೆಮಿಕಲ್ ಫ್ಯಾಕ್ಟರಿಯನ್ನು ಲಪಟಾಯಿಸುವುದಕ್ಕೆ ದೊಡ್ಡ ದೊಡ್ಡ ಕಳ್ಳರು ೩ [illegible] ಪ್ರಯತ್ನಪಟ್ಟರು, ಬಹಳ ದೊಡ್ಡ ಗಣ್ಯ ವ್ಯಕ್ತಿಗಳು ದೊಡ್ಡ ದೊಡ್ಡ ಸಾಹುಕಾರರುಗಳೂ ಆದ ಟಾಟಾ, ಬಿರ್ಲಾ, ಗೋಯಂಕಾಗಳು, ಮಲ್ಯಾಗಳು ಇದನ್ನು ಲಪಟಾಯಿಸಲು ಹೊರಟಿದ್ದರು. ಈ ಸರ್ಕಾರದಲ್ಲಿ ಅದಕ್ಕೆ ದಾರಿ ಕೊಡಬೇಡಿ ಎಂದು ಹೇಳುತ್ತೇನೆ. ಈ ಫ್ಯಾಕ್ಟರಿಯನ್ನು ಇಂಪ್ರೂವ್ ಮಾಡುವುದಕ್ಕೆ ಏನಾದರು ಒಂದು ವ್ಯವಸ್ಥೆ ಮಾಡಿಕೊಡಬೇಕೆಂದು ಕೈಗಾರಿಕಾ ಇಲಾಖೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮಲ್ಲಿ ೧೨ ಲಕ್ಷ ೪೬ ಸಾವಿರ ಎಸ್‌ಎಸ್‌ಎಲ್‌ಸಿ ಮತ್ತು ಡಿಗ್ರಿ ಹಾಗೂ ಇತರೇ ಟೆಕ್ನಿಷಿಯನ್ಸ್‌ಗಳು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಯುವಕರು ಕೆಲಸಕ್ಕಾಗಿ ಕಾಯುತ್ತಿದ್ದಾರೆ. ನಾವು ಅವರಿಗೆ ಕೆಲಸ ಕೊಡಬೇಕಾಗುತ್ತದೆ. ಇವತ್ತು ಪಬ್ಲಿಕ್ ಸೆಕ್ಟರ್ ಎಂಟರ್‌ಪ್ರೈಸಸ್‌ನಲ್ಲಿ ಒಳ್ಳೆಯ ಮೇನೇಜರ್ ಇದ್ದರೆ ಲಾಭ ಮಾಡಲು ಸಾಧ್ಯ. ಒಳ್ಳೆಯ ಜನರನ್ನು ಅಲ್ಲಿಗೆ ಹಾಕಬೇಕಾದ್ದರಿಂದ ಒಳ್ಳೆಯ ಜನರನ್ನು ಇಲ್ಲಿಗೆ ಆಹ್ವಾನಿಸಲು ತಾವು ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟು, ದಕ್ಷರನ್ನು ನೇಮಕ ಮಾಡಿದರೆ ಪಬ್ಲಿಕ್ ಸೆಕ್ಟರ್‌ಗಳೂ ಲಾಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರ ಗಮನಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿದಂಥ ೬, ೯, ೪೯, ೫೪, ೮ ಮತ್ತು ೧೦ ನೇ ಸಂಖ್ಯೆಯ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ

ನನ್ನ ಒಂದೆರಡು ಅಭಿಪ್ರಾಯಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ಯುಗದಲ್ಲಿ ಸಾರ್ವಜನಿಕರ ದೈನಂದಿನ ಜೀವನ ನಡೆಯಬೇಕಾದರೆ, ಈ ವಿದ್ಯುತ್ತಿಗೆ ಮತ್ತು ಮನುಷ್ಯನಿಗೆ ಹತ್ತಿರದ ಸಂಬಂಧ ಇದೆ, ಇಷ್ಟು ಮಹತ್ವಪೂರ್ಣವಾದಂಥ ಈ ವಿದ್ಯುತ್ತಿನ ಪರಿಸ್ಥಿತಿ ನಮ್ಮ ರಾಷ್ಟ್ರದಲ್ಲಿ ಅಧೋಗತಿಗೆ ಇಳಿದಿರುವುದನ್ನು ನಾವು ಕಾಣುತ್ತಿದ್ದೇವೆ. ಮುಖ್ಯವಾಗಿ ಈಗ ರೈತರ ಬಗ್ಗೆ ಮಾತನಾಡುವುದಿದ್ದರೆ, ರೈತರು ಸಾಲ ಮಾಡಿ ಕೊಳವೆ ಬಾವಿಗಳನ್ನು ತೋಡಿ ವಿದ್ಯುತ್ ಕನೆಕ್ಷನ್‌ಗೆ ಅರ್ಜಿ ಹಾಕಿದಾಗ, ಮೂರು-ನಾಲ್ಕು ವರ್ಷಗಳಿಂದಲೂ ಅವರಿಗೆ ಕನೆಕ್ಷನ್ ಸಿಗದೇ ಇರುವುದರಿಂದ ಅವರಿಗೆ ತುಂಬಾ ಅನ್ಯಾಯವಾಗುತ್ತಿದೆ, ಇದನ್ನು ಪರಿಹಾರ ಮಾಡುವ ದೃಷ್ಟಿಯಿಂದ ರೈತರು ಅರ್ಜಿ ಹಾಕಿದನಂತರ ಜಾಸ್ತಿ ಎಂದರೆ ೨ ತಿಂಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳಬಾರದು. ಅದಕ್ಕಿಂತ ಮೊದಲೇ ಅವರಿಗೆ ಕನೆಕ್ಷನ್ ಸಿಗುವ ವ್ಯವಸ್ಥೆ ಮಾಡಬೇಕು, ಅದರೊಟ್ಟಿಗೆ ಇವತ್ತು ವಿದ್ಯುತ್ ಸೋರಿ ಹೋಗುತ್ತಿದೆ. ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾಗಿದೆ. ಸುಮಾರಾಗಿ ಇದು ನನ್ನ ಅಭಿಪ್ರಾಯದಲ್ಲಿ ೧೦–೧೫ ಪರ್ಸೆಂಟ್‌ನಷ್ಟು ಈ ವಿದ್ಯುತ್ ಸೋರಿ ಹೋಗುತ್ತಿದೆ. ಇದನ್ನು ನಿಲ್ಲಿಸಿದರೆ ಏನು ಈಗ ವಿದ್ಯುಚ್ಛಕ್ತಿ ಕೊರತೆ ಇದೆ, ಅದನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಾಗೆಯೇ ಈ ವಿದ್ಯುತ್ ಬಿಲ್ ಬಗ್ಗೆ ತುಂಬಾ ಸಮಸ್ಯೆ ಇದೆ. ಜನರಿಗೆ ಈ ವಿದ್ಯುತ್ ಬಿಲ್ ಬಗ್ಗೆ ಸಂಶಯ ಬರುವಂಥ ವಾತಾವರಣ ಇದೆ. ಇದನು ಸರಿಪಡಿಸುವ ದೃಷ್ಟಿಯಿಂದ ಪುಸ್ತಕ ಮಾಡುವಂಥ ಒಂದು ವ್ಯವಸ್ಥೆ ಮಾಡಿದರೆ ಬಹುಶಃ ಲೆಕ್ಕಪತ್ರ ನೋಡಿಕೊಂಡು ಜನರು ಹೆಚ್ಚು ಕಡಿಮೆ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ ಏನಾದರೂ ವ್ಯತ್ಯಾಸವಾದರೆ ಗೊತ್ತಾಗುತ್ತದೆ, ಇನ್ನು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ, ನಮ್ಮ ವಿಟ್ಲದಲ್ಲಿ ಒಂದು ಸಬ್ ಸ್ಟೇಶನ್ ಪ್ರಾರಂಭ ಮಾಡಬೇಕೆಂದು ಮನವಿ ಕೊಟ್ಟಿದ್ದೆ. ಆದಷ್ಟು ಬೇಗ ಇದನ್ನು ಮಾಡಿ ಮುಗಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ವಿಟ್ಲದಲ್ಲಿ ಒಂದು ವಿದ್ಯುತ್ ಕಂದಾಯ ಕಛೇರಿ ಇತ್ತು. ಇದನ್ನು ಈಗ ಬೇರೆ ಕಡೆಗೆ ಸ್ಥಳಾಂತರ ಮಾಡಿದ್ದಾರೆ. ಇದನ್ನು ವಿಟ್ಲದಲ್ಲೇ ಪ್ರಾರಂಭ ಮಾಡುವುದು ತುಂಬಾ ಅವಶ್ಯಕತೆ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳಿ, ನಮ್ಮ ಜಿಲ್ಲೆ ಮಟ್ಟಿಗೆ ಹೇಳುವುದಿದ್ದರೆ ನನ್ನ ಸ್ನೇಹಿತರಾದ ಶ್ರೀ ರಮಾನಾಥ ರೈ ಅವರು ಚೆನ್ನಾಗಿ ಹೇಳಿದ್ದಾರೆ. ಮಂಗಳೂರಿಗೆ ಒಂದು ವಿದ್ಯುತ್ ವೃತ್ತ ಕಚೇರಿಯ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ, ಈಗ ನಾವು ಸಣ್ಣ ಸಣ್ಣ ಕೆಲಸಕ್ಕೆ ಕೂಡ ಶಿವಮೊಗ್ಗಕ್ಕೆ ಹೋಗಿಬರಬೇಕಾಗಿದೆ. ಹೀಗೆ ಸಣ್ಣ ಕೆಲಸಕ್ಕೂ ಶಿವಮೊಗ್ಗಕ್ಕೆ ಹೋಗಬೇಕಾದ ದೃಷ್ಟಿಯಿಂದ ಎಲ್ಲಾ ಕೆಲಸಗಳೂ ತಡವಾಗುತ್ತಿದೆ. ಈ ದೃಷ್ಟಿಯಿಂದ ಈ ಕೆಲಸಗಳು ಅತಿಶೀಘ್ರವಾಗಿ ಅಲ್ಲಿಯ ಜನರಿಗೆ ಉಪಕಾರವಾಗುವಂತಾಗಲು ಅಲ್ಲಿ ವೃತ್ತ ಕಛೇರಿಯನ್ನು ಮಂಗಳೂರಿನಲ್ಲಿ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಭಾಗ್ಯಜ್ಯೋತಿ, ಹರಿಜನ ಕಾಲೋನಿಗಳಿಗೆ ವಿದ್ಯುತ್ ಕನೆಕ್ಷನ್ ಕೊಡುವುದು ಇತ್ಯಾದಿ, ಹೆಚ್ಚಿನ ಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು, ಇವತ್ತು ಸಣ್ಣ ಉದ್ಯಮಗಳಲ್ಲಿ ತಮಗೆ ಗೊತ್ತಿರುವಂತೆ, ಸಣ್ಣ ಉದ್ಯಮವನ್ನು ಯಾರು ಪ್ರಾರಂಭ ಮಾಡುತ್ತಾರೆ, ಬಹುಶಃ ಯಾರೂ ಕೂಡ ಇದರಿಂದ ಲಾಭ ಪಡೆಯುವುದಿಲ್ಲ. ಬಹಳ ಕಷ್ಟದಿಂದ ಸಾಲ ಮಾಡಿ ಸಣ್ಣ ಉದ್ಯಮ ಪ್ರಾರಂಭ ಮಾಡಿದ ನಂತರ ಅದರಲ್ಲಿ ನಷ್ಟ ಅನುಭವಿಸಿದ ರನ್ನೇ ಹೆಚ್ಚು ಕಾಣುತ್ತಾರೆಯೇ ಹೊರತು ಲಾಭ ಪಡೆದವರನ್ನು ತಾವು ಕಾಣುತ್ತಿಲ್ಲ. ಈ ತೊಂದರೆ ಏಕೆ ಆಗುತ್ತಿದೆ ಎಂಬುದನ್ನು ಸಂಪೂರ್ಣವಾಗಿ ತನಿಖೆ ಮಾಡಿ. ಈ ತೊಂದರೆಗಳನ್ನು ನೀಗಿಸುವ ದೃಷ್ಟಿಯಿಂದ, ಸಣ್ಣ ಉದ್ಯಮಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಒಂದು ಕಮಿಟಿ ಮಾಡಿ ಅವರ ಸಮಸ್ಯೆಗಳನ್ನು ಅಧ್ಯಯನ ಮಾಡಿ ಸರಿಯಾದ ವ್ಯವಸ್ಥೆ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಇದೇ ರೀತಿಯಲ್ಲಿ ಸಣ್ಣ ಉದ್ಯಮಗಳನ್ನು ಪೇಟೆ ಪಟ್ಟಣಗಳಲ್ಲಿ ಮಾಡುವುದಕ್ಕಿಂತ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿದರೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಸಾಮಾನ್ಯ ಜನರಿಗೆ ಉದ್ಯೋಗ ಸಿಗಲಿಕ್ಕೆ ಸಾಧ್ಯವಾಗುತ್ತದೆ. ದೊಡ್ಡ ಉದ್ಯಮಗಳ ಬಗ್ಗೆ ನಿನ್ನೆ ದಿವಸ ಶ್ರೀ ಶಿವರಾಮೇಗೌಡರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ನಾನು ಹೇಳುವುದು ಇಷ್ಟೆ. ದೊಡ್ಡ ಉದ್ದಿಮೆಗಳು ಏನು ನಷ್ಟ ಅನುಭವಿಸುತ್ತವೆ, ಅದಕ್ಕೆ ಸಂಬಂಧಪಟ್ಟ ಎಂ. ಡಿ. ಯನ್ನೇ ಹೊಣೆಗಾರರನ್ನಾಗಿ ಮಾಡಬೇಕಾಗಿದೆ. ಕೆಲವು ಜನರಿಂದ ಲಾಭ ಬರುತ್ತದೆ. ಕೆಲವು ಜನರಿಂದ ನಷ್ಟವಾಗುತ್ತದೆ ಎಂದರೆ ಅದರ ಸಂಪೂರ್ಣ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ವಿಚಾರ ಮಾಡಬೇಕೆಂದು ಹೇಳುತ್ತೇನೆ ಇನ್ನು ರೇಷ್ಮೆ ವ್ಯವಸಾಯದ ಬಗ್ಗೆ ಹೇಳಬೇಕೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯ ಜಾಸ್ತಿ ಇರುವುದು ಬಂಟ್ವಾಳ ತಾಲ್ಲೂಕಿನಲ್ಲಿ. ಅದರಲ್ಲೂ ನನ್ನ ತಾಲ್ಲೂಕಿನಲ್ಲಿ ರೇಷ್ಮೆ ವ್ಯವಸಾಯ ಈಗ

ಜನಪ್ರಿಯವಾಗುತ್ತಿದೆ. ರೇಷ್ಮೆ ವ್ಯವಸಾಯ ಸರಿಯಾದ ರೀತಿಯಲ್ಲಿ ಆಗಬೇಕಾದರೆ ನೀರಿನ ವ್ಯವಸ್ಥೆ ಬೇಕು, ಕೊಳವೆ ಬಾವಿ ಅಥವಾ ಕೆರೆ ತೋಡಿದರೆ ಅದಕ್ಕೆ ವಿದ್ಯುತ್ ಸಂಪರ್ಕ ಕೊಡುವುದು ಮತ್ತು ಸಬ್ಸಿಡಿ ಕೊಟ್ಟು ಪ್ರೋತ್ಸಾಹ ಕೊಟ್ಟರೆ ರೇಷ್ಮೆ ವ್ಯವಸಾಯ ನಮ್ಮ ಜಿಲ್ಲೆಯಲ್ಲಿ ಒಂದು ಲಾಭದಾಯಕವಾದ ಉದ್ಯಮ ಆಗಲಿಕ್ಕೆ ಸಾಧ್ಯವಿದೆ. ನನಗೆ ಕೊಟ್ಟಿರುವ ಅವಧಿಯಲ್ಲಿ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ), ಸನ್ಮಾನ್ಯ ಅಧ್ಯಕ್ಷರೇ, ನಾನು ಇಂದಿನ ಬೇಡಿಕೆಗಳ ಮೇಲೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಹಲವಾರು ಸದಸ್ಯರು ಮಾತನಾಡಿ ತಿಳಿಸಿದ್ದಾರೆ. ನನ್ನ ಕ್ಷೇತ್ರದ ಬಗ್ಗೆ ಒಂದು ಮಾತನ್ನು ಹೇಳಿದರೆ ತಾವೂ ಕೂಡ ಆಶ್ಚರ್ಯ ಪಡಬಾರದು ಎಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರ ಹೊಸನಗರ ತಾಲ್ಲೂಕು, ಹೊಸನಗರ ತಾಲ್ಲೂಕು ಸಂಪೂರ್ಣ ಮುಳುಗಡೆಯಾಗಿದೆ. ಹಿರೇಭಾಸ್ಕರ ಪ್ರಾಜೆಕ್ಟಿನಿಂದ ಮುಳುಗಡೆಯಾಗಿದೆ ಮತ್ತು ಲಿಂಗನಮಕ್ಕಿ ಪ್ರಾಜೆಕ್ಟಿನಿಂದ ಮುಳುಗಡೆಯಾಗಿ ಜನರಿಗೆ ತೊಂದರೆಯಾಗಿದೆ, ಅದೇ ರೀತಿ ಚಕ್ರಾ, ಸಾವೆಹಕ್ಲು, ವಾರಾಹಿ ಹೀಗೆ ೫-೬ ಪ್ರಾಜೆಕ್ಟ್‌ಗಳು ಒಂದೇ ತಾಲ್ಲೂಕಿನಲ್ಲಿವೆ. ಈ ತಾಲ್ಲೂಕಿನಲ್ಲಿ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಈಗಲಾದರೂ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇಲ್ಲಿ ಹಿಂದೆ ಅಧಿಕಾರಿಗಳು ಮಾಡಿರತಕ್ಕ ತಪ್ಪಿಗೆ ನಾವೆಲ್ಲರೂ ಬಲಿಯಾಗತಕ್ಕ ಒಂದು ಪ್ರಸಂಗ ಬಂದಿದೆ. ಯಾರೋ ಒಬ್ಬ ಮುಖ್ಯಸ್ಥರ ಮನೆಗೆ ವಿದ್ಯುಚ್ಛಕ್ತಿಯನ್ನು ಪಡೆದು, ಇಡೀ ಗ್ರಾಮಕ್ಕೆ ವಿದ್ಯುತ್ ವ್ಯವಸ್ಥೆ ಆಗಿದೆ ಎಂದು ಹೇಳಿ, ರಿಪೋರ್ಟ್ ಕಳುಹಿಸಿರುವುದರಿಂದ, ಇವತ್ತು ವಿದ್ಯುಚ್ಛಕ್ತಿಯನ್ನು ಹೊಸದಾಗಿ ಒದಗಿಸುವುದು ಕಷ್ಟವಾಗಿದೆ, ಆದುದರಿಂದ ಈಗಿನ ಕಾಯಿದೆ ಕಾನೂನುಗಳನ್ನು ಬಿಟ್ಟು, ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು, ನಾವು ಇಡೀ ದೇಶಕ್ಕೆ ಬೆಳಕು ಕೊಟ್ಟಿದ್ದೇವೆ. ಬಹುಶಃ ವಿಧಾನ ಸೌಧಕ್ಕೂ ಶರಾವತಿ ಪ್ರಾಜೆಕ್ಟಿನಿಂದಲೇ ವಿದ್ಯುತ್ ಬರುತ್ತಿದೆಯೆಂದು ನಂಬಿರುತ್ತೇನೆ. ಆದರೆ, ಹೊಸನಗರ ತಾಲ್ಲೂಕ್ ಕತ್ತಲೆಯಲ್ಲಿದೆ. ದೀಪದ ಬುಡದಲ್ಲಿ ಕತ್ತಲೆ ಮಾಡಿಟ್ಟಿದ್ದಾರೆ, ಹಿಂದಿನ ಸರ್ಕಾರ ಮಾಡದೇ ಇದ್ದರೂ, ಈ ಸರ್ಕಾರವಾದರೂ ಎಲ್ಲಾ ಹಳ್ಳಿಗಳಿಗೂ ವಿದ್ಯುತ್‌ನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಅನೇಕ ವರ್ಷಗಳಿಂದ ಎಲೆಕ್ಟ್ರಿಕಲ್ ಸಬ್ ಡಿವಿಜನ್ ಕೊಡಬೇಕೆಂದು ಕೇಳಿಕೊಂಡಿರುತ್ತೇನೆ. ಹೊಸನಗರ, ಸೊರಬ ತಾಲ್ಲೂಕುಗಳಿಗೆ ಸಬ್ ಡಿವಿಜನ್ ಕೊಟ್ಟಿಲ್ಲ ತಕ್ಷಣ ಕೊಡಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕೊನೇ ಹಂತದಲ್ಲಿ ಬರತಕ್ಕ ವಾರಾಹಿ ಪ್ರಾಜೆಕ್ಟ್ ಬಗ್ಗೆ ಹೈಪವರ್ ಕಮಿಟಿ ಆಗಿಲ್ಲ, ಮಾನ್ಯ ಮಂತ್ರಿಗಳು ಈ ಹೈಪವರ್ ಕಮಿಟಿಯನ್ನು ರಚನೆ ಮಾಡಿಲ್ಲ ಈ ಮೂಲಕ ಯಾವುದೇ ಪರಿಹಾರವನ್ನೂ ಕೊಟ್ಟಿಲ್ಲ. ಈ ಕೆಲಸವನ್ನು ತಕ್ಷಣ ಮಾಡಬೇಕು. ಈಗಾಗಲೇ ಮಳೆ ಜಾಸ್ತಿಯಾಗಿ, ಅದರಿಂದ ಪ್ರವಾಹವು ಜಾಸ್ತಿಯಾಗುತ್ತಿದೆ. ಯಾವ ಕಾಲದಲ್ಲಿ ಅಪಾಯ ಬರುತ್ತದೋ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ, ಇದನ್ನು ತುರ್ತುಕ್ರಮವೆಂದು ಭಾವಿಸಿ, ಈ ಬಗ್ಗೆ ತುರ್ತಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಹೆಚ್ಚು ಹೇಳಬೇಕೆಂದು ಆಸೆ ಇಟ್ಟುಕೊಂಡಿದ್ದೆ, ಆದರೆ ತಾವು ಅಷ್ಟು ಸಮಯ ಕೊಟ್ಟಿಲ್ಲ. ಈ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರನ್ನು ಜ್ಞಾಪಿಸಿಕೊಳ್ಳಬೇಕು, ಅವರು ಬಹಳ ತೀವ್ರತೆಯಿಂದ ಹೇಳಿದರು. ಏನೆಂದರೆ 'Industrialise or perish' ಎಂದು, ಈಗ ನಾನು ಬಹಳ ದುಃಖದಿಂದ ಮತ್ತು ಅನುಭವದಿಂದ ಹೇಳುತ್ತಿದ್ದೇನೆ. Enter into industry and perish ಎನ್ನುವ ಕಾಲದಲ್ಲಿ ಸೇರಿದ್ದೇವೆಂದು ಹೇಳಿದರೆ ಯಾರೂ ಇದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಇಂಡಸ್ಟ್ರೀಸ್ ಮಾಡಬೇಕೆಂದು ಹೇಳಿ ಯಾರಾದರೂ ತಜ್ಞರಾದವರು, ಯೋಗ್ಯರಾದವರು ದಕ್ಷರಾದವರು, ರಾಷ್ಟ್ರಪ್ರೇಮ ಇಟ್ಟುಕೊಂಡು, ಸಮಾಜಪ್ರೇಮ ಇಟ್ಟುಕೊಂಡು, ನಂಬಿಕೆಯಿಂದ ನಿಷ್ಠೆಯಿಂದ ಮಾಡಬೇಕೆಂದು ಹೊರಟರೆ, ಅವನು ಇಂಡಸ್ಟ್ರೀಸ್ ಮಾಡುವುದಕ್ಕಾಗುವುದಿಲ್ಲ, ಪೆಟ್ಟು ತಿನ್ನುತ್ತಾನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವಿಷಯದಲ್ಲಿ ಯುವಕರು ಬಹಳ ಜನ ನೊಂದಿದ್ದಾರೆ. ಅವರು ವಿಷಯದಲ್ಲಿ ತೀವ್ರವಾಗಿ ಸಂಬಂಧಪಟ್ಟ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನವರು, ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ವಿಷಯದಲ್ಲಿ ಯಾರು ಯಾರು ತಮ್ಮ ಕಳಕಳಿಯನ್ನು ಹೇಳುತ್ತಾರೆ, ಇವರು, ಅದನ್ನು ತೀವ್ರವಾಗಿ ಅರ್ಥಮಾಡಿಕೊಳ್ಳಬೇಕೆಂದು ನಾನಾದರೂ ಹೇಳುತ್ತೇನೆ, ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್ ಕೇವಲ ಅಡ್ಮಿನಿಸ್ಟ್ರೇಟರ್ ರೂಪದಲ್ಲಿ, ರೂಪರೇಷೆಯಲ್ಲಿ, ಸರ್ಕಾರದ ಪಾಲಿಸಿ ಏನಿದೆ, ಆ ಪಾಲಿಸಿ ನಿಯಮದ

ಪ್ರಕಾರ ಹೋಗಬೇಕೆಂಬ ಭಾವನೆ ಇದ್ದರೆ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಸಾಧ್ಯವಿಲ್ಲ. ಯಾವ ರೀತಿ ಒಬ್ಬ ಪ್ರಾಧ್ಯಾಪಕ, ಒಂದು ಕಾಲೇಜಿನಲ್ಲಿ ಸರಿಯಾದ ರೀತಿಯಲ್ಲಿ ಪಾಠಪ್ರವಚನಗಳನ್ನು ಹೇಳಿಕೊಟ್ಟರೆ ಮುಂದೆ ಒಳ್ಳೆಯ ಪ್ರೊಫೆಸರ್ ಆಗುತ್ತಾನೋ, ಹಾಗೆಯೇ ಈ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟನ್ನು ಯಾರು ಮ್ಯಾನೇಜ್ ಮಾಡುತ್ತಾರೆ, ಅವರು ಈ ಜನಕ್ಕೆ ಮತ್ತು ಈ ಸಮಾಜಕ್ಕೆ ಈ ಕೈಗಾರಿಕೆಗಳಿಂದ ಸಹಾಯವಾಗುತ್ತದೆ ಎಂಬತಕ್ಕ ಒಂದು ಮಿಷನರಿ ಜೀಲ್ ಇಟ್ಟುಕೊಂಡು ಕೆಲಸ ಮಾಡಬೇಕು. ಇವತ್ತು ಈ ರೀತಿಯ ಮಿಷನರಿ ಜೀಲ್ ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಫೈನಾನ್ಷಿಯಲ್ ಕಾರ್ಪೊರೇಷನ್ ಆಗಿರಲಿ, ಐ. ಡಿ. ಬಿ. ಆಗಿರಲಿ ಬ್ಯಾಂಕಿನವರಾಗಿರಲಿ, ಬೇರೆ ಯಾವುದೇ ಒಂದು ಕ್ಷೇತ್ರ, ಹಣಕಾಸು [illegible] ಮಾಡುವ [illegible] ಒಂದು ವಿಭಾಗ ಇದೆ ಅವರೂ ಒಂದು ಮಿಷನರಿ ಜೀಲ್ ಇಟ್ಟುಕೊಂಡು ಹಣವನ್ನು ಒದಗಿಸಿಕೊಡಬೇಕು. ಮತ್ತು ಒದಗಿಸಿಕೆ [illegible] ಸಮರ್ಪಕವಾಗಿ, ಪ್ರಯೋಜನ ಆಗಬೇಕೆಂಬ ರೀತಿಯಲ್ಲಿ ಸೌಕರ್ಯ ಆಗಬೇಕೆಂಬ ರೀತಿಯಲ್ಲಿ, ಸಾರ್ಥಕವಾಗುವ ರೀತಿಯಲ್ಲಿ ಸಮಗ್ರವಾಗಿ ಸಹಾಯ ವಾಗುವ ರೀತಿಯಲ್ಲಿ ಹಣವನ್ನು ಒದಗಿಸಿಕೊಡಬೇಕಾಗಿದೆ. ಅದನ್ನು ಬಿಟ್ಟು [illegible] ಸ್ಟ್ಯಾಟಿಸ್ಟಿಕ್ಸ್ [illegible] ಮಾಡಬೇಕಾದ ಎಷ್ಟು ರೀತಿಯಲ್ಲಿ ಯಾರೇ ಇಂಡಸ್ಟ್ರೀಸ್ ಮಾಡಬೇಕೆಂದು ಅನುಮತಿ ಕೊಟ್ಟರೆ, ಆ ಇಂಡಸ್ಟ್ರೀಸೂ ಹೋಗುತ್ತದೆ. ಅದನ್ನು [illegible] ಎಂಟರ್‌ಪ್ರೆನರ್ ಹೋಗುತ್ತಾನೆ ಹಣವೂ ಹೋಗುತ್ತದೆ. [illegible] ಒಂದು [illegible] ಯಲ್ಲಿ ತೀವ್ರವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಒಂದು ಮಾತನ್ನು [illegible]ತ್ತೇನೆ. [illegible] ಯಾರಾದರೂ ಒಳ್ಳೆಯ [illegible] ಆಗಿ ಟೆಕ್ನಿಕಲ್ [illegible] ಇಟ್ಟುಕೊಂಡು, [illegible] ಟೆಕ್ನಾಲಜಿ [illegible] ಬೇಕೆಂದು, ಇಂಡಸ್ಟ್ರಿ [illegible] ಇದ್ದರೆ [illegible] ಸಮಗ್ರವಾಗಿ [illegible] [illegible] ಯಾರ [illegible], "[illegible] don't encourage any body who is hon[illegible] who is intelligent [illegible] who is patriotic who is sincere and w[illegible] to do [illegible] we don't have a department which will encourage [illegible] kind of an industry, ಅವರೆ [illegible] ಈ ಕೆಲಸ [illegible] ಪ್ರೋತ್ಸಾಹ ಕೊಡುತ್ತಿಲ್ಲ. ಅದರಿಂದ [illegible] ಹೇಳುತ್ತೇನೆ. [illegible] ತ್ತೇನೆ. ಇಂಡಸ್ಟ್ರೀಸ್ ಮಾಡ[illegible] ಆದನ್ನು ಮಾಡದೇ. [illegible] ಇಲ್ಲ [illegible] ಒಂದು [illegible] ತೊಂದರೆ

(MR. Deputy Speaker in the Chair)

ಯಾವುದೇ [illegible] ಎಂಟರ್‌ಪ್ರೈಸಸ್ ಬರುತ್ತದೆ. [illegible] ದೆ, ಎಂದು ಯೋಚನೆ ಮಾಡ[illegible] ರಿಸೋರ್ಸ್[illegible]

ಇಲ್ಲ [illegible] ಹೇಳುತ್ತೇನೆ. ನಮ್ಮಲ್ಲಿ [illegible] ಬಂದಿದ್ದರೆ, [illegible] ಮಾಡುತ್ತಾರೆ [illegible] ಹೇಳುತ್ತೇನೆ. [illegible] ಗೋಸ್ಕರ ಏನೋ ಕೊಡುತ್ತಾರೆ, [illegible] ಕೊಡುವುದಿಲ್ಲ [illegible] ಮಾತನ್ನು ಹೇಳುತ್ತೇನೆ. ಈಗ [illegible] ಈ ರೀತಿ ಕೈಗಾರಿಕೆಗಳು ಬರುತ್ತಿವೆ ಎಂಬ ರೀತಿಯಲ್ಲಿ ಅಂಕಿ ಅಂಶಗಳನ್ನು ಕೊಡಬೇಕೆಂಬ ರೀತಿಯಲ್ಲಿ ಮಾಡುತ್ತಿದ್ದಾರೆ, ತಾವು ಈ ರೀತಿ ಬಂದಿರುವ ಕೈಗಾರಿಕೆಗಳ ಒಂದು ಲಿಸ್ಟ್ ಮಾಡಿ ಈ ಸಭೆಗೆ ಕೊಟ್ಟು ಅದರ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ, ಯಾವ ಇಂಡಸ್ಟ್ರೀಸ್ ಎಷ್ಟರಮಟ್ಟಿಗೆ

ಬಂದಿದೆ, ಎಷ್ಟು ಯೂನಿಟ್ ಪ್ರಾರಂಭ ಮಾಡಿದ್ದಾರೆ ಎಷ್ಟು ಯೂನಿಟ್ ಉಳಿದುಕೊಂಡಿದೆ, ಎಷ್ಟು ಯೂನಿಟ್‌ನಲ್ಲಿ ಪ್ರೊಡಕ್ಷನ್ ಆಗಿದೆ, ಎಷ್ಟು ಯೂನಿಟ್‌ನಲ್ಲಿ ಎಂಪ್ಲಾಯ್‌ಮೆಂಟ್ ಮಾಡಿಕೊಂಡಿದ್ದಾರೆ ಎಷ್ಟು ಯೂನಿಟ್‌ನ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿ ಹೊಂದಿದೆ ಎಂಬ ಮಾತನ್ನು ಯಾರು ಬೇಕಾದರೂ ಹೇಳುವುದಕ್ಕಾಗುತ್ತದೆ. ಆದುದರಿಂದ ನಿಮ್ಮ ಕಣ್ಣಿಗೆ ಮಣ್ಣೆರೆಚುವ ರೀತಿಯಲ್ಲಿ ಒಂದು ಸಾವಿರ ಯೂನಿಟ್ ಏರ್ಪಾಡು ಮಾಡಿದ ಮಾತು ಏನಿದೆ ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಇನ್ನೊಂದು ವಿಚಾರ ಎಂದರೆ. ಲೋಕಲ್ ಆಗಿ ಇರುವ ಎಂಟರ್‌ಪ್ರೈಸರ್ಸ್‌ಗೆ ಪ್ರೋತ್ಸಾಹ ಕೊಡುತ್ತೀರಿ. ಅವರಿಂದ ಉತ್ಪಾದನೆ ಆದುದನ್ನು ಸಪ್ಲೈ ಮಾರ್ಕೆಟಿಂಗ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ. ಅದರಲ್ಲೂ ರಾಜ್ಯ ಸರ್ಕಾರದ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಅದನ್ನು ಸಪ್ಲೈ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರಲ್ಲೂ ಕೂಡಾ ಮೋಸ ಏನಾಗುತ್ತದೆ ಎಂದರೆ ಬೇರೆ ಬೇರೆ ರಾಜ್ಯದಲ್ಲಿ ಏನು ತಯಾರಾಗುತ್ತದೆ ಅದು ಕರ್ನಾಟಕದಲ್ಲೇ ತಯಾರಾಗುತ್ತಿದೆ ಎಂದು ನಮ್ಮ ಹೆಸರು ಕೊಟ್ಟು ಇಲ್ಲೇ ಒಂದು ಇನ್‌ವಾಯ್ಸ್ ಮಾಡಿ- ಆ ಒಂದು ಪದಾರ್ಥಗಳನ್ನು ನಮ್ಮ ರಾಜ್ಯ ಸರಕಾರದವರಿಗಾಗಲೀ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗಾಗಲೀ ಸಪ್ಲೈ ಮಾಡುವ ಕೆಲಸ ಆಗುತ್ತಿದೆ. ಇದು ತಿಳಿಯದೆಯೋ ಅಥವಾ ತಿಳಿದೂ ತಿಳಿದೂ ಅನ್ಯಾಯವಾಗುತ್ತಿವೆ ಲೋಕಲ್ ಎಂಟರ್ ಪ್ರೈಸರ್ಸ್‌ಗೆ ಇದರಿಂದ ಅನುಕೂಲ ಆಗುತ್ತಿಲ್ಲ. ಲೋಕಲ್ ಆಗಿ ಯಾವುದನ್ನು ಉತ್ಪಾದನೆ ಮಾಡಬೇಕಾಗಿದೆ. ಅದಕ್ಕೆ ಸೂಕ್ತವಾದ ಕಾರ್ಖಾನೆಗಳನ್ನು ಎಸ್ಟಾಬ್ಲಿಷ್ ಮಾಡುತ್ತಿಲ್ಲ. ಇದನ್ನು ಮಾಡದೇ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಆಗುತ್ತದೆ, ಇಂಡಸ್ಟ್ರಿಯಲ್ ಪ್ರೋಗ್ರೆಸ್ ಆಗುತ್ತದೆ. ಎಂಪ್ಲಾಯ್‌ಮೆಂಟ್ ಜನರೇಷನ್ ಆಗುತ್ತದೆ, ಎಂದು ಏನಾದರೂ ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ನಾನು ಪ್ರಾರಂಭದಲ್ಲಿಯೇ ಹೇಳಿದೆ ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಹೇಗೆ ಇದೆ ಎಂದು ನಮ್ಮಲ್ಲಿ ಒಂದು ಒಳ್ಳೆಯ ಮೆಷಿನರಿ ಜೀಲ್ ಇಟ್ಟುಕೊಂಡು ನಾವು ಕೆಲಸ ಮಾಡಬೇಕಾಗುತ್ತದೆ ಇಲ್ಲಿ ಒಂದು ಪ್ರಚಂಡವಾದ ಶಿಸ್ತು ಇರಬೇಕು. ಒಂದು ಟೀಮ್ ಸ್ಪಿರಿಟ್ ಇರಬೇಕು ಒಳ್ಳೆಯ ಕೋ ಆರ್ಡಿನೇಶನ್ ಇರಬೇಕು. ಒಳ್ಳೆಯ ವಾತಾವರಣ ಈ ಡಿಪಾರ್ಟ್‌ಮೆಂಟ್‌ನಲ್ಲಿ ಇರಬೇಕು. ಆದರೆ ಈ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇವು ಯಾವುವೂ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ನನ್ನ ಒಂದು ಸ್ವಂತ ಅನುಭವದಿಂದ ಮತ್ತು ಕೆಲವು ಜನ [illegible] ಇತರರ ಅನುಭವದಲ್ಲಿ ಮತ್ತು ಯುವಕರ ಅನುಭವದಲ್ಲಿ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇಲ್ಲಿ ಏನಾಗಿದೆ ಎಂದರೆ ಹಿಂದಿನ ಸರ್ಕಾರದಲ್ಲಿ ಯಾವುದೋ ಒಂದು ಹೆಸರಿನಲ್ಲಿ [illegible] ಇಂಡಸ್ಟ್ರೀಸ್ ಕ್ರಿಯೇಟ್ ಮಾಡಿ ಜಾತಿಯ ಹೆಸರಿನಲ್ಲಿ [illegible] ಹೆಸರಿನಲ್ಲಿ ಪ್ರೆಸಿಡೆಂಟ್ [illegible] ಅಪಾಯಿಂಟ್ ಮಾಡಿ ಅಲ್ಲಿ ಕೆಲಸ ಮಾಡುವವರಿಗೆಲ್ಲಾ ಒಂದು ರೀತಿಯಲ್ಲಿ ಫ್ರಸ್ಟ್ರೇಷನ್ ಆಗುತ್ತಿದೆ. ಇದರಿಂದ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲವಾಗಿದೆ. ಮುಖ್ಯವಾಗಿ ಒಂದು [illegible] ದರ್ಶನ ಮತ್ತು ಒಂದು ಶಿಸ್ತು ಇರಬೇಕಾಗುತ್ತದೆ. ಆ ಒಂದು ಶಿಸ್ತು ಇದ್ದು ದೊಡ್ಡವನಲ್ಲಿ [illegible] ಇರಬೇಕಾಗುತ್ತದೆ ಆದರೆ ಅದು ಈ ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲವೇ ಇಲ್ಲ. ಇದನ್ನು ತಾವು ಸರಿ ಮಾಡಬೇಕಾಗುತ್ತದೆ. ಈ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರತಿಯೊಂದು ಹಂತದಲ್ಲೂ ಶಿಸ್ತು ಅನ್ನು ಮೂಡಿಸಬೇಕಾಗುತ್ತದೆ, ಈ ಡಿಪಾರ್ಟ್‌ಮೆಂಟ್ ಯಾವುದು ಇದೆ ಇಲ್ಲಿ ನೇರವಾಗಿ ಇಲ್ಲದಿದ್ದರೂ ಸಹ ಪರೋಕ್ಷವಾಗಿ ಆದರೂ ನಿಯಂತ್ರಣ ಇಟ್ಟು ಕೊಳ್ಳಬೇಕಾಗುತ್ತದೆ. ಈ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಿಂದ ಜನರಿಗೆ ಎಷ್ಟು ಸೌಲಭ್ಯ ಸಿಕ್ಕಿ ಅವರು ಸಫಲ್ಲವಾಗಬೇಕಾಗಿತ್ತೋ ಅಷ್ಟು ಆಗದೆ ವಿಫಲರಾಗಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಅನೇಕ ಜನ ತಾಂತ್ರಿಕ ತಜ್ಞರು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕಷ್ಟು ಜನರು ಇದ್ದಾರೆ, ಅಂತಹವರನ್ನು ಸರಿಯಾದ ರೀತಿಯಲ್ಲಿ ಗುರುತಿಸಿ ಅವರ ಅನುಭವವನ್ನು ಪಡೆದುಕೊಂಡು ಅಂತಹವರನ್ನು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಇರುವಂತಹ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ಗಳಿಗೆ ಹಾಕಿ ಅವರ ಅನುಭವವನ್ನು ಯಾವ ರೀತಿಯಿಂದ ಸದುಪಯೋಗ ಮಾಡಿಕೊಳ್ಳಬೇಕೋ ಆ ರೀತಿ ಸದುಪಯೋಗ ಮಾಡಿ ಕೊಂಡಿಲ್ಲ. ಅಂತಹವರಿಗೆ ಕಾಲ ಕಾಲಕ್ಕೆ ಸರಿಯಾಗಿ ಪ್ರಮೋಷನ್ ಕೊಡಬೇಕು. ಅವರಿಗೆ ಪ್ರಮೋಷನ್ ಅನ್ನು ಸೂಕ್ತ ಕಾಲದಲ್ಲಿ ಕೊಟ್ಟರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿರುವವರಿಗೆ ಇರುವಂತಹ ಅತೃಪ್ತಿ ಹೋಗಿ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಒಳ್ಳೆಯ ಪ್ರೋಗ್ರೆಸ್ ಆಗುತ್ತದೆ ಮತ್ತು ನಮ್ಮ ಎಕಾನಮಿ ಬಿಲ್ಡಪ್ ಆಗಲು ಸಾಧ್ಯವಾಗುತ್ತದೆ ಎಂದು ಹೇಳಿ ಇದುವರೆಗೂ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣಿಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.